ದೇಸಿ ಕೃಷಿ ಜ್ಞಾನ

ಸಂಪುಟ 10

# ಕುರಿ ಸಾಕಣೆ

ದನಕುರಿ ಬದುಕು

ಡಾ. ಸಿ.ಎಸ್. ರಘುಪತಿ



ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

# ದನಕುರಿ ಬದುಕು

ಡಾ॥ ಸಿ.ಎಸ್. ರಘುಪತಿ

ಕರ್ನಾಟಕ ಸರ್ಕಾರ

ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

**DhanaKuri Baduku** by **Dr. C. S. Ragupathi,** Published by **Ashok N. Chalawadi,** Administrative Officer, Kannada Pustaka Pradhikara, Kannada Bhavana, J.C. Road, Bangalooru-560 002.

© ಈ ಆವೃತ್ತಿಯ ಗ್ರಂಥಸ್ವಾಮ್ಯ – ಕನ್ನಡ ಪುಸ್ತಕ ಪ್ರಾಧಿಕಾರ

ಮೊದಲ ಮುದ್ರಣ: ೨೦೦೮
ಪುಟಗಳು : xvi + ೯೨
ಬೆಲೆ : ರೂ. ೩೫/-
ಪ್ರತಿಗಳು : ೧೦೦೦

© Author :
Print : 2008
Page : xvi + 92
Price : Rs. 35/-
Copies : 1000
ISBN : 81-7713-244-X

ಪ್ರಕಾಶಕರು
**ಅಶೋಕ ಎನ್. ಚಲವಾದಿ**
ಆಡಳಿತಾಧಿಕಾರಿಗಳು
ಕನ್ನಡ ಪುಸ್ತಕ ಪ್ರಾಧಿಕಾರ
ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು-೫೬೦ ೦೦೨

ಮುಖಪುಟ ವಿನ್ಯಾಸ : ಎಂ.ಎಸ್. ಮೂರ್ತಿ
ಕರಡು ತಿದ್ದಿದವರು : ಡಾ|| ಸಿ.ಎಸ್. ರಘುಪತಿ

*ಅಕ್ಷರ ಜೋಡಣೆ :*
ಇಳಾ ಮುದ್ರಾ
ಬೆಂಗಳೂರು-೫೬೦ ೦೨೬, ದೂ: ೨೬೭೫೬೭೧೫೯

*ಮುದ್ರಕರು :*
ರಾಜಾ ಪ್ರಿಂಟರ್ಸ್
ನಂ. ೫೯, ೪ನೇ ಕ್ರಾಸ್, ಲಾಲ್‌ಬಾಗ್ ರಸ್ತೆ
ಬೆಂಗಳೂರು-೫೬೦ ೦೨೭, ದೂ: ೨೨೨೨೪೮೦೬೬

ಪ್ರಧಾನ ಸಂಪಾದಕರು

ಪ್ರೊ. ಎಸ್.ಜಿ. ಸಿದ್ಧರಾಮಯ್ಯ

ಸಂಪಾದಕ ಸಲಹಾ ಮಂಡಳಿ

ಶ್ರೀ ಪಂಡಿತಾರಾಧ್ಯ ಶಿವಚಾರ್ಯ ಸ್ವಾಮಿಗಳು
ನಾಗೇಶ್ ಹೆಗಡೆ
ಡಾ. ಕೆ. ಪುಟ್ಟಸ್ವಾಮಿ
ಡಾ. ಕೆ.ವೈ. ನಾರಾಯಣಸ್ವಾಮಿ
ಭರಮಗೌಡ
ಜಿ. ನಾರಾಯಣರೆಡ್ಡಿ

ಶ್ರೀ ಹೊರೆಯಾಲ ದೊರೆಸ್ವಾಮಿ ಡಾ. ಕಾಶಿನಾಥ ಅಂಬಲಗಿ
ಡಾ. ಶರಣಮ್ಮ ಗೊರೆಬಾಳ ಶ್ರೀಮತಿ ಶೀಲಾ ತಿವಾರಿ



ಪ್ರಕಾಶಕರು

ಶ್ರೀ ಅಶೋಕ ಎನ್. ಚಲವಾದಿ
ಆಡಳಿತಾಧಿಕಾರಿಗಳು


ಲೇಖಕರು

| | | |
|---|---|---|
| ೧. | ಮಣ್ಣು ಮತ್ತು ನೀರು | ಶ್ರೀಪಡ್ರೆ |
| ೨. | ಅರಣ್ಯ | ಶಿವಾನಂದ ಕಳವೆ |
| ೩. | ಬೀಜ | ಕೃಷ್ಣಪ್ರಸಾದ್ |
| ೪. | ಆಹಾರ / ಆರೋಗ್ಯ | ಬಿ.ಎಸ್. ಸೋಮಶೇಖರ್ |
| ೫. | ಕೃಷಿ ಆಚರಣೆ | ಮಲ್ಲಿಕಾರ್ಜುನ ಹೊಸಪಾಳ್ಯ |
| ೬. | ಕೃಷಿ ಉಪಕರಣಗಳು | ಗಾಣದಾಳು ಶ್ರೀಕಂಠ |
| ೭. | ನಿರ್ಮಾಣ ಕಲೆ | ಆನಂದತೀರ್ಥ ಪ್ಯಾಟಿ, ನರೇಂದ್ರ ರೈ ದೇರ್ಲ |
| ೮. | ಕೀಟ / ರೋಗ | ವಿಜಯ ಅಂಗಡಿ |
| ೯. | ಜಾನುವಾರು | ಡಾ. ಎಂ. ನಾರಾಯಣಸ್ವಾಮಿ |
| ೧೦. | ಕುರಿಸಾಕಣೆ | ಡಾ. ಸಿ.ಎಸ್. ರಘುಪತಿ |
| ೧೧. | ತೋಟಗಾರಿಕೆ | ಪೂರ್ಣಪ್ರಜ್ಞ ಬೇಳೂರು |

## ಅಧ್ಯಕ್ಷರ ಮಾತು

●

**ಭಾ**ರತ ಕೃಷಿ ಪ್ರಧಾನವಾದ ದೇಶವೆಂಬುದು ಹಿಂದೆ ಇದ್ದ ಖ್ಯಾತಿ. ಈಗ ಈ ಖ್ಯಾತಿ ಬಹುತೇಕ ಕಳೆದು ಹೋಗಿದೆ. ಅದರಲ್ಲೂ ಜಾಗತೀಕರಣದ ಮಾಯಾ ಜಾಲಕ್ಕೆ ಒಳಗಾಗುತ್ತಿರುವ ಇಂದಿನ ಜೀವನ ಗತಿಯಲ್ಲಿ ಕೃಷಿಯೆಂಬುದು ಕೈಸುಟ್ಟುಕೊಳ್ಳುವ ಕರ್ಮಕಾಂಡವಾಗಿದೆ. ಕೃಷಿಕಾಯಕವನ್ನೂ ಬಿಡಲೂ ಆಗದ, ಕಟ್ಟಿಕೊಳ್ಳಲೂ ಆಗದ ಸಂದಿಗ್ಧದಲ್ಲಿ ರೈತನ ಬದುಕು ಡೋಲಾಯ ಮಾನವಾಗಿದೆ. ಇದಕ್ಕೆ ಕೇವಲ ಜಾಗತೀಕರಣದ ವಿದ್ಯಮಾನಗಳು ಮಾತ್ರ ಕಾರಣವಲ್ಲ; ಇದಕ್ಕೂ ಮುನ್ನ ಹಸಿರು ಕ್ರಾಂತಿಯ ಯೋಜನೆ ಕೃಷಿ ನೆಲವನ್ನು ಬಂಜೆ ಯಾಗಿಸುವಲ್ಲಿ ಸಾಕಷ್ಟು ಪಾತ್ರ ವಹಿಸಿದೆ. ಅಧಿಕ ಇಳುವರಿಯ ಮೋಹಕ್ಕೆ ಬಿದ್ದು ಕೃಷಿಯನ್ನು ಕೈಗಾರಿಕೋದ್ಯಮಿಗಳ ಕೈಗೊಂಬೆ ಯಾಗಿಸುವಲ್ಲಿ ನಮ್ಮ ಆಧುನಿಕ ಕೃಷಿಪಂಡಿತರು ತುಂಬಾ ಯಶಸ್ವಿಯಾಗಿದ್ದಾರೆ. ಆಧುನಿಕ ಕೃಷಿಯ ಪರಿಣಾಮವಾಗಿ ಪಶುಪಾಲನೆ ನಾಶವಾಯಿತು. ಕೃಷಿಗೆ ಅಂಟಿಕೊಂಡಂತೆ ಗ್ರಾಮ ಸಂಸ್ಕೃತಿಯನ್ನು ಸಮೃದ್ಧಗೊಳಿಸುತ್ತಿದ್ದ ಗುಡಿಕೈಗಾರಿಕೆಗಳು

ನಾಶವಾದವು. ನೆಲದ ಜೀವಸತ್ವ ಹಾಳಾಯಿತು, ನಿಸರ್ಗದ ಜೀವಸರಪಳಿ ಸಾಕಷ್ಟು ಹಾನಿಗೀಡಾಯಿತು. ಗುಂಡು ತೋಪುಗಳು ಇಲ್ಲವಾದವು. ಕೆರೆ ಕಟ್ಟೆ ಕುಂಟೆ ಬೆಂಚೆ ಪೆಂಚೆ ತಲಪರಿಗೆಗಳು ಕಣ್ಮರೆಯಾದವು. ಇವುಗಳು ಕೇವಲ ನೀರು ಸಂಗ್ರಹ ತಾಣಗಳಾಗಿ ಇರಲಿಲ್ಲ. ಜೀವ ಸಂಕುಲಗಳ ಬದುಕಿನ ಜೀವನಾಡಿ ಗಳಾಗಿದ್ದವು. ಇದೆಲ್ಲವನ್ನೂ ಪ್ರಗತಿಯೆನ್ನುವುದಾದರೆ ಇಂಥ ಪ್ರಗತಿಯನ್ನು ನಿಸರ್ಗ ವಿರೋಧಿಯೆನ್ನದೆ ವಿಧಿಯಿಲ್ಲ. ನಮ್ಮ ಜನಪದರಿಗೆ ಕೃಷಿ ಎಂಬುದು ಕೇವಲ ಹೊಟ್ಟೆಪಾಡಿನ ದಂಧೆಯಾಗಿರಲಿಲ್ಲ. ಅದೊಂದು ಸಂಸ್ಕೃತಿಯಾಗಿತ್ತು. ಅದು ಮನುಷ್ಯನ ಬದುಕಿಗೆ ಮಾತ್ರ ಸೀಮಿತವಾಗಿದ್ದ ಕಸುಬಾಗಿರಲಿಲ್ಲ. ನಿಸರ್ಗ ಧರ್ಮವನ್ನು ಗೌರವಿಸಿದಂತೆ ಕಟ್ಟಿಕೊಂಡ ಕಾಯಕವಾಗಿತ್ತು. ಆದ್ದರಿಂದಲೇ ಸಾವಿರಾರು ವರ್ಷಗಳಿಂದ ಕೃಷಿಯನ್ನು ಜೀವನ ಧರ್ಮವಾಗಿಸಿಕೊಂಡು ಬಂದಿದ್ದ ನಮ್ಮ ಜನಪದಕ್ಕೆ ಕೃಷಿ ಒಂದು ನೆಲಮೂಲ ವಿಜ್ಞಾನ ಇಂದು ಕಳೆದುಹೋಗುತ್ತಿದೆ. ಆಧುನಿಕ ಕೃಷಿ ಪಂಡಿತರ ಹಾಗೂ ಕೃಷಿಯಾಧಾರಿತ ಕೈಗಾರಿಕೋದ್ಯಮಿಗಳ ಹುನ್ನಾರದಲ್ಲಿ ಅದು ಕಡೆಗಣನೆಗೆ ಒಳಗಾಯಿತು. ಬೃಹತ್ತಿನ ಭ್ರಮೆಯಲ್ಲಿ ಕನಸಿದ ನಮ್ಮ ರಾಜಕೀಯ ಆರ್ಥಿಕ ನೀತಿ ಈ ನೆಲಮೂಲ ಜ್ಞಾನವನ್ನು ಸಂಪೂರ್ಣವಾಗಿ ಉಪೇಕ್ಷಿಸಿತು. ಅಧಿಕ ಇಳುವರಿಗೆ ಮೋಹಿತನಾದ ರೈತ ಕೈಗಾರಿಕೋದ್ಯಮಿಗಳ ತಾಳಕ್ಕೆ ಹೆಜ್ಜೆ ಹಾಕಿದ. ಭೂ ಅಭಿವೃದ್ಧಿಯ ಹೆಸರಿನ ಬ್ಯಾಂಕುಗಳ ರೈತನ ಭೂಮಿಕಾಣಿಯನ್ನು ಅಡವಿಟ್ಟುಕೊಂಡು ಸಾಲಕೊಟ್ಟವು. ಸಾಲ ಪಡೆದ ರೈತ ಬೋರು ಕೊರೆಸಿದ, ತಂತಿಬೇಲಿ ಹಾಕಿದ. ಸಿಕ್ಕ ನೀರಿಗೆ ಸಂಭ್ರಮಿಸಿದ. ಒಂದು ಬೋರು ಹೋಗಿ ನೂರಾರು, ಸಾವಿರಾರು ಆಗಿ ಅಂತರ್ಜಲ ಮಟ್ಟ ಪಾತಾಳಕ್ಕಿಳಿಯಿತು. ಕುಡಿಯುವ ನೀರಿಗೆ ತತ್ವಾರವಾದ ದುಸ್ಥಿತಿಯನ್ನು ರೈತ ತನ್ನ ಮನೆ ಬಾಗಿಲಿಗೆ ಆಹ್ವಾನಿಸಿದ. ಸಾಲ ಕೊಟ್ಟ ಬ್ಯಾಂಕುಗಳು ಬಡ್ಡಿಗೆ ಬಡ್ಡಿ ಸೇರಿಸಿ ಅದನ್ನು ಅಸಲಾಗಿ ಪರಿವರ್ತಿಸಿ ಸುಸ್ತಿಯ ಸುಳಿಗೆ ಸಿಕ್ಕಿಸಿ ರೈತನನ್ನು ಆತ್ಮಹತ್ಯೆಗೆ ಶರಣಾಗುವಂತೆ ಮಾಡಿದುವು. ಹಿಂದೆ ಎಂಥ ಬರದಲ್ಲೂ ರೈತ ತನ್ನ ಆತ್ಮವಿಶ್ವಾಸ ಕಳೆದುಕೊಂಡಿರಲಿಲ್ಲ. ಸಾಲ ತೀರಿಸಲಾರದ್ದಕ್ಕೆ ಸಾವಿಗೆ ಶರಣಾಗುವ ದುರ್ಬಲ ಮನಸ್ಥಿತಿಗೆ ಎಂದೂ ಈ ಪ್ರಮಾಣದಲ್ಲಿ ಇಳಿದಿರಲಿಲ್ಲ. ಇಂದು ಹಳ್ಳಿಗಳಲ್ಲಿ ದುಡಿಯುವ ಯುವಕರ ಪಡೆ ಉಳಿದಿಲ್ಲ. ನಗರದ ಗಾರ್ಮೆಂಟ್ಸ್‌ಗಳಲ್ಲಿ ಸಿಕ್ಕುವ ಮಾಸಿಕ ಎರಡು ಮೂರು ಸಾವಿರ ರೂಪಾಯಿಗಳ ಜೀತಕ್ಕೆ ಸೇರಿದ್ದಾರೆ. ಗುಟ್ಕಾ ಸಾರಾಯಿಗಳ ದುಶ್ಚಟಗಳಿಗೆ ಬಲಿಯಾಗಿದ್ದಾರೆ. ಕಾರಣ ಬಿಡುವಿಲ್ಲದ ದುಡಿತದ ನಡುವೆ ಅವರಿಗೆ ಬಿಡುಗಡೆ ಕೊಡುವ ಚಟಗಳು ಇವಾಗಿವೆ. ಇವುಗಳ ಜೊತೆಗೆ ಮಚ್ಚು ಲಾಂಗುಗಳ ಉಪ್ಪಿ ಶಿವು ನಾರಾಯಣರು ಅವರನ್ನು ಸಿನಿಮಾ ಎಂಬ ಭ್ರಾಮಕ ಲೋಕದಲ್ಲಿ ಉದ್ರೇಕಿಸುತ್ತಿದ್ದಾರೆ. ಇಂದು ನಮ್ಮ ಹಳ್ಳಿಗಳಲ್ಲಿ ಉಳಿದಿರುವವರು ಮುದುಕರು ಕೈಲಾಗದವರು ಹಾಗೂ ಮಕ್ಕಳು. ಇವರ ಜೊತೆಗೆ ಕಳ್ಳುಬಳ್ಳಿಯ ಮೋಹಕ್ಕೆ ಬಿಡಲಾರದ ಬಂಧದಲ್ಲಿ ಅಲ್ಲಿಯೇ ಉಳಿದಿರುವವರು. ಹಬ್ಬ ಹರಿದಿನಗಳ ಸಂಭ್ರಮದಲ್ಲಿ ಪಾಲ್ಗೊಳ್ಳಲು ಮಾತ್ರ ನಗರಕ್ಕೆ ಹೋದ ಹುಡುಗರು ಹಳ್ಳಿಗಳಿಗೆ ಬರುತ್ತಿದ್ದಾರೆ. ಮಿಕ್ಕಂತೆ ಹಳ್ಳಿಗಳ ಬೀದಿಗಳು ಬಿಕೋ ಎನ್ನುತ್ತಿದೆ. ಕೃಷಿಕಾಯಕದಿಂದ ದೂರವಾಗುತ್ತಿರುವ ಹಳ್ಳಿಗಳ ಭೂಮಿಯನ್ನು ನಗರದ ಭೂ ಮಾಫಿಯಾ ಜಗತ್ತು ಕಬಳಿಸುತ್ತಿದೆ. ಇಂಥ ದಾರುಣತೆಯ ನಡುವೆ ಅಲ್ಲೊಬ್ಬ ಇಲ್ಲೊಬ್ಬ ಹಠಮುನಿಯಂತೆ ನೆಲಮೂಲ ಜ್ಞಾನಕ್ಕೆ ನಿಷ್ಠನಾಗಿ ಕೃಷಿಕಾಯಕದಲ್ಲಿ ತತ್ಪರನಾಗಿದ್ದಾನೆ. ಆಧುನಿಕ ಕೃಷಿಗೆ ಹಂಬಲಿಸಿದರೂ ಹಾಸಿಗೆ

ಇದ್ದಷ್ಟು ಕಾಲು ಚಾಚಬೇಕಾದ ಅನಿವಾರ್ಯತೆಯಲ್ಲಿ ಹಲವರು ಸಾಂಪ್ರದಾಯಿಕ ಕೃಷಿಗೆ ಜೋತುಬಿದ್ದಿದ್ದಾರೆ. ಇವರ ನಡುವೆ ಆಧುನಿಕ ಪ್ರಯೋಗದ ಪ್ರಾತ್ಯಕ್ಷತೆಗೆ ಒಡ್ಡಿಕೊಂಡವರೂ ಸಾಗಿದ್ದಾರೆ. ಹೀಗಾಗಿ ಇಂದು ಕೃಷಿ ಬದುಕು ದಿಕ್ಕು ತಪ್ಪಿದೆ. ಇಂಥ ವಾತಾವರಣದಲ್ಲಿ ದೇಸಿ ಕೃಷಿ ಜ್ಞಾನದ ಹೆಸರು ಹೇಳುತ್ತಾ ಹಲವು ಜೈವಿಕ ಪದ್ಧತಿಯ ಹೊಸ ಪ್ರಯೋಗಗಳನ್ನು ನಡೆಸುವ ಆದನ್ನು ಎಲ್ಲ ಕಡೆಗೂ ಏಕ ಮಾದರಿಯಂತೆ ಪ್ರಚುರಪಡಿಸುವ ಜ್ಞಾನಿಗಳು ಹುಟ್ಟಿಕೊಂಡಿದ್ದಾರೆ. ಅದನ್ನು ಅಲ್ಲಗಳೆಯುತ್ತಾ ಮತ್ತೊಂದು ರೀತಿಯಲ್ಲಿ ಪ್ರಯೋಗಶೀಲರಾಗಿ ಇದೇ ನಿಜವಾದ ದೇಸಿ ಪದ್ಧತಿ ಎಂದು ತಮ್ಮದೇ ಆದ ಮಾದರಿಯೊಂದನ್ನು ಹೇಳುತ್ತಾ ಪ್ರಾತ್ಯಕ್ಷತೆಗಳನ್ನು ತೋರುತ್ತಿರುವ ನೆಲನಿಷ್ಠೆಯಲ್ಲಿ ಮಾತನಾಡುವವರೂ ಇದ್ದಾರೆ. ಈ ಎಲ್ಲ ಪ್ರಯೋಗಗಳೂ ವಸ್ತುಸ್ಥಿತಿಗಿಂತ ಹೆಚ್ಚಾಗಿ ಉತ್ಪ್ರೇಕ್ಷಿತ ಮಾತುಗಳ ಸೂಕತದಲ್ಲಿ ರೈತರನ್ನು ದಿಕ್ಕು ತಪ್ಪಿಸುತ್ತಿವೆ ಎಂಬ ಅನುಮಾನ ದಟ್ಟವಾಗುತ್ತಿದೆ. ಏಕೆಂದರೆ ನೆಲಮೂಲ ವಿಜ್ಞಾನವೆಂಬುದು ಎಂದೂ ಏಕಮಾದರಿಯದಲ್ಲ. ಅದರ ಗುಣವೇ ಬಹುತ್ವ ಮೂಲದ್ದು. ಹಾಗೂ ಪ್ರದೇಶನಿಷ್ಠೆಯಲ್ಲಿ ಅನುಭವ ಜನ್ಯವಾದದ್ದು. ಈ ಹಿನ್ನೆಲೆಯಲ್ಲಿಯೇ ದೇಸಿ ಜ್ಞಾನ ಎನ್ನುವಾಗ 'ದೇಸಿ' ಪದವನ್ನು ವಿಶೇಷವಾಗಿ ಅರ್ಥೈಸಿಕೊಳ್ಳಬೇಕಾಗಿದೆ. ದೇಸಿ ಎಂಬುದು ಜನಪದಕ್ಕೆ ಸಮಾನಾರ್ಥಕವಾಗಿಯಾಗಲೀ ಪೂರಕವಾಗಿಯಾಗಲೀ ಪರ್ಯಾಯವಾಗಿಯಾಗಲೀ ಬಳಸುವ ಪದವಲ್ಲ. ಅದು ಮಾರ್ಗಕ್ಕೆ ವಿರುದ್ಧವಾಗಿ ಸಾಮಾನ್ಯೀಕರಿಸಿ ಪ್ರಯೋಗಿಸುವ ಪದವಾದರೂ ಅದು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗುತ್ತಲೇ ಏಕ ಎಂಬುದನ್ನು ನಿರಾಕರಿಸುತ್ತ ಅನೇಕ ಎಂಬುದನ್ನು ತುಂಬಿಕೊಳ್ಳುತ್ತ ತನ್ನ ಅರ್ಥವ್ಯಾಪ್ತಿಯನ್ನು ಪ್ರತೀತಗೊಳಿಸುತ್ತದೆ. ಕೃಷಿಗೆ ಸಂಬಂಧಿಸಿದಂತೆ ಈ ಪದವನ್ನು ಪ್ರಯೋಗಿಸುವಾಗಲಂತೂ ಅದರ ಬಹುತ್ವದ ಶ್ರೀಮಂತಿಕೆ ಸಮೃದ್ಧವಾಗಿ ಕಾಣುವಂಥಾದ್ದು. ಉದಾಹರಣೆಗೆ ಕರ್ನಾಟಕವನ್ನು ಕೃಷಿಗೆ ಸಂಬಂಧಿಸಿ ನಾಲ್ಕು ನೆಲೆಗಳಲ್ಲಿ ವಿಂಗಡಿಸಬಹುದು. ಮಲೆನಾಡು, ಅರೆಮಲೆನಾಡು, ಬಯಲು ಸೀಮೆ, ಬೆಂಗಾಡುಸೀಮೆ. ಈ ನಾಲ್ಕು ಪ್ರದೇಶಗಳ ಭೂವೈಲಕ್ಷಣ್ಯ ಮಳೆ ಬಿಸಿಲಿನ ಹವಾಮಾನ ಪರಿಸ್ಥಿತಿ ತೀರ ವಿಭಿನ್ನವೂ ವಿಶಿಷ್ಟವೂ ಆದದ್ದು. ಆದರೆ ಮಲೆನಾಡು ಎಂದ ತಕ್ಷಣ ಅದನ್ನು ಏಕಮಾದರಿಯಲ್ಲಿ ಗ್ರಹಿಸುವುದು ತಪ್ಪು. ಕೊಡಗು, ಶಿವಮೊಗ್ಗ, ಚಿಕ್ಕಮಗಳೂರು, ಧಾರವಾಡ ಈ ಪ್ರದೇಶಗಳು ಮಲೆನಾಡು ಪ್ರದೇಶಗಳಾದರೂ ಅವುಗಳ ವಿಭಿನ್ನತೆಗಳು ಆಯಾ ನೆಲದ ಗುಣವಿಶೇಷತೆಯ ಅಸ್ಮಿತೆಗಳು. ಹಾಗೆಯೇ ಬಯಲುಸೀಮೆಯೆಲ್ಲಾ ಒಂದೇ ಅಲ್ಲ. ಹೀಗಾಗಿ ದೇಸಿ ಎಂಬುದು ಐದು ಮೈಲಿಯ ಅಂತರದಲ್ಲಿ ತನ್ನ ವ್ಯತ್ಯಾಸವನ್ನು ಢಾಳಾಗಿ ಕಾಣಿಸುವ ಅನನ್ಯತೆಯಿಂದ ಕೂಡಿರುತ್ತದೆ. ಈ ಅನನ್ಯತೆಯ ಅರಿವೆಂಬುದು ಆಯಾ ನೆಲಮೂಲದ ಅನುಭವ ಮೂಸೆಯಲ್ಲಿ ಪರಿಪಾಕಗೊಂಡು ಮೂಡಿರುತ್ತದೆ. ಬಯಲುಸೀಮೆಯಲ್ಲಿ ಒಂದೇ ಪ್ರದೇಶದ ಕೆರೆ ಬಯಲಿಗೂ ಅಲ್ಲಿಂದ ಐದು ಮೈಲಿ ಆಚೆಗಿರುವ ಕುಂಟೆ, ಬೆಂಚೆ, ಕಟ್ಟೆಗಳನ್ನು ಮಾತ್ರ ಒಳಗೊಂಡ ಬಯಲಿಗೂ ವ್ಯತ್ಯಾಸವಿರುತ್ತದೆ. ಬಿತ್ತುವ ಬೀಜ, ಬಳಸುವ ಗೋಡುಗೊಬ್ಬರ ಉಪಕರಣ ಕೃಷಿ ಮಾಡುವ ವಿಧಾನ, ಕಾಲಮಾನ ಎಲ್ಲವೂ ಸಾವಿರಾರು ವರ್ಷಗಳ ಅನುಭವದ ಮೂಸೆಯಲ್ಲಿ ಅರಳಿದ ಅರಿವಿನ ಪಕ್ವಫಲಗಳಾಗಿರುತ್ತವೆ. ಇದು ನೆಲಮೂಲ ಜ್ಞಾನ. ಇದು ದೇಸಿವಿಜ್ಞಾನ. ಇಂಥ ಅರಿವನ್ನು ಗಂಭೀರವಾಗಿ ಸ್ವೀಕರಿಸಿ ಇದನ್ನು ಮೂಲ ಬೇರಾಗಿಸಿಕೊಂಡು ನಮ್ಮ ಹೊಸ ಸಂಶೋಧನೆಗಳು ಬೆಳೆಯಬೇಕಾಗಿದೆ.

ಒಗ್ಗದ ನೆಲಕ್ಕೆ ವೆನಿಲಾ ಹಾಕುವುದು ಮಿಡಿ ಸೌತೆ, ಬೀಟಿ ಹತ್ತಿಯ ಭ್ರಮೆಗೆ ಸಿಲುಕಿ ಹೊಂದಿಕೊಳ್ಳದ ಬೀಜ ಬಿತ್ತುವುದು ಆಗಬಾರದು. ನಿರ್ಬೀಜ ತಳಿಗಳನ್ನು ಮಾರುತ್ತಿರುವ ಬೀಜ ಗೊಬ್ಬರ ಔಷಧಿ ಕಂಪನಿಗಳ ಭ್ರಮಾತ್ಮಕ ಜಾಹೀರಾತಿನ ಮೋಸಜಾಲದಲ್ಲಿ ನಮ್ಮ ಬಡರೈತರು ಹಾಳಾಗಿರುವುದು ಹೀಗೆ. ನಮ್ಮ ಅಕ್ಷರ ಬುದ್ಧಿಯ ಕೃಷಿ ಪಂಡಿತರು ಇಂಥ ಹುನ್ನಾರಗಳಿಗೆ ಮುಖವಾಣಿಗಳಾಗಿ ಕೆಲಸ ಮಾಡುತ್ತಿರುವುದು ವಿಷಾದನೀಯ. ಇದು ತಪ್ಪಬೇಕು. ಜೊತೆಗೆ ಇವರ ದಂಧಾದುಂಧಿಯ ಆಕ್ರಮಣದಲ್ಲಿ ಹಾಳಾಗುತ್ತಿರುವ ಭೂಮಿ ಹಾಗೂ ಜೀವಜಗತ್ತು ರಕ್ಷಿತವಾಗಬೇಕು. ಭೂಮಿಯ ಧರ್ಮಕ್ಕೆ ಅಂದರೆ ಪಂಚಭೂತಗಳಿಗೆ ಎಂದೂ ವಂಚನೆಯೆಸಗದಂತೆ ರೂಪುಗೊಂಡ ದೇಸಿಜ್ಞಾನ ಪದ್ಧತಿ ಅಳಿದುಹೋಗಬಾರದು. ಅದನ್ನು ಪುನರುಜ್ಜೀವಿಸುತ್ತ ಆ ಪರಂಪರೆಯ ಮುಂದುವರಿಕೆಯಾಗಿ ಹೊಸ ಹೊಸ ಸಾಧ್ಯತೆಗಳನ್ನು ಕಂಡುಕೊಳ್ಳುವ ದಿಕ್ಕಿನಲ್ಲಿ ನಮ್ಮ ಕೃಷಿ ಸಂಶೋಧನೆಗಳು ನಡೆಯಬೇಕು. ಆಧುನಿಕ ಕೃಷಿಪಂಡಿತರು ಕೈಗಾರಿಕಾ ಉತ್ಪನ್ನಮುಖಿಗಳಾಗದೆ ಮಾನವ ಸಂಪನ್ಮೂಲ ಬಳಕೆಯ ಶ್ರಮ ಸಲಕರಣೆಗಳ ಸಾಧ್ಯತೆಗಳತ್ತ ಗಮನಹರಿಸಬೇಕು. ನೆಲಮೂಲ ತಳಿಗಳ ನಿರಾಕರಣೆಯನ್ನು ಬಿಟ್ಟು ಅವುಗಳ ಬಲವರ್ಧನೆಯ ಕಡೆಗೆ ಆಸಕ್ತಿ ವಹಿಸಬೇಕು. ಹಾಗೆಯೇ ದೇಸಿಯ ಬಹುತ್ವವನ್ನು ಮನಗಂಡು ನೆಲನಿಷ್ಠೆಯ ಜ್ಞಾನವನ್ನು ಗೌರವಿಸುವ ವಿಸ್ತರಿಸುವ ತಿಳುವಳಿಕೆ ನೀಡುವ ಕಡೆ ತೊಡಗಿಸಿಕೊಳ್ಳಬೇಕು, ಇದು ತುರ್ತಾಗಿ ಆಗಬೇಕಾದ ಕೆಲಸ.

ಇಂದು ದೇಸಿ ಜ್ಞಾನಕ್ಕೆ ಪೂರಕವಾಗುವ ಮೂರು ಬಗೆಯ ಕೃಷಿ ಪದ್ಧತಿಗಳು ನಮ್ಮ ನಡುವೆ ಬಳಕೆಯಲ್ಲಿವೆ. ಸಾಂಪ್ರದಾಯಿಕ ಕೃಷಿ ಪದ್ಧತಿ; ಸಾವಯವ ಕೃಷಿ ಪದ್ಧತಿ; ಸಹಜ ಕೃಷಿ ಪದ್ಧತಿ. ಮೇಲುನೋಟಕ್ಕೆ ಈ ಮೂರೂ ಮಾದರಿಗಳು ಭಿನ್ನ ಎಂಬಂತೆ ಕಂಡುಬಂದರೂ ಅವುಗಳ ಮೂಲ ಆಶಯ ಒಂದೇ; ಭೂಮಿಯ ಜೈವಿಕ ಸತ್ವವನ್ನು ನಾಶಮಾಡದೆ ಉತ್ತು ಬಿತ್ತಿ ಬೆಳೆ ತೆಗೆಯುವುದು ಮತ್ತು ಅಧಿಕ ಹಣದ ಖರ್ಚಿಲ್ಲದೆ ಹವಾಮಾನಕ್ಕೆ ಹೊಂದಿಕೊಂಡ ಸರಳ ಜ್ಞಾನ ಪ್ರಯೋಗದಲ್ಲಿ ವ್ಯವಸಾಯ ಮಾಡುವುದು. ದುರಾಸೆಗೆ ಬಲಿಯಾಗದೇ ನಿರಾಶೆಯ ಕೂಪಕ್ಕೂ ಬೀಳದೇ ಸಮಸ್ಥಿತಿಯ ಕೃಷಿ ಬದುಕನ್ನು ಕಟ್ಟಿಕೊಳ್ಳುವುದು. ಈ ಮೂರೂ ಕೃಷಿ ಪದ್ಧತಿಗಳು ನೆಲಕ್ಕೆ ವಿಷ ಉಣ್ಣಿಸುವ ದ್ರೋಹ ಚಿಂತನೆಗೆ ಎಂದೂ ತೊಡಗಿದವುಗಳಲ್ಲ. ನೆಲ, ಜಲ, ಹವಾಮಾನಗಳ ಲಭ್ಯತೆಯನ್ನು ಅರಿತು ಕೃಷಿಜ್ಞಾನವನ್ನು ಬಳಸಿಕೊಂಡವು ಹಾಗೂ ಬೆಳೆಸಿಕೊಂಡವು. ಇದರ ಜೊತೆಗೆ ಸ್ಥಳೀಯ ಪ್ರಾಕೃತಿಕ ಲಭ್ಯತೆಯನ್ನು ನಾಶವಾಗದ ಪರಿಯಲ್ಲಿ ಕೃಷಿಗೆ ಪೂರಕವಾಗಿ ದುಡಿಸಿಕೊಂಡವು. ಈ ಎಲ್ಲ ಸಮಾನಾಂಶಗಳನ್ನು ಗಮನಿಸಿದರೆ ಇವುಗಳನ್ನು ಸರಳವಾಗಿ ಜೈವಿಕ ಕೃಷಿಪದ್ಧತಿಗಳೆಂದು ಕರೆಯಬಹುದು. ಈ ಮೂರೂ ಪದ್ಧತಿಗಳಲ್ಲಿ ಸ್ಥಳೀಯ ಜ್ಞಾನ ಪ್ರಧಾನವಾಗಿ ಬಿಂಬಿತವಾಗುವುದರಿಂದ ದೇಸಿ ಜೈವಿಕ ಕೃಷಿ ಪದ್ಧತಿಗಳೆಂದು ಸಾಮಾನ್ಯೀಕರಿಸಬಹುದು. ಅಲ್ಲದೆ ಈ ಮೂರು ವಿಧಾನಗಳನ್ನು ಪ್ರತ್ಯೇಕ ಜ್ಞಾನ ಮಾರ್ಗಗಳಾಗಿ ಕಾಣದೆ ಪರಸ್ಪರ ಬಳಕೆಯ ಪೂರಕ ಮಾದರಿಗಳಾಗಿ ಸ್ವೀಕರಿಸುವ ಅಗತ್ಯವೂ ಇದೆ. ಹಾಗಾದಾಗ ಮಾತ್ರ ನೆಲಮೂಲ ಜ್ಞಾನದ ಬಳಕೆಯ ಹೊಸತನಕ್ಕೆ ಅವಕಾಶಗಳನ್ನು ಕಲ್ಪಿಸುವುದು, ಹೊಸ ಹೊಸ ಆವಿಷ್ಕಾರಗಳು ಈ ಜೈವಿಕ ಕೃಷಿ ಪದ್ಧತಿಯನ್ನು ವಿಸ್ತರಿಸುವುದು ಸಾಧ್ಯವಾಗುತ್ತದೆ. ದಿಕ್ಕು ತಪ್ಪಿರುವ ಕೃಷಿ ಬದುಕಿಗೆ

ಒಂದು ನಿರ್ದಿಷ್ಟವೂ ಅತಿರೇಕಗಳ ಆವಾಂತರವೂ ಇಲ್ಲದ ತಿಳುವಳಿಕೆಯನ್ನು ನೀಡುವುದು ಇದರಿಂದ ಸಾಧ್ಯವಾಗುತ್ತದೆ. ಇಲ್ಲಿ ದುರಾಸೆಯಿಂದ ಭ್ರಮೆಗಳ ಬೆನ್ನುಹತ್ತುವ ಪ್ರಮೇಯವಿಲ್ಲ. ವಸ್ತುಸ್ಥಿತಿ ಅರಿವಿನಲ್ಲಿ ಅಗತ್ಯಗಳನ್ನು ಪೂರೈಸಿಕೊಳ್ಳುವ ಮಧ್ಯಮ ಮಾರ್ಗದ ಜೀವನ ವಿಧಾನ ಇದಾಗಿದೆ. ಮಧ್ಯಮ ಮಾರ್ಗವೆಂಬುದು ಮಧ್ಯಮ ವರ್ಗದ ಜೀವನ ಮಾರ್ಗವಲ್ಲ. ನಿಸರ್ಗ ಧರ್ಮಕ್ಕೆ ಎರವಾಗದಂತೆ ಬದುಕನ್ನು ಅರಿಯುವ, ಬದುಕನ್ನು ಬಾಳುವ ಜೀವನ ಮಾರ್ಗ. ತಾನೂ ಬದುಕಿ ಜೀವಜಗತ್ತನ್ನೂ ಬದುಕಿಸುವಂತೆ ತನ್ನ ನಡೆಯನ್ನು ನಿಯಂತ್ರಿಸಿ ಕೊಳ್ಳುವ ಜೀವನಮಾರ್ಗ. ಇಂಥ ಒಂದು ಜೀವನ ಮಾರ್ಗಕ್ಕೆ ಸದಾ ಹಂಬಲಿಸುವ ಜನಪದ ಇಂದಿಗೂ ನಮ್ಮ ನಡುವೆ ಇದೆ. ಅವರ ಎದೆಯಾಳದಲ್ಲಿ ಈ ಮೂರೂ ಕೃಷಿ ಪದ್ಧತಿಗಳ ಪಾರಂಪರಿಕ ಅನುಭವ ಜ್ಞಾನ ನೆನಪಾಗಿ ನೆಲದ ಕರ್ಮರೂಪಿ ಪ್ರಾತ್ಯಕ್ಷಿಕೆಯಾಗಿ ಮರುಭೂಮಿಯಲ್ಲಿನ ಓಯಸಿಸ್‌ಗಳಂತೆ ಇನ್ನೂ ಜೀವಂತವಿವೆ. ಅವುಗಳನ್ನು ಸಂಗ್ರಹಿಸಿ ಉಳಿಸುವ ಹಾಗೂ ಆಸಕ್ತ ರೈತ ಪ್ರಜ್ಞೆಗಳಿಗೆ ಒದಗಿಸುವ ಉದ್ದೇಶದಿಂದ ಈ ದೇಸಿಕೃಷಿ ಜ್ಞಾನ ಮಾಲಿಕೆಯನ್ನು ಪ್ರಾರಂಭಿಸಲಾಗಿದೆ.

ಈ ಮಾಲಿಕೆಯನ್ನು ಪುಸ್ತಕ ಪ್ರಾಧಿಕಾರ ಕೈಗೆತ್ತಿಕೊಂಡಾಗ ಹಲವು ರೀತಿಯ ಅಪಸ್ವರಗಳು ಕೇಳಿಬಂದವು. ಕೃಷಿಗೂ ಪುಸ್ತಕ ಪ್ರಾಧಿಕಾರಕ್ಕೂ ಎಲ್ಲಿಂದೆಲ್ಲಿಗೆ ಸಂಬಂಧ? ಎಂದು ಪ್ರಶ್ನಿಸಿದವರೂ ಇದ್ದಾರೆ. ಪುಸ್ತಕ ಹಾಗೂ ಪುಸ್ತಕ ಸಂಸ್ಕೃತಿ ಎಂದರೆ ಕೇವಲ ಸಾಹಿತ್ಯ, ಸಂಶೋಧನೆ ವಿಜ್ಞಾನ, ವಿಚಾರ ಇತ್ಯಾದಿ ಅಕ್ಷರ ಜಗತ್ತಿನ ವ್ಯವಹಾರಕ್ಕೆ ಮಾತ್ರ ಸಂಬಂಧಿಸಿದ್ದು ಎಂದು ನಂಬಿದವರಿಗೆ ಹಾಗನ್ನಿಸುವುದು ಸಹಜ. ನಮ್ಮ ಸಮಾಜದಲ್ಲಿ ಶ್ರಮಿಕ ಮೂಲಕ ಕಾಯಕ ಜೀವಿಗಳನ್ನು ಪುಸ್ತಕ ಸಂಸ್ಕೃತಿಯಿಂದ ದೂರವಿಟ್ಟು ಮಾತನಾಡುವ ಇಂಥ ಜಾಡ್ಯ ಇನ್ನೂ ಮುಂದುವರೆದಿದೆ. ಪುಸ್ತಕ ಚಿಂತನೆ ಇವರಿಗೆ ತಿಳಿಯಲಾರದ್ದು ಎನ್ನುವ ಮೇಲರಿಮೆಯ ಭಾವ ಅಕ್ಷರ ಜಗತ್ತಿನ ಜನರದ್ದಾದರೆ ಅದು ಸಮಾಜದ ಸ್ವಾಸ್ಥ್ಯ ಕೆಟ್ಟದ್ದರ ಸೂಚನೆ. ಸಂಸ್ಕೃತಿಯನ್ನು ವಿಸ್ತರಿಸುವ ಹೊಣೆಗಾರಿಕೆಯನ್ನು ಹೊತ್ತ ಅಕಾಡೆಮಿಗಳು, ಪ್ರಾಧಿಕಾರಗಳು, ಪ್ರಸಾರಾಂಗಗಳು ನಿರ್ದಿಷ್ಟ ವರ್ಗಗಳಿಗೆ ಸೀಮಿತಗೊಳಿಸಿಕೊಂಡ ಕಾರ್ಯಕ್ರಮಗಳಲ್ಲಿ ಪರ್ಯವಸಾನ ವಾಗುವ ಪರಿಪಾಠ ತಪ್ಪಬೇಕು. ಇವುಗಳು ನಮಗೆ ಏನು ಕೊಟ್ಟಿವೆ ಎಂದು ಪ್ರಶ್ನಿಸುವ ಶ್ರಮಿಕ ಸಮುದಾಯಗಳಿಗೆ ಉತ್ತರಿಸುವ ನೈತಿಕ ಹೊಣೆಗೆ ಇವುಗಳ ಭಾಜನವಾಗಬೇಕು. ಶ್ರಮಿಕ ಬಹುಸಮುದಾಯಗಳು ಈ ಎಲ್ಲ ಸಂಸ್ಥೆಗಳ ನೇರ ಫಲಾನುಭವಿಗಳಾಗಬೇಕು. ಜನರ ಬೆವರಿನ ಸಂಪತ್ತು ಸಾಮಾಜಿಕ ನ್ಯಾಯದ ನೈತಿಕ ಎಚ್ಚರದಲ್ಲಿ ವಿನಿಯೋಗವಾಗಬೇಕು. ಪುಸ್ತಕ ಪ್ರಾಧಿಕಾರ ಇದನ್ನು ಕರ್ತವ್ಯವೆಂಬ ಭಾವದಲ್ಲಿ ಸ್ವೀಕರಿಸಿ ಕಾರ್ಯಮುಖಿಯಾಗಿದೆ. ಈ ಕಾರ್ಯಯೋಜನೆಗೆ ಕೈಜೋಡಿಸಿದ ಮನಸ್ಸುಗಳು ನೂರಾರು. ಅವುಗಳನ್ನು ಇಲ್ಲಿ ನೆನೆಯುವುದು ಕರ್ತವ್ಯದ ಒಂದು ಭಾಗವೆಂದು ಭಾವಿಸಿದ್ದೇನೆ.

ದೇಸಿ ಕೃಷಿ ಜ್ಞಾನವನ್ನು ದಾಖಲಿಸುವ ಆಶಯಕ್ಕೆ ಪ್ರಾಧಿಕಾರದ ಎಲ್ಲ ಸದಸ್ಯ ಬಂಧುಗಳು ಒಕ್ಕೊರಲಿನ ಸಹಮತ ನೀಡಿದ್ದು ಈ ಯೋಜನೆ ಕಾರ್ಯರೂಪಕ್ಕಿಳಿಯಲು ಕಾರಣವಾದ ಮೊದಲ ಹಂತ. ಆದಾದ ಮೇಲೆ ತೇಜಸ್ವಿಯವರು ನೀಡಿದ ಮಾರ್ಗದರ್ಶನ ಮರೆಯಲಾರದ್ದು. ಅವರನ್ನು ಈ ಕಾರ್ಯದಲ್ಲಿ ನೇರವಾಗಿ ಭಾಗವಹಿಸಲು ಮನವಿಮಾಡಿಕೊಂಡಾಗ ತಮ್ಮ

ಸಹಜ ಒರಟು ಭಾಷೆಯಲ್ಲಿ ಬೈದು ನಿರಾಕರಿಸಿದ ಅವರ ಪ್ರೀತಿ ಅದು ತೋರಿದ ದಾರಿ ಶ್ರೀ ಪಡ್ರೆ, ಭರಮಗೌಡ, ಶ್ರೀರಾಮರೆಡ್ಡಿ ಮೊದಲಾದ ಸಾಧಕರ ಪರಿಚಯ ಮಾಡಿಸಿತು. ಎಲ್ಲಕ್ಕಿಂತ ಮಿಗಿಲಾಗಿ ಜಿ.ಕೃಷ್ಣಪ್ರಸಾದರ ಆಸ್ಥೆ, ನೇತೃತ್ವ ಈ ಯೋಜನೆಯ ಸ್ವರೂಪಕ್ಕೆ ಚಾಲನೆ ನೀಡಿತು. ಗಾಣಧಾಳು, ಪ್ಯಾಟಿ, ಗೆಳೆಯರು ಈ ಸ್ವರೂಪವನ್ನು ಮನಸ್ಸಿಗೆ ತಂದುಕೊಂಡು ಶಿಬಿರಗಳ ಹೊಣೆಹೊತ್ತು ಸಂಪರ್ಕ ಸೇತುಗಳಾಗಿ ಎಲ್ಲರನ್ನೂ ಕೂಡಿಸುವಲ್ಲಿ ನೆರವಾದರು. ಮೊದಲು ಶಿಬಿರವನ್ನು ಹಮ್ಮಿಕೊಳ್ಳಲು ಆಶ್ರಯ ಹಾಗೂ ನೈತಿಕ ಬೆಂಬಲವನ್ನು ನೀಡಿದವರು ಆತ್ಮೀಯ ಗುರುಗಳಾದ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು. ಶಿಬಿರದಲ್ಲಿ ಚರ್ಚೆಯನ್ನು, ಮಾಹಿತಿ ವಿಧಾನವನ್ನು ರೂಪುರೇಷೆ ಮಾಡಿದವರು ಶ್ರೀ ನಾಗೇಶ ಹೆಗಡೆ ಅವರು. ಇವರೆಲ್ಲರ ಜೊತೆಗೆ ಅನುಭವದ ಜ್ಞಾನ ಸಮೃದ್ಧಿಯನ್ನು ಧಾರೆ ಎರೆದು ಬೆಳೆಸಿದವರು ಶ್ರೀ ಪಡ್ರೆ, ಭರಮಗೌಡ, ಶ್ರೀರಾಮರೆಡ್ಡಿ, ಕಳವೆ ಹಾಗೂ ನಾಡಿನ ರೈತಬಂಧುಗಳು. ಎರಡನೆಯ ಶಿಬಿರವನ್ನು ಹಮ್ಮಿಕೊಳ್ಳಲು ಸ್ಥಳ ನೀಡಿದವರು ಸೂರಶೆಟ್ಟಿ ಕೊಪ್ಪದ ಬೈಫ್ ಬಳಗ. ಆ ಶಿಬಿರದಲ್ಲಿ ಭಾಗವಹಿಸಿದ ಆ ಸುತ್ತಲಿನ ರೈತಬಂಧುಗಳು ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಭಾಗದ ರೈತಬಂಧುಗಳು ನೀಡಿದ ಮಾಹಿತಿಯನ್ನು ದಾಖಲಿಸುವಲ್ಲಿ ಶ್ರಮಿಸಿದವರು ಶ್ರೀಮತಿ ರೇಖಾ. ತಮ್ಮ ಜಾನಪದೀಯ ಅಧ್ಯಯನ ದೃಷ್ಟಿ ಸೂಕ್ಷ್ಮತೆಗಳಿಂದ ಚರ್ಚೆಗೆ ಹೊಸ ಆಯಾಮ ನೀಡುತ್ತಿದ್ದ ಗೆಳೆಯರು ಕೆ.ವೈ. ನಾರಾಯಣಸ್ವಾಮಿ, ಕೆ.ಪುಟ್ಟಸ್ವಾಮಿ, ಎಂ.ಎಸ್. ಮೂರ್ತಿ, ಬಿ. ಎಸ್. ಸೋಮಶೇಖರ್, ಡಾ. ರಘುಪತಿ, ಡಾ.ನಾರಾಯಣಸ್ವಾಮಿ, ಡಾ.ಮುರಳಿ, ಪೂರ್ಣಪ್ರಜ್ಞ, ದೇರ್ಲ, ಜಿ.ಎನ್. ಮೋಹನ್, ಬಸವರಾಜ ಸಂತೇಶಿವರ, ಶಿವನಹಳ್ಳಿ ರಮೇಶ್, ಪ್ರೊ. ಶಿವರಾಮಯ್ಯ, ಡಾ. ರಾಮಕೃಷ್ಣಯ್ಯ ಮೊದಲಾದ ಗೆಳೆಯರು. ಶಿಬಿರಗಳ ಮಾಹಿತಿಯನ್ನು, ಸಭೆಗಳ ನಡಾವಳಿಯನ್ನು ದಾಖಲಿಸಿ ಡಿ.ಟಿ.ಪಿ. ಮಾಡಿ ಒದಗಿಸುತ್ತಿದ್ದವರು ಶ್ರೀಮತಿ ಸತ್ಯವಾಣಿ, ವಿಜಯ, ಮಂಜು, ಶಂಕರ, ರಾಮಯ್ಯ ಮೊದಲಾದವರು. ಶಿಬಿರದ ಆಯೋಜನೆಯಿಂದ ಹಿಡಿದು ಸಂಪೂರ್ಣ ನಿರ್ವಹಣೆಯವರೆಗೆ ಬದ್ಧತೆಯಿಂದ ದುಡಿದವರು ಆಡಳಿತಾಧಿಕಾರಿಗಳಾದ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ಅಶೋಕ ಎನ್. ಚಲವಾದಿ ಅವರು. ಲಕ್ಷ್ಮಿ ಮುದ್ರಣಾಲಯ ಮತ್ತು ಇಳಾ ಮುದ್ರಣದ ಶ್ರಮಿಕ ಮಿತ್ರರ ಕಾರ್ಯಶೀಲತೆ. ಇವೆಲ್ಲದರ ಜೊತೆಗೆ ಈ ಯೋಜನೆ ಕಾರ್ಯಗತವಾಗಲು ಅವಕಾಶ ಕಲ್ಪಿಸಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀ ಐ.ಎಂ. ವಿಠ್ಠಲಮೂರ್ತಿ ಅವರು, ಮನು ಬಳಿಗಾರ್, ಕಾ.ತ. ಚಿಕ್ಕಣ್ಣ, ಜೆ.ಎನ್. ಶಾಮರಾವ್, ಎಸ್.ಐ.ಭಾವಿಕಟ್ಟಿ, ಮುಂತಾದವರು. ಹೀಗೆ ಈ ಕೃತಿಗಳ ರೂಪಣದ ಹಿಂದೆ ನೂರಾರು ಮನಸ್ಸುಗಳ ಸಂಕಲ್ಪ ಶಕ್ತಿ ಕೆಲಸ ಮಾಡಿದೆ. ಇವರೆಲ್ಲರಿಗೆ ಆತ್ಮೀಯ ಕೃತಜ್ಞತೆಗಳು.

ಫೆಬ್ರವರಿ ೨೦೦೮
ಬೆಂಗಳೂರು

**ಪ್ರೊ. ಎಸ್.ಜಿ.ಸಿದ್ಧರಾಮಯ್ಯ**
ಅಧ್ಯಕ್ಷರು

**ಕುರಿದಳ, ಎತ್ತು ಕಾಯೋ**
**ಚುಕ್ಕಿ, ಕೋಳಿಪಿಳ್ಳೆ**
**ಎಂಬ ನಕ್ಷತ್ರಗಳ ಜೊತೆಯಲ್ಲಿ...**



ಪ್ರತಿ ಹತ್ತಾರು ಮೈಲಿಗಳ ಒಳಸೀಮೆಗೊಂದು ಅನನ್ಯವಾದ ದೇಶಿಜ್ಞಾನವಿದೆ. ಅದನ್ನು ಕನ್ನಡ ನಾಡಿನ ಮಟ್ಟದಲ್ಲಿ ಗ್ರಹಿಸುವುದು ಕಷ್ಟ. ಸಾಮಾನ್ಯೀಕರಣಗೊಳಿಸುತ್ತಾ ಇಡೀ ನಾಡಿಗೆ ವಿಸ್ತರಿಸಿದರೆ ಅರ್ಥಹೀನಗೊಳ್ಳುತ್ತದೆ. ಈ ಬಗೆಯ ಇಕ್ಕಟ್ಟಿನಲ್ಲಿ ಮಳವಳ್ಳಿಯಿಂದ, ಚಳ್ಳಕೆರೆಯವರೆಗೆ ಬೈಕಿನಲ್ಲಿಯೇ ಅಡ್ಡಾಡಿ ಬರೆದದ್ದು ನಿಮ್ಮ ಮುಂದಿದೆ.

ಈ ಓಡಾಟದಲ್ಲಿ ದನಕುರಿ ಕಾಯುತ್ತಾ ನನ್ನ ಎದುರುಗೊಂಡ ಮಂಟೆಸ್ವಾಮಿ, ಮಲೆ ಮಾದಯ್ಯ, ಜುಂಜಪ್ಪ, ಮೈಲಾರ ಮುಂತಾದ ಪೂರ್ವಿಕರನ್ನು ಮತ್ತು ಅವರು ಹೇಳಿದ ಕತೆಗಳನ್ನು ಈ ಪುಸ್ತಕದೊಳಗೆ ತರಲಾಗುತ್ತಿಲ್ಲ, ಕ್ಷಮೆ ಇರಲಿ.

ಕೃಷಿಯ ನಿಜವಾದ ಕೇಂದ್ರಬಿಂದು ದನಕುರಿ. ದನಕರುಗಳು ಬೇಕಿದ್ದಾಗ ಬಳಸಿ, ಬೇಕಿಲ್ಲದಾಗ ಮೂಲೆಗೆ ಎಸೆಯಬಹುದಾದ ಯಂತ್ರಗಳಲ್ಲ. ಎಲ್ಲದರಲ್ಲೂ ಸುಲಭಕ್ಕೆ ಇಳಿದ ರೈತನ ಅವನತಿ ಇಲ್ಲಿರುವುದು ಸ್ಪಷ್ಟ.

ದನಕರು, ಆಡುಕುರಿಗಳ ಸುತ್ತ ಹಬ್ಬಿದ ಗ್ರಾಮಭಾರತದ ಆರ್ಥಿಕತೆ, ಸಂಸ್ಕೃತಿ ಪಲ್ಲಟಗೊಳ್ಳುತ್ತಿರುವುದು ಗಮನಾರ್ಹ. ಸಾವಿರಾರು ಕುರಿ ಕಾದವನ ಜ್ಞಾನ ಆಧುನಿಕಗೊಳ್ಳುತ್ತಾ ಸಾಗುತ್ತಿದೆ. ಆದರೆ, ಪರಂಪರೆಯ ಜ್ಞಾನದ ಬೇರುಗಳನ್ನು ಹಿಡಿದು, ಆಧುನಿಕ ಶಿಕ್ಷಣ ಆಳಕ್ಕೆ ಇಳಿಯುತ್ತಿಲ್ಲ. ಇದು ದುರಂತ.

ಈ ಪುಸ್ತಕದ ನೆಪದಲ್ಲಿ ನಾನೊಂದು ಹೊಸ ಜಗತ್ತಿಗೆ ತೆರೆದುಕೊಂಡಿದ್ದು, ಕುರಿದಳ, ಎತ್ತು ಕಾಯೋ ಚುಕ್ಕಿ, ಕೋಳಿಪಿಳ್ಳೆ ಎಂಬ ಚುಕ್ಕಿಗಳ ಜೊತೆಯಲ್ಲಿ ಕುರಿಜಾವಾ ಕಾದಿದ್ದು, ಪ್ರತಿಕ್ಷಣಗಳನ್ನು ಆನಂದಿಸಿದ್ದು.....

ಯಾರ್‍ಯಾರಿಗೆ ಥ್ಯಾಂಕ್ಸ್ ಹೇಳಬೇಕೋ ತಿಳಿಯುತ್ತಿಲ್ಲ !

ಡಾ|| ರಘುಪತಿ ಪಿ.ಎಸ್.

# ಪರಿವಿಡಿ

## ದನಕರುಗಳು


೧. ಮನುಷ್ಯನಲ್ಲಿ ದನ, ಕತ್ತೆ, ನಾಯಿ, ಗೂಬೆ ... ೩
೨. ಹೋರಿಯ ಸುಳಿಗಳ ಸುತ್ತ ..... ... ೫
೩. ಬೇಸಾಯ ಕಲಿಸುವುದು ... ೮
೪. ಲಾಳ ಕಟ್ಟೋದು ... ೧೧
೫. ಕರು ಕಾಣಾಕುವುದು ... ೧೪
೬. ಕುಂದು ಕೇರುವುದು ... ೧೭
೭. ಬೀಳು ಬಿದ್ದಿದೆ ... ೧೮
೮. ಗಂಡು ತುಳಸಿಯೆಂಬ ಗಿಡದ ಬೆನ್ನತ್ತಿ .... ... ೨೦


## ಕುರಿ ಬದುಕು


೧. ಅರಮನೆಗೆ ಬಂತು ಕುರಿ–ಮರಿ ... ೨೭
೨. ಕುರಿ ತಳಿಗಳು ... ೨೮
೩. ಬಂಡೂರು ಕುರಿ ... ೩೧
೪. ಸಾವಿರಾರು ಬಣ್ಣ ... ೩೪
೫. ಹಲ್ಲು ಹಿಡಿದು ನೋಡ್ರೀ ... ೩೭
೬. ನಾಕು ನಿಟ್ಟು ನಾಕು ಪಾಲು ... ೩೯
೭. ಕುರಿ ಕಾಯುವುದು ... ೪೦
೮. ಬಗೆ ಮರಿ, ಬಗೆ ಗೌಡ ... ೪೩
೯. ಈವಳೆ ಕುರಿಗಳ ಆರೈಕೆ ... ೪೫
೧೦. ಹುಲ್ಲು–ನೀರು ... ೪೮
೧೧. ದೇಶಕ್ಕೆ ಕುರಿ ಪಯಣ.... ... ೫೨

೧೨. ಶಾಡೆ ಸೊಪ್ಪು ... ೫೬
೧೩. ತಗರು ಬಿಡೋದು ... ೫೮
೧೪. ಕುರಿಗಳ ನರ ಕೆಚ್ಚುವುದು ... ೬೧
೧೫. ಫಲ ಮಾರೋದು ... ೬೩
೧೬. ಕುರಿ ಕತ್ತರಿಸುವುದು ... ೬೫
೧೭. ಕಾಯಿಲೆ ಅಡ್ಡಗಟ್ಟುವುದು ... ೬೭
೧೮. ಮರಿಯಾಪಾರ ... ೭೧
೧೯. ಕುರಿ ಕುಯ್ಯುವುದು ... ೭೩
೨೦. ಕುರಿ ಬದುಕಿನ ದಕ್ಕಡಗಿತ್ತಿ ... ೭೫
೨೧. ಕಂಬಳಿ ಧ್ಯಾನ ... ೭೯
೨೨. ಕುರಿ ಕರೆಯುವುದು ... ೮೨
೨೩. ಒಂದೆಕರೆಯ ಪುಟ್ಟಕಾಡಿನಲ್ಲಿ ಆಡು-ಕುರಿ ... ೮೪
೨೪. ಗವಿರಂಗಮಯ್ಯನ ಆಡು-ಪಾಡು ... ೮೮

# ದನಕರುಗಳು





# ಮನುಷ್ಯನಲ್ಲಿ ದನ, ಕತ್ತೆ, ನಾಯಿ, ಗೂಬೆ

ದನಗಳ ಆಯಸ್ಸು ಬಗ್ಗೆ ಮಾತು ಹೊರಳಿದಾಗ ಗ್ರಾಮೀಣರು ಒಂದು ಸೊಗಸಾದ ಕತೆಯನ್ನೇ ಹೇಳುತ್ತಾರೆ.

ಪರಮಾತ್ಮ ಸಕಲ ಜೀವಿಗಳಿಗೂ, ಆಯಸ್ಸನ್ನು ಹಂಚುತ್ತಾ ಕುಂತಿದ್ದ. ಮೊದಲು ಮನುಷ್ಯನ ವಯಸ್ಸನ್ನು ನಲವತ್ತಕ್ಕೆ ನಿರ್ಧಾರ ಮಾಡಿಬಿಟ್ಟ, ನಂತರ ದನಗಳ ಬಗ್ಗೆ ಅಪಾರ ಪ್ರೀತಿಯಿದ್ದ ಪರಮಾತ್ಮ 'ನಿನಗೆಷ್ಟು ವರ್ಷ ಬದುಕಬೇಕು ಕೇಳಿಕೋ ?' ಎಂದ. ದನ 'ನನಗೆ ಹತ್ತು ವರ್ಷ ಸಾಕು' ಎಂದಿತು. ಹೀಗೆಯೇ ಕತ್ತೆ, ನಾಯಿ, ಗೂಬೆ ಎಲ್ಲವುಗಳೂ ಹೆಚ್ಚಿನ ಜೀವಿತಾವಧಿ ಬಯಸಲಿಲ್ಲ, ಉಳಿದ ಈ ಆಯಸ್ಸನ್ನು ಯಾರೂ ಬಯಸಲಿಲ್ಲ. ಆದರೆ ಆಸೆಬುರುಕ ಮಾನವ ಮಾತ್ರ ಆ ಎಲ್ಲ ಪ್ರಾಣಿಗಳಿಗೆ ಮೀಸಲಾಗಿದ್ದ ಹೆಚ್ಚುವರಿ ಆಯಸ್ಸು ತನಗೇ ಬರಲಿ ಎಂದುಬಿಟ್ಟ.

ಅದಕ್ಕೇ ಮನುಷ್ಯ ನಲವತ್ತು ವರ್ಷಗಳ ನಂತರ ಕೆಲವು ವರ್ಷ ದನ, ಕತ್ತೆಯಂತೆ ದುಡಿಯುತ್ತಾನೆ. ಇನ್ನುಳಿದ ವರ್ಷಗಳಲ್ಲಿ ಅಸಹಾಯಕತೆಯಲ್ಲಿ ನರಳಿ, ಅಸಮಾಧಾನಗೊಂಡು ನಾಯಿಯಂತೆ ಚಡಪಡಿಸಿರುತ್ತಾನೆ. ಕೊನೆಯ ಕೆಲವು ದಿನಗಳಲ್ಲಿ ಗೂಬೆಯಂತೆ, ಮೂಲೆ ಹಿಡಿದು ಸುಮ್ಮನಿರಲಾಗದೆ, ಅರ್ಥಹೀನವಾಗಿ ಅರಚುತ್ತಾ ಬದುಕುತ್ತಾನೆ.

* * *

ಹಿಂದೆ ದನಗಳನ್ನು ಪಳಗಿಸುವುದಕ್ಕೆ ಯಾರಿಂದಲೂ ಸಾಧ್ಯವಿರಲಿಲ್ಲವಂತೆ. ಅವುಗಳ ಮೃಗಶಕ್ತಿ ಎದುರು ಮನುಷ್ಯ ತನ್ನ ಸೋಲನ್ನು ಒಪ್ಪಿಕೊಂಡಿದ್ದ. ಕೊನೆಯ ಪ್ರಯತ್ನವೆಂಬಂತೆ ಮನುಷ್ಯ ಹೋಗಿ ಆಚಾರಿಗೆ ತನ್ನ ಕಷ್ಟ ವಹಿಸಿದ. ಚಿನ್ನ, ಬೆಳ್ಳಿ, ಕುಸರಿ ಕೆಲಸ ಮಾಡುವ ಆಚಾರಿ ಹಾರಾಡಿ, ಎಗರುತ್ತಿದ್ದ ಹೋರಿಯ ಹತ್ತಿರ ಹೋಗಿ 'ಬಸವಣ್ಣ, ಬಸವಣ್ಣ ನಿನಗೆ ಬಂಗಾರದ ಮೂಗುದಾರ ತಂದಿದೀನಿ. ಅದು ಚೆನ್ನದ್ದು, ಒಳ್ಳೆ ಮೂಗತಿಯಂತೆ ಹೊಳೆಯುತ್ತೆ' ಎಂದು ಪುಸಲಾಯಿಸಿದ. ಆಗ ದನ ಆಚಾರಿಯ ಮಾತಿಗೆ ಮನಸೋತು ಮೂಗುದಾರ ಹಾಕಿಸಿಕೊಂಡಿತು.

ದನಗಳನ್ನು ಬಗ್ಗಿಸಿ, ಪಳಗಿಸಿಕೊಟ್ಟ ಆಚಾರಿಯ ಸುಳ್ಳು ಅವನ ಜೀವನವನ್ನೇ ಅತಂತ್ರಗೊಳಿಸಿತಂತೆ.

❑





## ಹೋರಿಯ ಸುಳಿಗಳ ಸುತ್ತ .....

ಹಳ್ಳಿಕಾರ ಹೋರಿಯ ಬಗ್ಗೆ ಕಳೆದ ನಲವತ್ತು ವರ್ಷಗಳಿಂದ ಅಪಾರ ಅನುಭವ ಪಡೆದಿರುವ ವ್ಯಕ್ತಿ ಎಂದರೆ ಕಾನ್ಕೆರೆ ಮುದ್ದ ರಂಗಯ್ಯ. ಹೋರಿಯ ಚಹರೆ ಮತ್ತು ಗುಣಲಕ್ಷಣಗಳನ್ನು ನೀರು ಕುಡಿದಂತೆ ಅವರು ಪಟಪಟ ಹೇಳುತ್ತಾ ಹೋಗುತ್ತಾರೆ :

- ನಾಗಮಂಗಲ ಜಾತಿ ಹೋರಿ ಎಲ್ಲದಕ್ಕಿಂತಲೂ ಒಳ್ಳೆಯ ಜಾತಿ ಹೋರಿ
- ಹೋರಿಯ ಬಣ್ಣ ರೂಪಾಯಿ ಬಣ್ಣಕ್ಕೆ ಇರಬೇಕು.
- ಹಿಂಗಣ್ಣು ಮತ್ತು ಮುಂಗಣ್ಣು ಒಂದೇ ಭಾವಕ್ಕೆ ಇರಬೇಕು.
- ಮುಸಣಿ, ಶಿರ ಉದ್ದವಾಗಿರಬೇಕು, ನೀಳವಾಗಿರಬೇಕು.
- ಕಣ್ಣಿನ ಹುಬ್ಬಿನ ಮೇಲೆ ಎರಡು ಬಿಳಿ ರೇಖೆ ಇರಬೇಕು.
- ಒಳ್ಳೆಯ ಭಾವದಲ್ಲಿರುವ ಎರಡೂ ಕೊಂಬುಗಳು ಸಣ್ಣದಾಗಿರಬೇಕು
- ಕಿವಿಗಳು ಬಹಳ ಸಣ್ಣದಾಗಿರಬೇಕು
- ಹೋರಿಯ ಗಂದೆಗಲು ಉದ್ದವಾಗಿರದೆ, ಶಿರ ಬಹಳ ಚುರುಕಾಗಿರಬೇಕು.
- ಮೇಲ್ಭಾಗದ ಮುಸುಣಿ, ಕೆಳಭಾಗದ ಗದ್ದ ಒಂದೇ ಸಮವಾಗಿರಬೇಕು.

- ಹೋರಿಯ ಕಣ್ಣಿನ ಗುಡ್ಡೆಯ ಮೇಲೆ ನೋಡುವವರ ಪ್ರತಿಬಿಂಬ ಕಾಣಬೇಕು.
- ಕೊಂಬನ್ನು ಬಡಿದರೆ ಠಣ್ ಎನ್ನುವ ಶಬ್ದ ಬರಬೇಕು
- ಎಂಟು ಹಲ್ಲುಗಳು ಇರಬೇಕು. ಅವುಗಳನ್ನು ಎರಡಲ್ಲು, ನಾಲ್ಕಲ್ಲು, ಆರಲ್ಲು, ಹೊಸಬಾಯಿ ಎನ್ನುವರು.
- ಕರೇ ಗೊರ್ಚಿನ ಹೋರಿ ಉತ್ತಮವಾದದ್ದು.
- ಬೀಜದ ತಳಭಾಗದಲ್ಲಿ ಕಪ್ಪು ಮಚ್ಚೆ ಇದ್ದರೆ ಒಳ್ಳೆಯದು
- ಹೋರಿಯ ಬಾಲ ನೀಳವಾಗಿರಬೇಕು. ಬಾಲದಲ್ಲಿ ಕಪ್ಪು ಕೂದಲು ಇರಬೇಕು.
- ಬಾಲದ ಗೆಡ್ಡೆ ದಪ್ಪನಾಗಿರಬಾರದು. ಸಣ್ಣದಾಗಿರಬೇಕು.

ಹೀಗೆ ಹೋರಿಯ ಲಕ್ಷಣಗಳನ್ನು ಹೇಳುತ್ತಾ, ಹೋಗುತ್ತಿದ್ದಂತೆ ಕಂಡುಬರುವ ಹಲವು ದೋಷಗಳನ್ನು ಸಹ ಅದೇ ಉಸಿರಿನಲ್ಲಿ ಪಟ್ಟಿ ಮಾಡುತ್ತಾರೆ. ಹೋರಿಯ ಮೂಗಿನಲ್ಲಿ ಸಣ್ಣ ಸಣ್ಣ ಗುಳ್ಳೆಗಳಿದ್ದು, ಅವುಗಳನ್ನು ನಾವು ನೋಡುವಾಗ ಮುಸುರಿದರೆ ವಾಸನೆ ಬರುತ್ತದೆ. ಆಗ ಅದನ್ನು ಪಿನಾಸಿ ದನ ಎನ್ನುತ್ತಾರೆ.

ಹೋರಿಯ ಕಣ್ಣುಗಳಲ್ಲಿ ಪ್ರತಿಬಿಂಬ ಕಾಣದಿದ್ದರೆ ಅದನ್ನು ಉತ್ತುಗಣ್ಣು ದನ ಎನ್ನುತ್ತಾರೆ. ಕೊಂಬನ್ನು ಬೆರಳಿನಿಂದ ಬಡಿದಾಗ ಡುಬ್ ಎನ್ನುವ ಶಬ್ದ ಬಂದರೆ ಅದನ್ನು ಉಶ್‌ಗೊಂಬು ಎನ್ನುತ್ತಾರೆ. ಕಿವಿಯನ್ನು ಬಡಿಯುವ ಕ್ರಿಯೆ ವ್ಯಾಪಾರಿಗಳು ಮುಖ್ಯವಾಗಿ ಮಾಡುವ ರೂಢಿ. ಯಾಕೆಂದರೆ ಕೀವು ಏನಾದರೂ ಇದ್ದರೆ ಗೊತ್ತಾಗಲಿ ಎನ್ನುವುದು ಅದರ ಹಿಂದಿನ ಉದ್ದೇಶ. ನಾಲ್ಕು ಕಾಲುಗಳ ಮಂಡಿಗಳು ದಪ್ಪನಾಗಿದ್ದರೆ, ಅದನ್ನು ವಾಯುಗಾಲು ಎನ್ನುತ್ತಾರೆ. ಗೊರ್ಚೆಗಳ ಮಧ್ಯೆ ಅಗಲವಾದ ಜಾಗ ಇದ್ದರೆ ಗೆಣ್ಣುಣು, ಬರುವ ಸಾಧ್ಯತೆ ಹೆಚ್ಚು.


ಸಾಮಾನ್ಯವಾಗಿ ಹೋರಿಯನ್ನು ಕೊಳ್ಳುವಾಗ ಸಾಟಿ ಯಾಪಾರದವರು, ಮೇಲ್ಕಂಡ ದೋಷಗಳ ಜೊತೆಗೆ ಹತ್ತು ಹಲವು ಅವಗುಣಗಳನ್ನು ಗುರುತಿಸುತ್ತಾರೆ. ಹಲ್ಲುಗಳು ಅಡ್ಡ ಹುಟ್ಟಿದರೆ ಅದು ಕೋಡಲ್ಲು. ಹೋರಿಯಲ್ಲಿ ಬಳ್ಳಿ ಕೆಳಭಾಗಕ್ಕೆ ಜಾಸ್ತಿ ಜಗ್ಗಿದರೆ ಅದು ಉರಿಮಣಿ ಹೋರಿ, ಮುಖದ ತುಂಬಾ ಬಿಳಿ ಮಚ್ಚೆಗಳಿದ್ದರೆ ಅದು ಗಲ್ಲಾಳು ಸ್ವಾಮಿ ಹೋರಿ, ಹೋರಿಯ ಮುಂದಲ ಕಾಲುಗಳು ತಿರುವು ಗಾಲುಗಳಾಗಿದ್ದರೆ ಅದು ಅಡ್ಡಗಾಲು ಹೋರಿ. ಹಿಂದಲ ಕಾಲುಗಳನ್ನು ಅಕ್ಕಪಕ್ಕ ಎಸೆದುಕೊಂಡು ಹೋದರೆ ಅದನ್ನು ಚೋರಗಾಲ ಎನ್ನುವರು. ನಡೆಯುವಾಗ ಹಿಂದಲ ಕಾಲುಗಳು ನೆಲಕ್ಕೆ ಹೊಡೆದರೆ ತರಗಾಲು ಎನ್ನುತ್ತಾರೆ. ಕೆಳಭಾಗದ ಗದ್ದ ಹಿಂಭಾಗಕ್ಕೆ ಇದ್ದರೆ ಅದನ್ನು ಸ್ವಾರಬಾಯಿ ಎನ್ನುವರು. ಬಾಲವು ಮೊಳಕಾಲಿನಿಂದ ಮೇಲಕ್ಕಿದ್ದರೆ ಅದು ಮಿಡಿಬಾಲ. ಬಾಲದ ಕೂದಲುಗಳು ಬೆಳ್ಳಗಿದ್ದರೆ ಅದು ಹೂಬಾಲ. ಬುರುಡೆ ದಪ್ಪನಾಗಿದ್ದರೆ ಅದು ಕೋಣನ ಬುರುಡೆ. ಕಿರುಗೊರ್ಚೆಗಳು ನೆಲಕ್ಕೆ ಮುಟ್ಟಿದರೆ ಅದು ಪಾಪಸ ಕಾಲು. ಹೋರಿಯ ಬೆನ್ನಿನ ಮೂಳೆಗಳು ಭಾರಿ ಬಳುದಾಗಿ ಅಥವಾ ಇಳಿಜಾರಾಗಿದ್ದರೆ ಅದು ಇಳಿಬುಗುರಿ, ಎರಡೂ ಕಡೆಯ ಕಿಬ್ಬೊಟ್ಟೆಗಳನ್ನು ಹಿಚುಕಿ ನೋಡಿದಾಗ ಮೂಳೆ ಮೋಟಾಗಿದ್ದರೆ ಅದು ಮೋಟು ಬುಗುರಿ. ಬಿಳಿಗೊರ್ಚಿನ ಹೋರಿಯನ್ನು ಯಾರೂ ಖಾಯಸ್ಸು ಮಾಡುವುದಿಲ್ಲ.

ಯಾಪಾರದಾರರು ತಮ್ಮ ವ್ಯವಹಾರವನ್ನು ಕುದುರಿಸುವುದಕ್ಕೆ, ಹಲವು ದೋಷವುಳ್ಳ ಸುಳಿಗಳನ್ನು ಗುರುತಿಸುತ್ತಾರೆ. ಈ ಸುಳಿಗಳಿಂದ ಹೋರಿಯನ್ನು ಕಟ್ಟಿದ ಮನೆತನ ಹಾಳಾಗಿದೆ ಎಂದು ಹೇಳುತ್ತಿರುತ್ತಾರೆ. ಎರಡು ಕಣ್ಣುಗಳ ಕೆಳಭಾಗಕ್ಕೆ ಸುಳಿ ಇದ್ದರೆ ಅದು ಮುಕ್ಕಣ್ಣ ಸುಳಿ, ಹಣೆಯ ಮೇಲೆ ಜೋಡಿಯಲ್ಲಿ ಎರಡು ಸುಳಿಗಳಿದ್ದರೆ ಅದು ಬಾಸಿಂಗ ಸುಳಿ. ಎರಡು ಕೊಂಬಿನ ಮಧ್ಯದಲ್ಲಿರುವ ಸುಳಿ ಗೂಜೆ ಸುಳಿ. ಕುತ್ತಿಗೆಯ ಎರಡೂ ಪಕ್ಕದಲ್ಲಿ ಸುಳಿ ಇದ್ದರೆ ಅದು ಪಟಗಣ್ಣ ಸುಳಿ, ಹೆಗಲ ಮೇಲೆ ಸುಳಿ ಇದ್ದರೆ ಅದು ನೊಗಮುರುಕ ಸುಳಿ, ಹೋರಿಯ ಮುಡ ಅಥವಾ ಭುಜದ ಮೇಲೆ ಸುಳಿ ಇದ್ದರೆ ಅದು ಪಾತಾಳ ಸುಳಿ, ಮುಡದ ಹಿಂಭಾಗದಲ್ಲಿದ್ದರೆ ಛತ್ರಿ ಸುಳಿ. ಈ ಸುಳಿಯ ಮೇಲೆ ಬಿದ್ದ ನೀರು ಮುಂದಿನ ಪಾದದ ಮೇಲೆ ಬಿದ್ದರೆ ತೊಂದರೆಯಾಗುತ್ತದೆ.

ಮುಂದಿನ ಕಾಲುಗಳ ಹಿಂಭಾಗದಲ್ಲಿ ಎರಡು ಸುಳಿಗಳಿರುತ್ತವೆ. ಅವುಗಳನ್ನು ಬೇಡಿ ಸುಳಿ ಎನ್ನುತ್ತಾರೆ. ಅವುಗಳನ್ನು ಕಟ್ಟಿಕೊಂಡವರು ಬೇಡಿ ಹಾಕಿಕೊಳ್ಳುವುದು ಗ್ಯಾರಂಟಿ ಎನ್ನುವುದೂ ಉಂಟು. ಹಿಂಭಾಗದ ಕಾಲಿನ ಮೇಲೆ ಸುಳಿ ಇದ್ದರೆ ಅದು ಕೀಲು ಸುಳಿ. ಬಾಲದ ಅಕ್ಕಪಕ್ಕ ಎರಡು ಸುಳಿಗಳಿದ್ದರೆ ಅದು ಪರಕೆ ಸುಳಿ. ಈ ಸುಳಿ ಇರುವ ಹೋರಿಯನ್ನು ಕಟ್ಟಿದರೆ ಕಟ್ಟಿದವನ ಮನೆ ಕಸಗುಡಿಸಿದಂತಾಗುತ್ತದೆ ಎನ್ನುತ್ತಾರೆ. ಎದೆಯ ಮುಂಭಾಗದಲಿ ಅಕ್ಕ ಪಕ್ಕ ಸುಳಿ ಇದ್ದರೆ ಅದು ಗುಂಡಿಗೆ ಸುಳಿ.

ಈ ಎಲ್ಲಾ ಸುಳಿಗಳನ್ನು ರೈತನ ಹಿನ್ನಡೆಗೆ ಕಟ್ಟಿಹಾಕಿ, ಕೆಲವು ಸುಳಿಗಳನ್ನು ಶುಭದ ಸಂಕೇತವೆಂದೂ ಗುರುತಿಸುತ್ತಾರೆ. ಒಳ್ಳೆಯ ಜಾತಿಯ ಹೋರಿಯಲ್ಲಿ ಸುಳಿಯು ನಡುಬೆನ್ನಿನ ಮೇಲಿದ್ದರೆ ಅದನ್ನು ತಾಯಿಸುಳಿ ಎನ್ನುತ್ತಾರೆ. ಎರಡು ಕಣ್ಣುಗಳ ಮೇಲ್ಭಾಗದ ಮಧ್ಯದಲ್ಲಿ ಸುಳಿ ಇದ್ದರೆ ಅದನ್ನು ಈಶ್ವರ ಸುಳಿ ಎನ್ನುತ್ತಾರೆ. ಎಲ್ಲಾ ಒಳಿತು, ಕೆಡುಕುಗಳನ್ನು ಈ ಸುಳಿಗಳ ಸುತ್ತ ಸುಳಿದಾಡುತ್ತಿದ್ದರೆ, ಇನ್ನೊಂದು ಮಗ್ಗುಲಿನ ನೋಟ ಭಿನ್ನವಾಗಿದೆ. ಈ ಸುಳಿಗಳನ್ನು ರಾಸುಗಳ ಅಂಗರಚನೆಗೆ, ಅನಾಟಮಿಗೆ ಹೋಲಿಸುವ ಒಂದು ಪ್ರಯತ್ನದಂತೆ ಅಂತಲೂ ಅನ್ನಿಸುತ್ತದೆ. ಈ ದಿಕ್ಕಿನಲ್ಲಿ ಸಂಶೋಧನೆ ನಡೆಯಬೇಕಿದೆ.

❑



## ಬೇಸಾಯ ಕಲಿಸುವುದು

**ಸಾ**ಮಾನ್ಯವಾಗಿ ಮುಂಗಾರಿನ ಹಿಂದಿನ ದಿನಗಳಲ್ಲಿ ಎರಡು ಮೂರು ವರ್ಷಗಳ ಕರುಗಳನ್ನು ಎರಡು ದೊಡ್ಡ ತೆಂಗಿನ ಎಡೆಮಟ್ಟೆಗಳಿಗೆ ಕಟ್ಟಿ ಹಾಳು ಬಿದ್ದ ಕಣಗಳಲ್ಲಿ ಗೀಚಾಡುತ್ತಿರುವುದನ್ನು ನೋಡಿರುತ್ತೀರಿ. ಯದ್ವಾತದ್ವಾ ಓಡಾಡುತ್ತಾ ಕರುಗಳು ಎಳೆಯುತ್ತಿರುತ್ತವೆ. ನಂತರ ಮರಳಿನ ನೆಲದ ಮೇಲೆ ಸ್ವಲ್ಪ ಭಾರ ಬಿಟ್ಟು ಅದೇ ಎಡೆಮಟ್ಟೆಗಳ 'ನೇಗಿಲ'ನ್ನು ಎಳೆಸುತ್ತಾರೆ. ಇದಾದ ನಂತರ ಹಸಿರು ಕುಂಟೆಯನ್ನು ಒಂದೆರಡು ಗಂಟೆ ಹೊಲದಲ್ಲಿ ಹೂಡುತ್ತಾರೆ. ಹಸಿರು ಕುಂಟೆ ಅಥವಾ ಹರತೆಯನ್ನು ಅಭ್ಯಾಸ ಮಾಡಿಕೊಂಡಾದ ಮೇಲೆ, ಮಾಮೂಲಿನಂತೆ ನೇಗಿಲನ್ನು ಹೂಡಿ ಹೊಡೆಯಲು ಶುರು ಮಾಡುತ್ತಾರೆ. ಹೊಲಕ್ಕೆ ಹೋಗುವಾಗ, ಬರುವಾಗ ಖಾಲಿ ಗಾಡಿಗಳನ್ನು ಈ ಕಲಿಕೆ ಕರುಗಳಿಗೆ ಹೂಡಿ, ಹಾದಿಯ ಗಲಾಟೆಯ ವಾತಾವರಣಕ್ಕೆ ರೂಢಿ ಮಾಡುತ್ತಾರೆ. ಹಲಬೆ ಮುಂತಾದ ಸುಲಭದ ಕೆಲಸಗಳನ್ನು ಕಲಿಕೆಯ ಮೊದಲ ವರ್ಷದಲ್ಲಿ ಮಾಡುತ್ತಾರೆ. ಆಗ ಹೆಗಲೆಲ್ಲಾ ದಡ್ಡುಗಟ್ಟಿದಂತಾಗಿ, ಕಲಿಕೆಯ ಕರುಗಳು ಹೆಗಲಿಗೆ ಬಲ ಕೊಟ್ಟು ಎಳೆಯಲು ಆರಂಭಿಸುತ್ತವೆ ಹಾಗಾಗಿಯೇ ಈ ಕಲಿಸುವ ಕ್ರಿಯೆಯನ್ನು ಹೆಗಲು ಮಾಡುವುದು ಎನ್ನುತ್ತಾರೆ. ಆಗ ಅವುಗಳ ನೇಗಿಲನ್ನು ಒತ್ತಿ ಹಿಡಿಯದೆ, ಸುಮಾರಾಗಿ ಎಳೆಸುತ್ತಾ, ಆ ವರ್ಷ

ದೊಡ್ಡ ಎತ್ತುಗಳಲ್ಲಿ ನಾಲ್ಕು ಸಾಲು ಗೆಯ್ಯುವವರು ಈ ಕರುಗಳಲ್ಲಿ ಆರು ಸಾಲು ಗೇಯ್ದು ಆ ವರ್ಷದ ಆರಂಭ ಮಾಡುತ್ತಾರೆ.

ಮಣ್ಣಿನ ಗುಣವೂ ಕಲಿಕೆಯ ಕರುಗಳ ವಯಸ್ಸನ್ನು ನಿರ್ಧರಿಸುತ್ತದೆ. ಒರಟು ಭೂಮಿಯಲ್ಲಿ ಮೂರು ವರ್ಷವಾಗಲೇಬೇಕು. ಮೂರನೆಯ ವರ್ಷದಲ್ಲಿ ಕಲಿಸಿ ನಾಲ್ಕನೆಯ ವರ್ಷದಲ್ಲಿ ಸ್ವತಂತ್ರವಾಗಿ ಅವುಗಳಲ್ಲಿಯೇ ಆರಂಭ ಮಾಡಬಹುದು. ಮದುಳು ನೆಲದಲ್ಲಿ ಒಂದು ವರ್ಷಕ್ಕೆ ಆರಂಭ ಕಲಿಸಲು ಆರಂಭಿಸುತ್ತಾರೆ. ಕಲಿಕೆಯ ಹಂತದಲ್ಲಿ ತೀರಾ ಗಾಬರಿ ಬಿದ್ದು ಓಡಾಡುತ್ತಿದ್ದರೆ, ಇನ್ನಿಬ್ಬರನ್ನು ಕರೆದುಕೊಂಡು, ಅವರು ಆ ಕಡೆ, ಈ ಕಡೆ ನೊಗ ಹಿಡಿದುಕೊಂಡು ಹೊಲವನ್ನೆಲ್ಲಾ ಸುತ್ತುತ್ತಾರೆ. ಒಂದು ವಾರ ಹೀಗೆ ಮಾಡಬೇಕಾಗುತ್ತದೆ. ಒಂದು ವಾರದ ನಂತರವೂ ಯಾವುದಾದರೂ ಹೊಂದಿಕೊಳ್ಳದಿದ್ದರೆ, ಆ ಕಡೆಯ ಕರುವಿಗೆ ಹೊರಗೂಟ ಹಾಕಿ ಹೊಡೆಯುತ್ತಾರೆ. ಹೊರಗೂಟ ಹಾಕಿ ಹೊಡೆಯುವುದರಿಂದ ಆ ಕರುವಿಗೆ ಭಾರ ಕಮ್ಮಿಯಾಗಿ ಚುರುಕಾಗಿ ಎಳೆಯುತ್ತದೆ.

ಕಲಿಸುವಾಗ ಸೂಕ್ಷ್ಮವಾಗಿ ಗೆಯ್ಯಬೇಕು. ಅವುಗಳಿಗೆ ಖುಷಿ ಪಡಿಸಿಕೊಂಡು ಗೆಯ್ಯುತ್ತಾ ಹೋಗಬೇಕು. ಈ ಹಂತದಲ್ಲಿ ಅತಿಯಾದ ಹೊಡೆತ ಕೊಟ್ಟು ಒತ್ತಡ ಹಾಕಿದರೆ, ಅವು ಕಳ್ಳ ಬೀಳುತ್ತವೆ. ನಂತರ ಅವು ಕಳ್ಳದನ ಅನಿಸಿ, ಇಡೀ ಜೀವಮಾನದಲ್ಲಿ ಅದನ್ನೇ ರೂಢಿ ಮಾಡಿಕೊಳ್ಳುತ್ತವೆ. ಅತಿಯಾಗಿ ದುರುಪಯೋಗ ಮಾಡಿಕೊಂಡು ಹೆಗಲು ಕಿತ್ತೋದ್ರೆ, ಇನ್ನು ಆ ಹೋರಿಗೆ ಬೆಲೆಯೇ ಇಲ್ಲ. ಬಾಲ, ಕೋಡು, ಹಲ್ಲು ಇರದಿದ್ದರೂ ನಡೆಯುತ್ತದೆ. ಆದರೆ ಹೆಗಲೇ ಹೋರಿಗೆ ಭೂಷಣ. ಅತಿಯಾಗಿ ಹೊಡೆದು, ಮೈಯಿ ಕಿತ್ತರೆ, ಸುಳಿ ಇತ್ತು ಅದಕೋಸ್ಕರ ಬೆಂಕಿ ಇಟ್ಟು ಸುಟ್ಟಿದ್ದಾರೆ. ಅಂತ ಜರಿಯುತ್ತಾರೆ. ಕೆಲವು ಎತ್ತುಗಳು ಮೇಲಕ್ಕೆ ಏಳುವುದೇ ಇಲ್ಲ. ಬೆನ್ನ ಮೇಲೆ ಬಾರಿಸುತ್ತಾರೆ ; ಮೂಗು ಬಾಯಿ ಅಮುಕಿಕೊಳ್ಳುತ್ತಾರೆ. ಆದರೂ ಜಪ್ಪಯ್ಯ ಎನ್ನದಿದ್ದರೆ, ಕಣ್ಣಿಗೆ ಕಾರ ಹಾಕುವುದರ ಮೂಲಕವೊ ; ದನಗಳ ತಿಕಕ್ಕೆ ಬೆಂಕಿ ಇಡುವುದರ ಮೂಲಕವೊ ಎಬ್ಬಿಸುತ್ತಾರೆ. ಹಠಮಾರಿ ದನಗಳು ಇವೆಲ್ಲಕ್ಕೂ ಬಗ್ಗದಿದ್ದಾಗ, ಜೀವಂತ ಕೋಳಿಯ ಕತ್ತನ್ನು ದನಗಳ ತಿಕಕ್ಕೆ ದೂಡಿದಾಗ, ದಿಗ್ಗನೆ ಎದ್ದು, ಮೈ ಕೊಡವಿಕೊಳ್ಳುತ್ತವೆ.

ಒಂಟಿ ಹೋರಿ ಇದ್ದರೆ, ಯಾವ ಕಡೆಗೆ ಬೇಕಾದರೂ ಕಲಿಸಬಹುದು. ಆದರೆ ಜೋಡಿಯಲ್ಲಿ ಇದ್ದಾಗ, ಕಲಿಸಿದ ಕಡೆಗೆ ಮಾತ್ರ ಕೊರಳನ್ನು ಕೊಡುತ್ತವೆ. ಎಡ-ಬಲ ತಪ್ಪಿಸಿ ನೊಗ ಹೂಡಲು ಪ್ರಯತ್ನಿಸಿದರೆ, ಅವುಗಳೇ ತಂತಾವೇ ತಮ್ಮ ಸ್ಥಾನಕ್ಕೆ ಬಂದು ನಿಲ್ಲುತ್ತವೆ. ಸಾಮಾನ್ಯವಾಗಿ ಜಾಡಾಗಿರುವ ಜಾಬಾಗಿರುವ, ಚುರುಕಾಗಿರುವ ಧಾಡಸಿಯಾಗಿರುವ ಹೋರಿಯನ್ನು ಬಲಗಡೆಗೆ ಹೂಡುತ್ತಾರೆ. ಯಾಕೆಂದರೆ ಬಲಗಡೆ ಎತ್ತು ಗೆಯ್ಯುವಾಗ ತಿರುವಿ ತಿರುವಿ ಬರಬೇಕು ; ಜಾಸ್ತಿ ತಿರುಗಬೇಕು. ಮತ್ತೆ ಎಡಗಡೆ ಎತ್ತು ಜೋರಾಗಿದ್ದರೆ, ಯಾವಾಗಲೂ ಅದರ ಹಗ್ಗವನ್ನು ಜೋತು ಹಿಡಿದಿರಬೇಕು. ಒತ್ತಾರಿನಲ್ಲಿ ಈ ಗೆರೆಯಲ್ಲಿ ಹೋಗಿ ಅದರ ಪಕ್ಕದ ಗೆರೆಯಲ್ಲಿ ಬರಬೇಕು. ಒತ್ತಾರಿನಲ್ಲಿ ಮನುಷ್ಯನಿಗೆ ಕಷ್ಟ, ದನಗಳಿಗೆ ಸುಲಭ. ಆದರೆ ಸಾಲಾರಿನಲ್ಲಿ ಎಳೆಯುವ ಎತ್ತುಗಳಿಗೆ ಶ್ರಮವಾದರೆ, ಗೇಯುವವನಿಗೆ ನೇಗಿಲು ಎತ್ತಿ ಇಡುವ

ಪ್ರಸಂಗ ದಿನದಲ್ಲಿ ಎರಡು ಸಾರಿ ಬರುತ್ತದೆ ಅಷ್ಟೆ. ಒತ್ತಾರಿನಲ್ಲಿ ಎಡಗಡೆ ಮತ್ತು ಬಲಗಡೆಯ ಎತ್ತುಗಳ ಪ್ರತಿ ಸಾರಿ ಗೆಯ್ದ ನೆಲದಲ್ಲಿ ಬದಲಾಯಿಸಿಕೊಂಡು ಓಡಾಡುತ್ತವೆ. ಒತ್ತಾರಿನಲ್ಲಿ ದನಗಳಿಗೆ ಸಲೀಸು.

ಹತ್ತು ಗೇಣುಗಳಿರುವ ನೊಗವನ್ನು ಮಾಮೂಲಿಯಾಗಿ ಬಳಸುತ್ತಾರೆ. ಎಳೆಂಟು ಗೇಣಿದ್ದರೂ ನಡೆಯುತ್ತದೆ. ಅಡಿಕೆ ತೋಟದಲ್ಲಿ ಗೆಯ್ಯುವುದಕ್ಕೆ ಐದು ಗೇಣಿನ ನೊಗದ ನೇಗಿಲು ಸೂಕ್ತ. ನೊಗವನ್ನು ನೀರಬಚ್ಚೆ ಮರದಲ್ಲಿ ಮಾಡಿದ್ದರೆ ಮಾತ್ರ ದನಗಳ ಹೆಗಲಿಗೆ ಬೆಣ್ಣೆ ಇದ್ದಂಗೆ ಇರುತ್ತದೆ.

❑





## ಲಾಳ ಕಟ್ಟೋದು

ಹಳ್ಳಿಗಳ ಸಂತೆಗಳಲ್ಲಿ ಎತ್ತುಗಳನ್ನು ಬೀಳಿಸಿಕೊಂಡು ಸಾಬರು ಲಾಳ ಕಟ್ಟುವ ದೃಶ್ಯ ಸಾಮಾನ್ಯವಾದದ್ದು. ಲಾಳ ಮನುಷ್ಯರಿಗೆ ಚಪ್ಪಲಿ, ಮೆಟ್ಟಿನಂತೆ ಕಾಲಿಗೆ ರಕ್ಷಣೆ ಕೊಡುತ್ತದೆ. ಲಾಳ ಇಲ್ಲದೆ ಎತ್ತುಗಳ ಬಿರುಸಾಗಿ ಕೆಲಸ ಮಾಡುವುದಿಲ್ಲ. ಲಾಳ ಇಲ್ಲದೆ ಅಸ್ಲೆ ಮೇಲೆ ಸಹ ಕಾಲು ಎಳೆದುಕೊಂಡು ಹೋಗುತ್ತವೆ. ೨೦ ಗುಂಟೆ ಗೇಯೋ ಎತ್ತು ೧೦ ಗುಂಟೆ ಗೆಯೋದು ಸುಸ್ತು. ಭರಂದಾಗಿ ಹೋಗೋ ಎತ್ತು ಸಹ ಬರೀ ಕಾಲಿನಲ್ಲಿ ಮಲಗಿಕೊಂಡು ಬಿಡುತ್ತವೆ. ಕೆಲವು ಸಾರಿ ಕಾಲಿನಲ್ಲಿ ರಕ್ತ ಬಂದು ಬಿಡುತ್ತದೆ. ಆದ್ದರಿಂದ ದನ ಸಾಕುವವರು ಈ ವಿಷಯದಲ್ಲಿ ಅತ್ಯಂತ ಎಚ್ಚರಿಕೆ ವಹಿಸುತ್ತಾರೆ. ಪೂರಾ ಸವೆದ ಮ್ಯಾಲೆ ಕಟ್ಟಿಸಿದ್ರೂ ನಂತರದ ಹತ್ತು-ಹನ್ನೆರಡು ದಿವಸ ಕುಂಟು ಬರುತ್ತವೆ. ಅದಕ್ಕೆ ಹಿಂದೆ ಕಟ್ಟಿಸಿದ ಲಾಳ ಪೂರಾ ಸವೆಯುವುದಕ್ಕೆ ಬಿಡಬಾರದು.

ಲಾಳ ಕಟ್ಟುವ ವೃತ್ತಿ ಬಹಳ ಸೂಕ್ಷ್ಮವಾದ ಕಸುಬು. ಇದನ್ನು ವಂಶಪಾರಂಪರ್ಯವಾಗಿ ಮಾಡಿಕೊಂಡು ಬಂದಿರುವುದೇ ಹೆಚ್ಚು.

ಆ ಕಟ್ಟುವ ಕಲೆಯೇ ವಿಶಿಷ್ಟವಾದದ್ದು. ಮೃಗ ಬಲದ ಎತ್ತುಗಳ ಶಕ್ತಿಯನ್ನು ಸೊಂಟಕ್ಕೆ ಹಗ್ಗ ಹಾಕಿ ಬಿಗಿಯುವುದರ ಮೂಲಕ ಕಡಿಮೆ ಮಾಡುತ್ತಾರೆ. ಆಗ ತನ್ನಂತಾನೆ ಎತ್ತು ಕುಸಿದು ಬೀಳುತ್ತದೆ. ಹಿಂದಿನ ಕಾಲನ್ನು ಮೊದಲು ಕಟ್ಟುತ್ತಾರೆ. ಮುಂದಿನ ಕಾಲುಗಳನ್ನು ತೆಗೆದುಕೊಂಡರೆ ಕೂಡಿಸುವುದಕ್ಕೆ ಸಾಧ್ಯವಿಲ್ಲ. ಆದರೆ ಹಿಂದಿನ ಕಾಲುಗಳನ್ನು ಕಟ್ಟಿದ ಮೇಲೆ, ಮುಂದಿನ ಕಾಲುಗಳನ್ನು ತೆಗೆದುಕೊಂಡು ಕತ್ತರಿಹಾಕಿ ಹಗ್ಗದಲ್ಲಿ ಕಟ್ಟುತ್ತಾರೆ. ಇನ್ನೊಂದು ಥರದಲ್ಲಿ ಕೆಡವಬಹುದು. ಸುತ್ತಾ ಹಗ್ಗ ಹಾಕಿ ತೋನ್‌ತಾರಲ್ಲ ಆಗ ತೊಡೆ ಸಂದೀಲಿ ಹಗ್ಗ ತಕ್ಕಂಡು ಬಾಲದ ಗೆಡ್ಡೆ ಹಿಡಿದುಕೊಂಡು ಬೀಳಿಸುತ್ತಾರೆ. ಅದರಲ್ಲೂ ಬೀಳಲಿಲ್ಲಾಂದ್ರೆ ಮುಂದಿನ ಕಾಲನ್ನು ಮಡಗಾಲು ಮಾಡಿ ಬೀಳಿಸುತ್ತಾರೆ.

ಮೊದಲು ಗೊರಸನ್ನು ಸೋಸಿಕೋಬೇಕು. ಸವೆದಿರೊ ಗೊರಚಿನ ನೀಟಿಗೆ ಇನ್ನೊಂದನ್ನು ಕತ್ತರಿಸಬೇಕು. ಆದರೂ ಇದನ್ನೂ ಸೋಸಿಕೊಳ್ಳಬೇಕು. ಇಲ್ಲಾಂದ್ರೆ ಬೆಳೆದಿರೋ ಗೊರಚಿಗೆ ಕಟ್ಟಿದರೆ ಬಿದ್ಹೋಗಿಬಿಡುತ್ತವೆ.

ಬೇಸಿಗೆ ದಿನಗಳಲ್ಲಿ ಗೊರಸು ಒರಟಾಗಿರುತ್ತವೆ. ಆವಾಗ ಚೆನ್ನಾಗಿ ಸೋಸಿ ಕಟ್ಟಬಹುದು. ಮಳೆಗಾಲದಲ್ಲಿ ಸವೆಯೋದು ಜಾಸ್ತಿ. ಯಾಕೆಂದರೆ ಕೆಲಸ ವಿಪರೀತ. ಆಗ ಮಿದುವ್ವು ನೋಡಿಕೊಂಡು ಮೇಲಗಡೆ ಮಳೆ ಹೊಡ್ದು ಕಟ್ಟಬಹುದು. ಒಂದು ಮೊಳೆ ಒಳಗೆ ಹೋದರೂ ಸಾಕು, ಕುಂಟು ಬಂದು ಬಿಡುತ್ತದೆ. ಮಿದುವಿಗ ಮೊಳೆ ಹೋದದ್ದು ಚಕ್ಕಂತ ಗೊತ್ತಾಗಿ ಬಿಡುತ್ತದೆ. ಕಾಲು ತಕ್ಷಣ ಊತ ಬರುತ್ತದೆ. ಅದರಲ್ಲೂ ಮೂರು ಥರ ಕಟ್ತಾರೆ. ದಪ್ಪದ ಎತ್ತುಗಳಿಗೆ ಐದು ತೂತುಗಳಿರುವ ಲಾಳ ಹಾಕುತ್ತಾರೆ. ಅದಕ್ಕೆ ಒಳ್ಳೆಯ ಗೇಜ್ ಇರುವುದನ್ನು ಬಳಸುತ್ತಾರೆ. ಸುಮಾರಾಗಿರೋ ಎತ್ತುಗಳಿಗೆ ನಾಲ್ಕು ತೂತಿನ ಲಾಳ ಹಾಕ್ತಾರೆ. ಸುಮಾರಾದ ಗೇಜನ್ನ ಬಳಸ್ತಾರೆ. ಕರುಗಳಿಗೆ ಕಟ್ಟಬೇಕಾದರೆ, ಒಳ ಗೊರಚಿಗೆ ಸ್ವಲ್ಪ ತೆಳ್ಳನೆಯ ಲಾಳ ಹೊಡಿಯುತ್ತಾರೆ. ಹೊರಗೊರಚಿಗೆ ಸ್ವಲ್ಪ ದಪ್ಪನೆಯದು ಬೇಕಾಗುತ್ತದೆ. ಕಾಲಿಟ್ಟು ತಿರುವಿದಾಗ ಹೊರಗೊರಚು ಸವೆಯುವುದು ಜಾಸ್ತಿ. ಅದಕ್ಕೆ ಕಾಲುಗಳನ್ನು ನೋಡಿ ಹಾಕುತ್ತಾರೆ. ಎರಡೂ ಗೊರಚುಗಳಿಗೂ ತೆಳುವಾಗಿರುವ ಲಾಳಗಳನ್ನು ಹಾಕಿದರೆ, ಹೊರಗೊರಚಿನ ಲಾಳ ಮೊದಲು ಬಿದ್ಹೋಗುತ್ತದೆ.

ಕಾಲು ಸೋಸಿ, ಒಳಗಿನ ಮಿದುವಿಗೆ ಹೋಗದಂಗೆ ಹೊಡೆಯುತ್ತಾರೆ. ಮಿದುವಿಗೆ ಹೋದರೆ ಬೆಳಗ್ಗೆಯೇ ಕೀಳಿಸಿಕೊಂಡು ಹೋಗುತ್ತಾರೆ. ಮಳೆ ಹೊಡೆಯಬೇಕಾದರೆ ಕೊಯ್ಯಮಳೆ ಹೊಡಿಯಬೆಕು. ತೀರಾ ಈಚೆಗೆ ಬಂದ್ರೂ ನಿಲ್ಲುವುದಿಲ್ಲ. ಅಲ್ಲಿಗೆ ಲಾಳ ಸರಿಯಾಗಿ ಸೋಸಿ ಕೂಡಿಸಿಕೊಂಡಿರುತ್ತಾರೆ. ಮನೆಯಲ್ಲಿಯೇ ಮಡಚಿ ತೂತ ಮಾಡಿಕೊಂಡು ಬಂದಿರುತ್ತಾರೆ. ಐದು ಥರದ ಲಾಳಗಳನ್ನು ಮಾಡಿಕೊಂಡು ಬಂದಿರುತ್ತಾರೆ. ಗೋಣಿ ಚೀಲದ ಮೇಲೆ ಸುರಕೊಂಡಿರುತಾರಲ್ಲ ಆ ರಾಶೀಲಿಯಲ್ಲಿರುವ ಲಾಳವನ್ನು ಗೊರಚಿಗೆ ಹಿಡಿದು ನೋಡುತ್ತಾರೆ. ಲಾಳ ಕಬ್ಬಿಣದವು. ಮೊಳೆ ಟೆಂಪರ್ ಆಗಿರಕೂಡದು, ಮಿದುವೂ ಬೇಕಾಗಿಲ್ಲ. ಲಾಳ ಮುರಿತಿದ್ದರೆ ಬೆಣ್ಣೆ ಮುರಿದಂಗೆ ಕಾಣ್ತಾ ಇರಬೇಕು.


ಇಷ್ಟೆಲ್ಲವನ್ನು ಬೇಗ ಮಾಡಿ ಮುಗಿಸಬೇಕು. ಕಡಿಮೆ ಎಂದರೂ ಅರ್ಧ ಗಂಟೆ ಹಿಡಿಯುತ್ತದೆ. ಸೋಸಿಕೊಂಡು, ಲಾಳ ಹೊಡೆದು, ಮಳೆ ಮಡಿಸಿಕೊಳ್ಳಬೇಕು. ಸೋಸುವುದು ಇಲ್ಲಾಂದ್ರೆ ಇಪ್ಪತ್ತು ನಿಮಿಷಕ್ಕೆ ಕಟ್ಟಬಹುದು. ಒಂದು ಗೊರಚಿಗೆ ೪–೫ ಮೊಳೆ ಬರುತ್ತವೆ. ದೊಡ್ಡ ಗೊರಚೆಗಳು, ತಿರುವಿ ಎಸೆಯುವ ಒರಚುಗಳಿಗೆ ಐದು ಮೊಳೆ ಬರುತ್ತವೆ. ಬುಡ್ಡಾಗಿರುವ ದನಗಳನ್ನು ನಾಲ್ಕು ಕಾಲುಕಟ್ಟಿ ಗುಡ್ಡಿಗೆ ಎಳೆದಾಗ, ಶರೀರ ಗುಡ್ಡಿಗಾಗಿ ಉಸಿರು ಕಟ್ಟಿದಂತಾಗಿ ಹೊಟ್ಟೆ ಉಬ್ಬರ ಕಾಣಿಸಿಕೊಳ್ಳುತ್ತದೆ. ಒಂದು ಕಡೆಯ ಕಾಲುಗಳಿಗೆ ಒಂದು ಸಾರಿ ಕಟ್ಟಿ ನಡುವೆ ಬಿಡುವು ಕೊಟ್ಟು, ಇನ್ನೊಮ್ಮೆ ಇನ್ನೊಂದು ಕಡೆಯ ಕಾಲುಗಳಿಗೆ ಲಾಳ ಕಟ್ಟುತ್ತಾರೆ. ಗಿಡ್ಡಾಗಿರುವ ದನಗಳಿಗೆ ರಾತ್ರಿ ಮೇಯಿಸಿಕೊಂಡು ಬರಬೇಡಿ ಎಂದು ಹೇಳಿರುತ್ತಾರೆ.

ಚಿಕ್ಕನಾಯಕನಹಳ್ಳಿಯ ಮಹಮದ್ ಬಷೀರ್ ತಮ್ಮ ಅನುಭವವನ್ನು ಹೀಗೆ ತೆರೆದಿಡುತ್ತಾರೆ: "ಹಿಂದೆ ಸೋಮವಾರ ಬಂದ್ರೆ ಬಿಡುವಿರುತ್ತಿರಲಿಲ್ಲ, ೩೦ ವರ್ಷಗಳಿಂದಲೂ ಲಾಳ ಕಟ್ಟುತ್ತಾ ಬಂದಿದ್ದೇನೆ. ಒಂದು ಜೊತೆಗೆ ೭ ರೂಪಾಯಿಯಿಂದ ೧೫೦ ರೂಪಾಯಿ ಕೂಲಿ ತೆಕ್ಕೊಂಡಿದ್ದೀವಿ. ಈಗ ಹೊಸ ಹುಡುಗರು ಈ ಕೆಲಸಕ್ಕೆ ಬರ್ತಾ ಇಲ್ಲ. ಎತ್ತು ಕೆಡವಿದ ಮೇಲೆ ಇಪ್ಪತ್ತು ನಿಮಿಷದಲ್ಲಿ ಜಾಸ್ತಿ ಅಂದ್ರೆ ಅರ್ಧ ಗಂಟೇಲಿ, ಲಾಳ ಕಟ್ಟಿ ಎತ್ತನ್ನ ಎಬ್ಬರಿಸು ಎನ್ನುತ್ತೀನಿ ಎನ್ನುವ ಧೈರ್ಯ ಬೇಕು ಈ ಕೆಲಸಕ್ಕೆ. ದಿನಕ್ಕೆ ೧೨ ರಿಂದ ೧೫ ಜೊತೆ ಕಟ್ಟುತ್ತೀನಿ".

"ಕಟ್ಟಿದ ಲಾಳ ಬೇಸಿಗೆಯಲ್ಲಿ ಮೂರು ತಿಂಗಳು ಬರುತ್ತವೆ. ಮಳೆಗಾಲದಲ್ಲಿ ಎರಡು ತಿಂಗಳು ಬರ್ತಾವೆ. ಗಾಡಿ ಕೆಲಸ, ಪ್ರತಿ ದಿವಸ ಪಯಣ ಹೊಡೆದರೆ ಬೇಗ ಹೋಗುತ್ತವೆ" ಎನ್ನುತ್ತಾರೆ ಮಾಕಳ್ಳಿ ಗೊಲ್ಲರಹಟ್ಟಿಯ ಚಿಕ್ಕಣ್ಣ, ಟಾರ್ ರೋಡಿನಲ್ಲಿ ಇಪ್ಪತ್ತೈದು ಕಿಲೋ ಮೀಟರ್ ಎತ್ತಿನಗಾಡಿ ಹೋಗಿಬಂದರೆ ಲಾಳಗಳು ಒಂದೇ ದಿನಕ್ಕೆ ಉದುರಿ ಹೋಗುತ್ತವೆ. ಹೊಲ ಗೇಯ್ದರೆ ಮೂರು ತಿಂಗಳು ಬರುತ್ತವೆ. ಮನೆಯ ಹತ್ತಿರ, ಕಾಡು ಹಾದೀಲಿ ಓಡಾಡಿಕೊಂಡಿದ್ದರೂ ಮೂರು ತಿಂಗಳು ಲಾಳ ಇರುತ್ತವೆ. ಆದರೆ ಕೆಸರುಗದ್ದೆ ಗೇಯ್ದರೆ ಒಂದು ತಿಂಗಳಿನಲ್ಲಿ ಉದುರಿ ಹೋಗುತ್ತವೆ. ಟಾರ್ ರೋಡಿನಲ್ಲಿ ಓಡಾಡಿಕೊಂಡಿರುವ ಎಮ್ಮೆಗಳಿಗೂ ಲಾಳ ಕಟ್ಟಿಸುತ್ತಾರೆ, ಇತ್ತೀಚೆಗೆ ಮಿದುವು ಕಾಲಿನ ಸೀಮೆ ಹಸುಗಳಿಗೂ ಲಾಳ ಕಟ್ಟಿಸುವುದು ಕಂಡುಬರುತ್ತಿದೆ.

ಆದರೆ ಈ ವೃತ್ತಿ ಇತ್ತೀಚೆಗೆ ಕ್ರಮೇಣ ಅವಸಾನ ಹೊಂದುತ್ತಿದೆ. ದೈಹಿಕ ಕ್ರಮವನ್ನು ಹೆಚ್ಚು ಬೇಡುವ ಈ ಕಸುಬು ದನಕರುಗಳ ಸಂಖ್ಯೆ ಕಡಿಮೆಯಾಗುತ್ತಿರುವ ಕಾರಣದಿಂದಲೂ ಕ್ಷೀಣಿಸುತ್ತಿರುವುದು ಆತಂಕಕ್ಕೆ ಈಡು ಮಾಡಿದೆ.

❑



## ಕರು ಕಾಣಾಕುವುದು

ಕೆಲವು ಸಾರಿ ಹಸು, ಎಮ್ಮೆ ರಾತ್ರಿ ಹೊತ್ತು ಕರು ಹಾಕಿರುತ್ತವೆ. ಅವು ಏನು ಮಾಡಿದರೂ ಕರುಗಳನ್ನು ಕಂಡರೆ ಹಂಬಲಿಸಿ ಹಾಲು ಕುಡಿಸುವುದಿಲ್ಲ ; ಪ್ರೀತಿಯಿಂದ ಮೈ ನೆಕ್ಕುವುದೂ ಇಲ್ಲ. ಆಗ ರೈತರಿಗೆ ದೊಡ್ಡ ಸಮಸ್ಯೆ. ಯಾಕೆಂದರೆ ಕರು ಇಲ್ಲದೆ ಹಸು ಹಾಲು ಕೊಡುವುದಿಲ್ಲ. ಮತ್ತೆ ಈ ಪರಿಸ್ಥಿತಿ ಕೆಚ್ಚಲುಬಾವಿನಲ್ಲಿ ಕೊನೆಗೊಳ್ಳುವ ಸಾಧ್ಯತೆಯಿರುತ್ತದೆ. ಇದಕ್ಕೆ ಅಲೋಪಥಿಯಲ್ಲಿ ಯಾವುದೇ ಉತ್ತರವಿಲ್ಲ. ಕೆಚ್ಚಲಲ್ಲಿ ಹಾಲು ಇಳಿಸುವುದಕ್ಕೆ ಇಂಜಕ್ಷನ್ ನೀಡಬಹುದು. ಆದರೆ ಆ ಕರುವಿಗೆ ಹಾಲನ್ನು, ಹಸುವಿನ ಮಮತೆಯನ್ನು ಉಣ್ಣಿಸುವುದಕ್ಕೆ ಸಾಧ್ಯವಿಲ್ಲ. ನಮ್ಮ ಅನುಭವಸ್ಥ ಪೂರ್ವಿಕರು ಇದಕ್ಕೆ ಸರಳವಾದ ಚಿಕಿತ್ಸಾ ಪದ್ಧತಿ ರೂಢಿ ಮಾಡಿಕೊಂಡಿದ್ದಾರೆ.

ಕರು ಹಾಕಿ ಒಂದೆರಡು ದಿನ ಕಳೆದರೂ ಹಸು ತಟಸ್ಥವಾಗಿದೆ ಎನ್ನಿ. ಕೃತಕವಾಗಿ ಮತ್ತೊಮ್ಮೆ ಕರು ಹಾಕುವಂತೆ ಮಾನಸಿಕವಾಗಿ ಹಸುವನ್ನು ಸಿದ್ಧಪಡಿಸುತ್ತಾರೆ. ಇದು ಈ ಚಿಕಿತ್ಸೆಯ ಹಿಂದಿರುವ ಮೂಲಮಂತ್ರ. ಮೊದಲು ಹರಳೆಲೆಯ ಚೆಂಡು, ಒಂದು ಚೆಂಡಿನ

ಗಾತ್ರದ್ದು ಮಾಡಿಕೊಳ್ಳುತ್ತಾರೆ. ಯಾಕೆಂದರೆ ಹರಳೆಲೆ ತುಂಬಾ ಮೃದುವಾಗಿರುತ್ತದೆ. ಅದನ್ನು ಒಂದು ದಾರದಿಂದ ಕಟ್ಟಿ, ನೇತಾಡುವುದಕ್ಕೆ ಸ್ವಲ್ಪ ದಾರ ಬಿಟ್ಟಿರುತ್ತಾರೆ. ಮುಖ್ಯವಾಗಿ ಈ ಚಿಕಿತ್ಸೆಗೆ 'ಹಸಿರು' ಅಗತ್ಯವಾಗಿರುತ್ತದೆ. ತುಳಸಿ ಎಲೆ, ಮುಂಗರ ಬಳ್ಳಿ, ತಪಸಿ ಎಲೆಗಳನ್ನು ಚೆನ್ನಾಗಿ ಅರೆಯುತ್ತಾರೆ. ಒಳಕಲ್ಲಿಗೆ ಹಾಕಿ, ಚೆನ್ನಾಗಿ ಕುಟ್ಟಿ ಕುಟ್ಟಿ ಸಣ್ಣದು ಮಾಡಬೇಕು. ಅದಕ್ಕೆ ಸ್ವಲ್ಪ ಬೆಳ್ಳುಳ್ಳಿ, ನೀರುಳ್ಳಿ ಸ್ವಲ್ಪ ಜಾಸ್ತಿ ಮೆಣಸು ಎಲ್ಲಾ ಹಾಕಿ ಅರೆಯಬೇಕು. ಮಜ್ಜಿಗೆಯಲ್ಲಿ ಆ ಹಸಿರನ್ನು ಹಾಕಿ ಕದರಿ, ಹಾಗೇ ಒಂದು ಗಂಟೆ ಬಿಡಬೇಕು. ನಂತರ ಹಸುವಿಗೆ ಆ ಹಸಿರನ್ನು ಕುಡಿಸಬೇಕು. ಮತ್ತೊಂದು ತಟ್ಟೆಯಲ್ಲಿ ಬೆಲ್ಲ, ಬಾಳೆಹಣ್ಣು ಕಲಸಿ ರಸಾಯನ ರೆಡಿ ಮಾಡಿಕೊಂಡಿರಬೇಕು.

ಈಗ ಹಸುವನ್ನು ಕಾಲು ಕಟ್ಟಿ ಕೆಡವಿಕೊಳ್ಳಬೇಕು. ಅದರ ಮಡಿಲುಗಳಲ್ಲಿ (ಯೋನಿ ದ್ವಾರದಲ್ಲಿ) ಕೈಯಿಟ್ಟು, ಗರ್ಭಕೋಶದೊಳಗಿರುವ ಮಡೆಯನ್ನು ತೆಗೆದುಕೊಳ್ಳಬೇಕು. ಹಸು ಈದು ಒಂದೆರಡು ದಿನಗಳಾಗಿರುವುದರಿಂದ, ಮಡೆ ಕೈಗೆ ಸಿಗುತ್ತಿರುತ್ತದೆ. ಅದಕ್ಕೆ ಸ್ವಲ್ಪ ನೀರನ್ನು ಸಿಂಪಡಿಸಿ ಅದನ್ನೆಲ್ಲಾ ಕರುವಿನ ಮೈಯಿಗೆ ಸವರುತ್ತಾರೆ. ನಂತರ ಈಗಾಗಲೇ ರೆಡಿ ಮಾಡಿಕೊಂಡಿರುವ ರಸಾಯನವನ್ನು ಕರುವಿನ ಮೈಗೆ ಸವರುತ್ತಾರೆ. ಅದರ ಜೊತೆಗೆ ಉಪ್ಪನ್ನೂ ಸವರುತ್ತಾರೆ. ಅದನ್ನೆಲ್ಲಾ ಹಚ್ಚಿಯಾದ ಮೇಲೆ ಕಾಲುಗಳನ್ನು ಹಗ್ಗದಲ್ಲಿ ಕಟ್ಟಿದ ಹಸುವಿನ ಮುಂದೆ ಬಿಡುತ್ತಾರೆ.

ಅಷ್ಟು ಹೊತ್ತಿಗೆ, ಹಸುವಿಗೆ ಗೊತ್ತಾಗದಂಗೆ, ಈಗಾಗಲೇ ಮಾಡಿಕೊಂಡಿರುವ ಹರಳೆಲೆ ಚೆಂಡನ್ನು ಗರ್ಭಕೋಶಕ್ಕೆ ನಾಜೂಕಾಗಿ ತೂರಿಸಿರುತ್ತಾರೆ. ಮತ್ತೆ ಕೆಲವರು ಹರಳೆಲೆ ಚೆಂಡಿಗೆ ಬದಲಾಗಿ ಹೂವಾಗಿರದ ಲಕ್ಕೆ ಗಿಡದ ಹೆಬ್ಬೆಟ್ಟು ಗಾತ್ರದ ಕಡ್ಡಿಯನ್ನು ಕಡಿದು, ಅದರ ಸುತ್ತೆಲ್ಲಾ ಬಿಗಿಯಾಗಿ ಲಕ್ಕೆ ಸೊಪ್ಪು ಕಟ್ಟಿ, ಆ ಲಕ್ಕೆ ಸೊಪ್ಪಿನ ಸಿಂಬೆಯನ್ನು ಮಡಿಲಿಗೆ ತೂರಿಸುತ್ತಾರೆ. ಹಸುವಿನ ಗಮನಕ್ಕೆ ಬರದ ಹಾಗೆ ಹರಳೆಲೆ ಚೆಂಡು ಅಥವಾ ಲಕ್ಕೆ ಸೊಪ್ಪಿನ ಸಿಂಬೆಯನ್ನು ಈಚೆಗೆ ಎಳೆಯುತ್ತಾರೆ. ಆಗ ಹಸುವಿಗೆ ಮರು ಹೆರಿಗೆಯಾದಂತಾಗಿ, ಅದು ಮುಂದಿರುವ ಕರುವನ್ನು ನೆಕ್ಕಿಕೊಳ್ಳುವುದಕ್ಕೆ ಶುರು ಮಾಡುತ್ತದೆ.

ಈಗಾಗಲೇ ಹಸುವಿಗೆ ಹಸಿರನ್ನು ಕುಡಿಸಿರುತ್ತಾರೆ. ಆದ್ದರಿಂದ ಹೊಟ್ಟೆಯಲ್ಲಿ ಕೆರೆತ ಆರಂಭವಾಗಿ, ಕೆಚ್ಚಲಲ್ಲಿ ಹಾಲನ್ನು ಇಳಿಸಿಕೊಂಡಿರುತ್ತದೆ. ಆಗ ಈ ಕರುವನ್ನು ಕೆಚ್ಚಲಿಗೆ ತೋರಿಸಿ, ಕುಡಿಸಲು ಶುರುಮಾಡುತ್ತಾರೆ. ನಂತರ ಮಾಮೂಲಿನಂತೆ ಕರು ಕುಡಿಯುವುದಕ್ಕೆ ಹಸು ಅವಕಾಶ ಕೊಡುತ್ತದೆ. ಇದನ್ನು ಕರುವನ್ನು ಹಸುವಿಗೆ ಅಥವಾ ಎಮ್ಮೆಗೆ ಕಾಣಾಕುವುದು ಎನ್ನುತ್ತಾರೆ.


"ಕರು ಹಾಕಿದ ಏಳೆಂಟು ದಿನಗಳ ನಂತರವೂ ಕರು ಕಾಣಾಕಿದೇನೆ" ಎನ್ನುತ್ತಾರೆ ಹಂದನಕೆರೆಯ ಅವಳಿ ರೇವಣ್ಣ, ಇದು ಅವರಿಗೆ ಪಿತ್ರಾರ್ಜಿತ ಜ್ಞಾನ. ಅವರ ತಾತ ಅವಳಿ ದೇವಿಕರಿಯಪ್ಪನಿಂದ, ತಂದೆ ನಿಂಗಪ್ಪನಿಗೆ ದಾಟಿ ಬಂದ ವಿದ್ಯೆ. "ಇದಕ್ಕೆ ಹತ್ತು ಹದಿನೈದು

ರೂಪಾಯಿಯ ಖರ್ಚು ಅಷ್ಟೆ" ಎನ್ನುತ್ತಾರೆ ರೇವಣ್ಣ. ಈಗಲೂ ದೂರದೂರಿಗಳಿಗೆ ಹೋಗಿ ಕರು ಕಾಣಾಕಿ ಬರುತ್ತಿರುತ್ತಾರೆ.

ರೇವಣ್ಣನ ಗೆಳೆಯ ಮಂಜಣ್ಣ ಇದಕ್ಕೆ ಹಿನ್ನೆಲೆಯಾಗಿ ಒಂದು ಕತೆ ಹೇಳುತ್ತಾರೆ : "ಒಮ್ಮೆ ಪರಮಾತ್ಮ ಕರು ಕುಡಿಯುತ್ತಿರುವುದನ್ನು ಕಂಡು ನಗಾಡುತ್ತಿದ್ದನಂತೆ. ಅಲ್ಲಿಗೆ ಆ ಟೈಮಿಗೆ ಬಂದ ನಾರದ 'ಏನು ಮಮತೆ, ಮಮಕಾರ ಕೊಟ್ಟಿದೀಯ ಪರಮಾತ್ಮ' ಅಂದನಂತೆ. ಮರುಕ್ಷಣವೇ 'ಎಲ್ಲಿ ಒಂದಿನಿಮಿಷ ಆ ಮಮಕಾರವನ್ನು ವಾಪಸ್ಸು ತಕ್ಕಂಡುಬಿಡು' ಎಂದನಂತೆ ಅದರಂತೆ ಪರಮಾತ್ಮ ಹಸು ಕರುವಿನಲ್ಲಿದ್ದ ಮಮತೆಯನ್ನು ವಾಪಸ್ಸು ಪಡೆದನಂತೆ, ಆಗ ಹಸುವಿಗೆ ಕರುವನ್ನು ಕಂಡುಕೊಳ್ಳದಿಕ್ಕೆ ಬರಲಿಲ್ಲ. ಕರೀನ ಗೋಳನ್ನು ನೋಡೋದಿಕ್ಕೆ ಆಗದ ನಾರದ 'ಶಿವಾ, ಶಿವಾ, ಮಮತೆ ಎನ್ನೋದು ಎಷ್ಟು ದೊಡ್ಡದಯ್ಯಾ, ಬಿರೀನ, ಮೊದಲು ಹೆಂಗಿತ್ತೊ ಹಂಗೆ ಮಾಡು ತಂದೆ' ಗೋಗರೆದನಂತೆ. ಹೀಗೆ ಶಿವ, ನಾರದ ಮಾಡಿದ ತಮಾಷೆ, ಹಾಕ್ಸಾಲ ಇನ್ನೂ ಕೆಲವು ಹಸು, ಕರುಗಳಲ್ಲಿ ಇನ್ನೂ ಉಳಿದಿದೆಯಂತೆ." ಆ ತಮಾಷೆಗೆ ಪರಿಹಾರ ಅಂದರೆ ಹೀಗೆ ಕರು ಕಾಣಾಕುವುದು. ಹೀಗೆ ಕರು ಕಾಣಾಕುವ ಪರಮ ವಿದ್ಯೆಯನ್ನು ಸಹ ಈ ನಮ್ಮ ಅನಕ್ಷರಸ್ಥ ಜ್ಞಾನಿಗಳು ತಮ್ಮ ಹಿರಿಮೆಯಾಗಿ ತೋರ್ಪಡಿಸಿಕೊಳ್ಳುವುದಿಲ್ಲ.

❑





## ಕುಂದು ಕೇರುವುದು

ಕೆಣಗಾಲ ಮುಗಿದ ನಂತರ ರಾಸುಗಳು ಪ್ರತಿ ಊರಿನಲ್ಲಿಯೂ ಕಾಯಿಲೆ ಬಿದ್ದಿರುವುದು ಕಾಣಸಿಗುತ್ತವೆ. ಆ ಕಾಲದಲ್ಲಿ ಯಾವುದೇ ಊರಿಗೆ ಹೋದರೂ ನಾಲ್ಕಾರು ದನಗಳು ಜ್ವರದಿಂದ ಬಳಲುತ್ತಿದ್ದು, ಮೂಗು ಒಣಗಿ, ಹೊಟ್ಟೆ ದುಂಡರಿಸಿಕೊಂಡು ನಿಂತಿರುತ್ತವೆ. ಅದಕ್ಕೆ 'ಸೆಲೆ' ಎಂದೂ ಕರೆಯುತ್ತಾರೆ. ಜ್ವರ ಕಾಣಿಸಿಕೊಂಡ ಮಾರನೆಯ ದಿನ ಕುಂಟುತ್ತವೆ. ಆಗ ಇದನ್ನು ನಮ್ಮ ಹಿರೀಕರು 'ಕುಂದು' ಎಂದು ಪರಿಗಣಿಸಿ, ಕುಂದು ಕೇರಲು ಒಪ್ಪೆಸರಿನ ಇಬ್ಬರು ಹೆಂಗಸರಿಗೆ ಹೇಳುತ್ತಾರೆ.

ಕುಂದು ಕೇರುವುದಕ್ಕೆ ಜೋಗಿ ಗೊಂಬೆಗಳು ಎಲ್ಲರ ಮನೆಯಲ್ಲಿ ಇರುತ್ತವೆ. ಈ ಗೊಂಬೆಗಳು ಮರದಿಂದ ಕೆತ್ತಿದ್ದು, ಒಂದು ಹೆಣ್ಣು, ಇನ್ನೊಂದು ಗಂಡು ಗೊಂಬೆಗಳಾಗಿರುತ್ತವೆ. ಒಂದೇ ಹೆಸರಿನ ಇಬ್ಬರು ಹೆಂಗಸರು ಎರಡು ಮೊರಗಳಲ್ಲಿ ಒಲೆ ಬೂದಿ ಹಿಡಿದು ಆ ದನಗಳ ಎರಡೂ ಬದಿಯಲ್ಲಿ ನಿಲ್ಲುತ್ತಾರೆ. ಇಬ್ಬರೂ ಒಮ್ಮೆಗೆ ದನಗಳ ಮುಡದಿಂದ ಹಿಡಿದು ಬಾಲದವರೆಗೂ ಬೂದಿ ಕೇರುತ್ತಾ ಹೋಗುತ್ತಾರೆ. ಆ ಎರಡೂ ಮೊರಗಳನ್ನು ದನಗಳ ಹೊಟ್ಟೆ ಕೆಳಗಿನಿಂದ ಮೇಲೊಂದು, ಕೆಳಗೊಂದು ಮಾಡಿ ಪರಸ್ಪರ ಬದಲಾಯಿಸಿಕೊಳ್ಳುತ್ತಾರೆ. ಹೀಗೆ ಮೂರು ಬಾರಿ ಕೇರುತ್ತಾರೆ.

ಈ ವಿಧಿಯನ್ನು ಮೂರು ಹೊತ್ತು ಮಾಡುತ್ತಾರೆ. ದನದ ಒಣಗಿದ ಮೂಗಲ್ಲಿ ನೀರಾಡಲು ಶುರುವಾಗಿ, ಮೆತ್ತಗೆ ಮೆಯ್ಯಲು ಆರಂಭಿಸಿರುತ್ತದೆ. ಭಾರೀ ಬಿಸಿಲಿಗೆ, ಕೆಣಗಾಲದ ನಂತರದ ದೂಳು ದುಸ್ಸಿಗೆ, ನೀರಿನ ಅಲಭ್ಯತೆಗೆ ಸೊರಗಿರುವ ದನಗಳು ಚೇತರಿಸಿಕೊಂಡು, ಮೊದಲಿನಂತಾಗಿ, ರೈತರ ಮೊಗದಲ್ಲಿ ಮುಗ್ನಳಗೆ ಮೂಡಿಸುತ್ತವೆ. ❑



## ಬೀಳು ಬಿದ್ದಿದೆ

ಊರಿನಲ್ಲಿ ದನ ಸತ್ತರೆ ಅದನ್ನು ಊರಾಚೆಯ ಬೀಳಿಗೆ ಹಾಕುತ್ತಾರೆ. ಅದಕ್ಕೆ ದನ ಸತ್ತಾಗ ಊರಿನಲ್ಲಿ ಬೀಳು ಬಿದ್ದಿದೆ ಎಂದು ಕರೆಯುತ್ತಾರೆ. 'ಬೀಳು ಬಿದ್ದಿದೆ' ಎಂಬ ಸುದ್ದಿಯೇ ಊರಾಚೆಯ ಹಟ್ಟಿಗಳಲ್ಲಿ ಸಂಚಲನ ಉಂಟು ಮಾಡುತ್ತದೆ. ಕುಳವಾಡಿ ಚುರುಕಾಗುತ್ತಾನೆ. ನಾಲ್ಕೈದು ಜನ ಕುಳವಾಡಿಯೊಂದಿಗೆ ಬಂದು ಸತ್ತ ದನವನ್ನು ಊರಾಚೆಯ ಬೀಳಿಗೆ ಎಳೆದೊಯ್ಯುತ್ತಾರೆ. ಹದ್ದು ಕಾಗೆ ಎಲ್ಲಾ ಹಾರಾಡಲು ಶುರುಬಿಟ್ಟುಕೊಂಡರೆ, ಸುತ್ತಮುತ್ತಲಿನ ಊರುಗಳಲ್ಲಿ ಸುದ್ದಿ ಹರಡುತ್ತದೆ.

ವಯಸ್ಸಾದ ದನಗಳು ಸತ್ತಾಗ ಚಕ್ಕಳ ಮಾತ್ರ ಸಿಗಿದುಕೊಳ್ಳುತ್ತಾರೆ. ಎಮ್ಮೆ ಅಥವಾ ಕೋಣದ ಚಕ್ಕಳ ನಗಾರಿಗೆ ಸೂಕ್ತ. ೪–೫ ತಿಂಗಳಿನ ಎಮ್ಮೆ ಕರುವಿನ ಚಕ್ಕಳ ಬಿಟ್ಟರೆ ಬೇರೆ ಚಕ್ಕಳದಲ್ಲಿ ತಮ್ಮಟೆಯನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಚರ್ಮದ ಸುಲಿಯುವುದಕ್ಕೆ ಮೊದಲು ಎದೆಗೆ ಚೂರಿ ಹಾಕಿ ಸಿಗಿಯುತ್ತಾರೆ. ಒಂದೊಂದು ಪಕ್ಕೆಯನ್ನು ಒಂದೊಂದು ಸಲ ಇಳಿಸುತ್ತಾ ಹೋಗುತ್ತಾರೆ. ಹೊಟ್ಟೆ ಬಗೆದು ಕಳ್ಳು, ಈರಿ, ದೊಮ್ಮೆ, ಗುಂಡಿಗೆ ಈಚೆಗೆ ತೆಗೆದುಕೊಳ್ಳುತ್ತಾರೆ. ಮುಂದಿನ ಚಪ್ಪೆ ಇಳಿಸಿಕೊಂಡು ಹೊಟ್ಟೆ ಬಗೆದು ಕಳ್ಳು ಪಚ್ಚಿ ಎಲ್ಲಾ ತೆಗೆಯುತ್ತಾರೆ. ದೊಗ್ರಿ ಮೂಳೆಗಳನ್ನು ಕುಡ್ಲಿನಲ್ಲಿ ಕಟ್ ಮಾಡುತ್ತಾರೆ. ಶಿರದಿಂದ ಶುರುಮಾಡಿ ಬೆನ್ನಿನ ಮೂಳೆಗಳನ್ನು

ಕತ್ತರಿಸುತ್ತಾ ಹೋಗುತ್ತಾರೆ. ಚಮ್ಮಡವನ್ನು ಎಲ್ಲಿಯೂ ಘಾಸಿ ಮಾಡದಂತೆ ನಾಜೂಕಿನಲ್ಲಿ ಸಿಗಿಯುತ್ತಾರೆ. ಕಣ್ಣು ಯಾವ ತರಹ ಇದೆಯೋ ಅದೇ ಥರ ಬಿಡಿಸುತ್ತಾರೆ. ಎದೆಗುಂಡಿಗೆ ಮೇಲೆ ಚರ್ಮ ಬಿಡಿಸುತ್ತಾರಲ್ಲ ಅದು ಮಾತ್ರ ಕಷ್ಟದ ಕೆಲಸ. ಮುಖದ ಮೇಲೆಯೂ ಸಲಿಸಾಗಿ ಬಿಡಿಸುತ್ತಾರೆ. ತಲೆ ಬುಡ್ಲೆ ಮೇಲೆ ಏಕ ಸೀಳು ಹಾಕಿ, ಎರಡು ಕಡೆಯಲ್ಲೂ ಸಿಗಿಯುವುದರಿಂದ ಬೆನ್ನಿನ ಮೂಳೆಯ ಚಕ್ಕಳ ಸುಲಭವಾಗಿ ಬರುತ್ತದೆ.

ಚರ್ಮ ತೆಗೆದ ನಂತರ ಕಾಲಿನ ಮೊದಲ ಒಂದು ಮೊಳದಷ್ಟನ್ನೂ ಕಡಿದು ಎಸೆಯುತ್ತಾರೆ. ಕಾಲಿನ ಮೂಳೆ, ದೊಗ್ರಿ ಮೂಳೆ ಪಕ್ಕೆ ಮೂಳೆ ಎಲ್ಲವನ್ನು ಬೇಯಿಸಿ ತಿನ್ನುತ್ತಾರೆ. ಮೂಳೆಗಳನ್ನು ಎರಡು ಇಂಚಿಗೊಂದರಂತೆ ತುಂಡು ಮಾಡಲಾಗುತ್ತದೆ. ಕಾಲಿನ ಗೊರಸನ್ನು ಸಹ ಬೆಂಕಿಯಲ್ಲಿ ಕಾಯಿಸಿ, ಕೆಚ್ಚಿದರೆ ರುಚಿಯಾದ ಮಾಂಸವಾಗುತ್ತದೆ. ಅದನ್ನು ಕಾಲಗೆರೆ ಮಾಂಸ ಎನ್ನುತ್ತಾರೆ. ಆಡು ಕುರಿಗಳಲ್ಲಿ ತಲೆ ಕಾಲು ಮಾಂಸ ಎನ್ನುವಂತೆ ಇದು ಕಾಲಗೆರೆ ಮಾಂಸ. ಬೆನ್ನಿನ ಮೂಳೆಯ ಮೇಲೆ ಮೃದುವಾದ ಖಂಡ ಇರುತ್ತದೆ.

ದನಗಳನ್ನು ಕುಯ್ದು, ನಂತರ ಭಾಗ ಮಾಡಲು ಕೂರುತ್ತಾರೆ. ಭಾಗ ಮಾಡುವಾಗ ಎಲ್ಲರ ಕಣ್ಣು ಎಲ್ಲದರ ಮೇಲೆಯೂ ಇರುತ್ತದೆ. ತೊಳ್ಳೆ, ದೊಮ್ಮೆ, ಕಳ್ಳು ಪಚ್ಚಿ, ಗುಂಡಿಗೆ, ತೊಡೆ ಮೇಲಿನ ಮಾಂಸ ಚಪ್ಪೆ ಮೇಲಿನ ಮಾಂಸ, ಬೆನ್ನಿನ ಮೇಲಿನ ಮಾಂಸ–ಇವುಗಳೆಲ್ಲಾ ಸಮವಾಗಿ ಒಂದೊಂದು ಭಾಗದಲ್ಲಿ ಬೀಳುತ್ತವೆ. ಪಾಲು ಹಾಕುವಾಗ ಎಲ್ಲರೂ ತಮಗೆ ತುಪ್ಪದ ಮೂಳೆ ಬೀಳಲಿ ಎಂದು ಆಸೆ ಪಡುತ್ತಾರೆ. ಉದ್ದಕ್ಕೇ ಇರುವ ಈ ಮೂಳೆಯನ್ನು ಮಧ್ಯಭಾಗಕ್ಕೆ ಕಡಿಯುತ್ತಾರೆ. ಸಾರಿನಲ್ಲಿ ಬೆಂದು ಬಿಸಿಯಲ್ಲಿ ಇರುವಾಗ, ಚೀಪಿದರೆ ತುಪ್ಪ ಚೀಪಿದಂತೆ ಇರುತ್ತದೆ. ಹೀಗೆ ಹಂಚಿ ಹಾಕಿದ, ಪಾಲುಗಳ ರಾಶಿಯೇ ರಾಮಪುರದ ಜಾತ್ರೆಯಲ್ಲಿ ಹಿಂದೆ ಕಂಡುಬರುತ್ತಿತ್ತು. ಅಲ್ಲಿ ಏನೆಂದರೂ ೩೦೦ ಕ್ಕಿಂತ ಮಿಕ್ಕಿ ಕೋಣಗಳು ರಾಮಪುರದಮ್ಮನಿಗೆ ಬೀಳುತ್ತವೆ. ಎಮ್ಮೆಗೆ ಕಾಯಿಲೆಯೀ ಕಸಾಲೆಯೋ ಆಗಿದ್ದಾಗ ಕೋಣನ್ನ ಅಮ್ಮನಿಗೆ ಬಿಡುತ್ತೇವೆ ಎಂಬ ಹರಕೆ ಹೊತ್ತಿರುತ್ತಾರೆ.

ಭಾರಿ ಗಾತ್ರದ ಕೋಣವನ್ನು ಮೊದಲು ಕಡಿಯುತ್ತಾರೆ. ಮುಂದಿನ ಬಲಗಾಲು ಕತ್ತರಿಸಿ ಕೋಣದ ಬಾಯಿಗೆ ಅಡ್ಡಡ್ಡ ಇಡುತ್ತಾರೆ. ಕರ್ಚ ಎಲ್ಲಿ ಸಿಗುತ್ತೋ ಅಲ್ಲಿ ಚೂರಿಯಿಂದ ತೂತು ಹಾಕಿ, ಕರ್ಚ ತೆಗೆದುಕೊಂಡು ಹಣೆ ಬುಡ್ಲೆ ಮೇಲೆ ಇಟ್ಟು ಮಣ್ಣಿನ ಎಣ್ಣೆ ದೀಗೆ ಇಟ್ಟು ದೀಪ ಹಚ್ಚುತ್ತಾರೆ. ಈ ಕಟ್ಟಿದ ಕೋಣವನ್ನು ಮಾರಿಗೆ ಅರ್ಪಿಸಿದ ಮೇಲೆ, ಉಳಿದ ನೂರಾರು ಕೋಣಗಳನ್ನು ಒಂದೇ ಏಟಿಗೆ ಒಂದೊಂದರಂತೆ ಕಡಿಯುತ್ತಾ, ಸಾಗುತ್ತಾರೆ. ಹೀಗೆ ನೂರಾರು ಕೋಣಗಳು ಗ್ರಾಮದೇವತೆಗೆ ಬಿದ್ದಾಗ, ಸುತ್ತಲಿನ ಊರುಗಳಿಗೆ ಹಬ್ಬ, ಆ ಬಾಡನ್ನು ವರ್ಷಗಟ್ಟಲೆ ಇಟ್ಟುಕೊಂಡು ತಿನ್ನುವಂಥ ಒಣಬಾಡು ಮಾಡಿಕೊಳ್ಳುತ್ತಾರೆ. ಮಾಂಸದ ಖಂಡವನ್ನು ಬೆಟ್ಟಿನ ದಪ್ಪಗೆ ಸೀಳು ಮಾಡಿ, ದಡಿಗೆ ನೇತು ಹಾಕುತ್ತಾರೆ. ಅದು ಬಿಸಿಲಿಗೆ, ಮಳೆಗೆ ಚೆನ್ನಾಗಿ ಆರುತ್ತದೆ. ಕಡಲೆ ಬೀಜದಂತೆ ಪೀಸ್ ಮಾಡಿ ಎರಡು ಮೂರು ದಿನ ಒಣಗಿಸುತ್ತಾರೆ. ನಂತರ ನೆಂಟರು ಬಂದಾಗೆಲ್ಲಾ ಒಲೆಯ ಮೇಲೆ ಸಾರಿನ ಜೊತೆ ಇದು ಬೇಯುತ್ತಿರುತ್ತದೆ.

❑

# ಗಂಡು ತುಳಸಿಯೆಂಬ ಗಿಡದ ಬೆನ್ನತ್ತಿ .......

ನಾವೆಲ್ಲಾ ಗೆಳೆಯರು ಪಟ್ಟದದೇವರ ಕೆರೆಗೆ ಹೋಗಿದ್ದೆವು. ಆ ಕೆರೆ ದಟ್ಟ ಕಾಡಿನ ನಡುವೆ ನಳನಳಿಸುತ್ತಿದೆ. ಅದರ ಸುತ್ತೆಲ್ಲಾ ಹಲವಾರು ಜನ ಕಾಡು ಕಡಿದು ತೆಂಗಿನ ಸಸಿ ನೆಟ್ಟಿದ್ದರೂ ಯಾರೂ ಉದ್ಧಾರವಾಗಿಲ್ಲ. ತಂತಿ ಬೇಲಿ, ಕೊರೆಸಿದ ಬೋರ್‌ವೆಲ್ ಬಿಟ್ಟು ಓಡಿಹೋಗಿದ್ದಾರೆ. ಅವರ ಕುಟುಂಬಗಳು ಅವನತಿ ಹೊಂದಿದ್ದಾವೆ. ಯಾವ ಕಾರಣಕ್ಕೊ ಏನೋ ಗೊತ್ತಿಲ್ಲ. ಇದನ್ನೇ ಮುಂದು ಮಾಡಿ ಆ ನೆಲದಲ್ಲಿ ಮುನಿ ಸಂಚಾರವಿದೆ, ಅದಕ್ಕೆ ಆ ನೆಲ ಯಾರಿಗೂ ಒಲಿಯೂವುದಿಲ್ಲ ಎಂಬ ಪ್ರತೀತಿ ಇದೆ. ಇದರಿಂದ ಅಷ್ಟೊ ಇಷ್ಟೊ ಕಾಡು ಉಳಿಯುವಂತಾಗಿದೆ.

ಇಂಥ ಕಾಡಿನ ನಡುವೆ ಒಂದು ರಾತ್ರಿ ತಂಗಿದ್ದೆವು. ಬೆಳಗಿನ ಜಾವ ಎಲ್ಲರಿಗಿಂತ ಮುಂಚೆ ಡಾ॥ ಮುರುಳಿಕೃಷ್ಣ 'ಹೊರಗಡೆ'ಗೆ ಹೋದರು. ಬರುತ್ತಾ ಒಂದು ಗಿಡ ಕೈಯಲ್ಲಿ ಹಿಡಿದುಕೊಂಡು ಬರುತ್ತಿದ್ದರು. ಗಿಡದ ತುಳಸಿ ವಾಸನೆ ಅವರು ನಮ್ಮನ್ನು ಮುಟ್ಟುವುದಕ್ಕಿಂತ ಮೊದಲೇ ಬಂದು ನಮ್ಮನ್ನು ತಲುಪಿತು. ದಿಗ್ಗನೆ ಎಲ್ಲರೂ ಎದ್ದುಕುಳಿತೆವು. ಸೊಂಟದುದ್ದದ ಗಿಡದ ರೂಪಾಯಿ ಅಗಲದ ಎಲೆಗಳನ್ನು ಮುಟ್ಟಿದರೆ ತುಳಸಿ ವಾಸನೆ ಬರುತ್ತಿತ್ತು. ಇದು ನಾಯಿ

ತುಳಸಿ ಅಲ್ಲ. ಅದಕ್ಕಿಂತ ಅಗಲವಾದ ಎಲೆಗಳ ಎತ್ತರದ ಗಿಡ. ಒಂದೇ ಬುಡದಿಂದ ತೆಂಡೆ ತೆಂಡೆಯಾಗಿ ಹಕ್ಕಲು ಒಡೆದ ಗಿಡ. ತುದಿಯ ಅರ್ಧ ಅಡಿ ತೆಂಡೆಯಲ್ಲಿ ಅಲ್ಲಲ್ಲಿ ಚಿಕ್ಕ ಚಿಕ್ಕ ನೀಲಿ ಹೂಗಳು. ಮಾರ್ನಮಿ ಕಾಲ ಅದು. ಈ ಗಿಡದಲ್ಲಿ ಔಷಧಿ ಗುಣ ಇರಲೇಬೇಕು. ದನಗಳ ಉಣ್ಣೆಗೆ ಯಾಕೆ ಬಳಸಬಾರದು ಎನ್ನುವ ಯೋಚನೆ ಎಲ್ಲರಲ್ಲೂ ಮೂಡಿತು.

ಯಾಕೆಂದರೆ, ಯಾವುದೇ ಜನಪದ ಪಶುವೈದ್ಯನಿಗೆ ತಲೆನೋವು-ಈ ಉಣ್ಣೆಕಾಟ. ಉಣ್ಣೆ, ಹೇನುಗಳ ಪೀಡೆ ದನಗಳ ಅನಾರೋಗ್ಯದಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ. ಉಣ್ಣೆಯಿಂದ ದನಕರು ಸದೃಢವಾಗಿ ಬೆಳೆಯುವುದಿಲ್ಲ. ನೀವು ನೋಡಿರಬಹುದು : ಕೆಲವು ರಾಸುಗಳ ಒಂದಿಚು ಮೈಯನ್ನು ಬಿಡದೆ ಆವರಿಸಿಕೊಂಡಿರುತ್ತವೆ. ಹಾಗಾಗಿ ದನಗಳು ಪೇಲವವಾಗಿ, ರಕ್ತ ಹೀನತೆಯಿಂದ ಬಳಲಿ, ರೋಗ ನಿರೋಧಕ ಶಕ್ತಿ ಕಳೆದುಕೊಂಡು, ಹಲವಾರು ರೋಗಗಳ ಗೂಡಾಗಿ ಪರಿವರ್ತಿತವಾಗುತ್ತವೆ. ಅದರಲ್ಲೂ ಮುಖ್ಯವಾಗಿ ಥೈಲೇರಿಯಾ, ಬೇಬಿಸಿಯಾ ಮುಂತಾದ ರೋಗಗಳು ಪ್ರಾಣಾಂತಿಕ. ಮಿಶ್ರತಳಿ ಹಸುಗಳು ದಿಢೀರನೆ ಸತ್ತರೆ, ಬಹಳಷ್ಟು ಬಾರಿ ಅವು ಉಣ್ಣೆ ಸಂಬಂಧಿತ ಕಾಯಿಲೆಗಳೇ ಆಗಿರುತ್ತವೆ. ಈ ಕಾಯಿಲೆಗಳು ಬಂದಾಗ ಎರಡು ಮೂರು ದಿನಗಳ ನಿರ್ಲಕ್ಷ್ಯ ತೋರಿದರೆ ಸಾವು ಕಟ್ಟಿಟ್ಟ ಬುತ್ತಿ.

ಇದು ಕಷ್ಟದ ಒಂದು ಮುಖವಾದರೆ, ಇನ್ನೊಂದು ಮುಖ ಅಲೋಪತಿ ವಿಧಾನದ ಇತಿ-ಮಿತಿಗಳನ್ನು ತೋರುತ್ತದೆ. ಇತ್ತೀಚೆಗೆ ಆಸ್ಪತ್ರೆಯಲ್ಲಿ ಉಣ್ಣೆ ಔಷಧಿಗಳು ಸದಾ ಸಿಗುವುದು ಕಷ್ಟ. ದುಬಾರಿಯಾದ ಈ ಔಷಧಿಗಳನ್ನು ಬಳಸುವಲ್ಲಿ ಬಹಳ ಎಚ್ಚರ ವಹಿಸಬೇಕು. ಔಷಧಿ ತರಲು ಸಾಧ್ಯವಾಗದೆ, ಈಚೆಗೆ ತೆಂಗಿನ ನುಸಿಗೆ ಹೊಡೆಯುವ ಕೆಮಿಕಲ್ ಗಳನ್ನು ದನಗಳಿಗೂ ಹೊಡೆದು, ಹಲವು ದನಕರುಗಳು ಸತ್ತಿರುವುದು ದಿನನಿತ್ಯದ ಸತ್ಯವಾಗಿದೆ. ಹಳ್ಳಿ ಬೀದಿಗಳ ಮೇಲೆ "ತಿಗಣೆ ಕಾಟಕ್ಕೆ ಸ್ಪ್ರೇ" ಎಂದು ಕೂಗಿಕೊಂಡು ತಿರುಗುವ ಸೈಕಲ್‌ವಾಲಾಗಳ ಬತ್ತಳಿಕೆಗೆ "ಉಣ್ಣೆ ಕಾಟಕ್ಕೆ ಸ್ಪ್ರೇ" ಎನ್ನುವುದು ಇತ್ತೀಚೆಗೆ ಸೇರಿದೆ. ಗೋಡೆಗಳಿಗೆ ಸ್ಪ್ರೇ ಮಾಡುವಂತೆ, ದನಗಳಿಗೂ ಸ್ಪ್ರೇ ಮಾಡಿ, ರಾಸಿಗೆ ಹತ್ತು ರೂಪಾಯಿಯಂತೆ ವಸೂಲು ಮಾಡುತ್ತಿದ್ದಾರೆ. ಆಸ್ಪತ್ರೆಯಿಂದ ತಂದ ಉಣ್ಣೆ ಔಷಧಿ ಅತ್ತೆ-ಸೊಸೆ ಜಗಳದಲ್ಲಿ ಸೋಲನ್ನು ಕಂಡವರ ಪ್ರಾಣಕ್ಕೆ ಸಂಚಕಾರ ಹಿಂದೆ ತರುತ್ತಿತ್ತು. ಈಗ ಬದುಕಿನಲ್ಲಿ ಸೋತ ಕೃಷಿಕರನ್ನು ಬಲಿ ತೆಗೆದುಕೊಳ್ಳುತ್ತದೆ. ಇನ್ನು ಆಡು-ಕುರಿಗಳಲ್ಲಿ ಉಣ್ಣೆ, ಹೇನುವಿಗೆ ಔಷಧಿಯನ್ನು ಹಚ್ಚುವುದೇ ಕಷ್ಟದಾಯಕ. ನೂರಾರು ಕುರಿಗಳಿಗೆ ಹಚ್ಚಿ ಅವು ನೆಕ್ಕಿಕೊಳ್ಳದಂತೆ ನೋಡಿಕೊಳ್ಳುವುದು ತ್ರಾಸದಾಯಕ.

ಈ ಎಲ್ಲಾ ಕಷ್ಟಗಳ ಅರಿವಿದ್ದ ನಾವು ಈ ಗಿಡವನ್ನು ಉಣ್ಣೆ ಹೇನಿಗೆ ಬಳಸಲು ನಿರ್ಧರಿಸಿದೆವು ಹಲವು ಕಡೆ, ಹಲವರಲ್ಲಿ ಈ ಬಗ್ಗೆ ತಿಳಿ ಹೇಳಿ ಉಣ್ಣೆಗೆ ಇದನ್ನು ಉಪಯೋಗಿಸಲು ಹೇಳಿದರೂ ಯಾರೂ ಮಾಡಲಿಲ್ಲ. ಅವುಗಳಿಗೆ 'ರೆಡಿಮೇಡ್ ಸಂಸ್ಕೃತಿ' ಆವರಿಸಿ ಕೊಂಡಿರುವುದರಿಂದ ನಾಟಿ ಔಷಧಿಗೆ ಬೆಲೆ ಇಲ್ಲ. ಇದನ್ನು ಮನಗಂಡ ನಾವು ನಿರಾಶೆಯಿಂದ ಸುಮ್ಮನಾದೆವು.

ಕೆಲವು ದಿನಗಳ ನಂತರ, ಸಾವಯವ ಕೃಷಿಕ, ಅಣೆಕಟ್ಟೆ ಜಯಣ್ಣನವರ ತೋಟಕ್ಕೆ

ಅವರ ಮಿಶ್ರತಳಿ ಹಸುಗಳನ್ನು ನೋಡಲು ಹೋದೆವು. ಇತ್ತೀಚೆಗೆ ಜಯಣ್ಣನವರು ಸರಳವಾಗಿ ದನದ ಮನೆ ಕಟ್ಟಿದ್ದರು. ಕೇವಲ ತೆಂಗಿನ ಗರಿ, ಕಾಡಗಲ್ಲು ಬಳಸಿ, ಬೆಳಕು, ಗಾಳಿಗೆ ಯಥೇಚ್ಛ ಅವಕಾಶ ನೀಡಿ ದನದ ಮನೆ ನಿರ್ಮಾಣವಾಗಿತ್ತು. ಈ ದನದ ಮನೆಯನ್ನು ನಾವು ಎಲ್ಲೆಲ್ಲೂ ಕೊಂಡಾಡಿದ್ದೆವು. ಅವಿತುಕೊಳ್ಳಲು ಉಣ್ಣೆಗಳಿಗೆ ಅನುಕೂಲವಾಗಿದ್ದರಿಂದಲೋ ಏನೋ ಅವರ ರಾಸುಗಳ ಮೈಯಲ್ಲಿನ್ನು ಇಂಜಕ್ಷನ್ ಕೊಡಲು ಸೂಜಿಯ ಮೊನೆಯಷ್ಟು ಜಾಗವಿರದಂತೆ ಉಣ್ಣೆಗಳು ಆವರಿಸಿಕೊಂಡಿದ್ದವು. ಹೀಗಾಗಿ ನಮ್ಮ ನಾಟಿ ಔಷಧಿ ಬಳಸಲು ಜಯಣ್ಣನ ಮನಸ್ಸು ಹದಗೊಂಡಿತ್ತು. ಆ ಸೊಪ್ಪು, ಸ್ವಲ್ಪ ಬೇವಿನ ಸೊಪ್ಪು ಕುದಿಸಿ ಎರಡು ತುಂಡು ಹೊಗೆಸೊಪ್ಪು ಹಾಕಿ, ಅದರ ಕಷಾಯವನ್ನು ದನಗಳಿಗೆ ಹಚ್ಚಲು ಹೇಳಿಬಂದೆವು.

ಮತ್ತೆರಡು ದಿನ ಬಿಟ್ಟು ಜಯಣ್ಣನ ತೋಟಕ್ಕೆ ಹೋದರೆ, ಅಲ್ಲಿ ನಮಗೆ ಅಚ್ಚರಿ ಕಾದಿತ್ತು. ಒಂದೇ ಒಂದು ಉಣ್ಣೆಯೂ ಆ ಮೂರು ದನಗಳಲ್ಲಿ ಇರಲಿಲ್ಲ. ಹೊಗೆಸೊಪ್ಪು ಸಿಕ್ಕಿಲ್ಲವೆಂದು ಅದನ್ನು ಬಳಸಿರಲಿಲ್ಲ. ಹಾಗಾದರೂ ಗಂಡು ತುಳಸಿ ಸೊಪ್ಪು ಕೆಲಸ ಮಾಡಿತ್ತು. ಇನ್ನು ನಮಗೆ ಖುಷಿಯೋ ಖುಷಿ. ಪ್ರತಿದಿನ ನಮ್ಮ ಆಸ್ಪತ್ರೆಯ ಹೂದಾನಿಯನ್ನು ಅಲಂಕರಿಸಿ ರೂಮ್ ರಿಫ್ರೆಷನರ್ ತರಹ ಗಮಗುಟ್ಟುತ್ತಿತ್ತು. ಉಣ್ಣೆ ಔಷಧಿ ಕೇಳಿಕೊಂಡು ಬಂದವರಿಗೆ ಹೇಳಿದ್ದೇ ಹೇಳಿದ್ದು. ಪ್ರತಿಯೊಬ್ಬರೂ ತನ್ನದೇ ವಿಧಾನದಲ್ಲಿ ಬಳಸಿದರೂ ಆ ಸೊಪ್ಪು ಕೆಲಸ ಮಾಡುತ್ತಿತ್ತು.

ಇನ್ನು ಆ ಗಿಡದ ಹೆಸರಿನ ಬೇಟೆ ಆರಂಭಿಸಿದೆವು. ಹಲವಾರು ಹಳ್ಳಿಗರನ್ನು ವಿಚಾರಿಸಿದೆವು. ಬಹುತೇಕರು ಹೆಸರು ಗೊತ್ತಿಲ್ಲ ಎಂದರು. ಕೆಲವರು ಈ ಗಿಡ ರಸ್ತೆಯ ಆಜುಬಾಜಿನಲ್ಲಿ ಕಾಣುತ್ತಿದ್ದರಿಂದ ಇದು ಇತ್ತೀಚಿನ ಯಾವುದೋ ಕಳೆ ಎಂದರು. ಗೊಲ್ಲರಿಗೆ ಸಾಮಾನ್ಯವಾಗಿ ಗೊತ್ತಿರಬಹುದೆಂಬ ಆಶಯದೊಂದಿಗೆ ಗೊಲ್ಲರಹಟ್ಟಿಗಳಿಗೆ ಎಡತಾಕಿದೆವು. ಕೊನೆಗೊಮ್ಮೆ ಅಣ್ಣಮಾರನಹಳ್ಳಿ ಗೋಪಾಲಯ್ಯ ಹೇಳಿದ : "ಇದು ಗಂಡು ತುಳಸಿ, ಇದನ್ನು ನಾವು ಹಲವು ಕಾಯಿಲೆಗಳಿಗೆ ಬಳಸುತ್ತೇವೆ" ನಮ್ಮ ಕುತೂಹಲದ ಹಕ್ಕಿಯ ರೆಕ್ಕೆಗೆ ಶಕ್ತಿ ಬಂದು, ತುದಿ ಮುಟ್ಟಲು ಹಾತೊರೆಯತೊಡಗಿತು.

ಕೆಳ ಸಮುದಾಯಗಳ ಜ್ಞಾನವನ್ನು ಗೇಲಿ ಮಾಡುತ್ತಿರುವ ಈ ಹೊತ್ತಿನಲ್ಲಿ, ನಮ್ಮ ನಾಟಿ ಔಷಧಿಗೆ ಮಾನ್ಯತೆ ಸಿಗಬೇಕಾದರೆ ಒಬ್ಬ ಪ್ರೊಫೆಸರ್ ಬೇಕಾಗಿತ್ತು. ನಾಟಿ ಔಷಧಿ, ಹೋಮಿಯೋಪತಿ ಮುಂತಾದ ಸರಳ ವಿಧಾನಗಳಲ್ಲಿ ಅದ್ಭುತವಾಗಿ ದನಗಳಿಗೆ ಚಿಕಿತ್ಸೆ ನೀಡುತ್ತಿರುವ ಡಾ. ನಿಜಲಿಂಗಪ್ಪನವರನ್ನು ಸಂಪರ್ಕಿಸಿದೆವು. ಅವರು ತುಮಕೂರಿನ ಪ್ರೊಫೆಸರ್ ಷಿ. ಚೆನ್ನಬಸಪ್ಪನವರನ್ನು ಸಂಪರ್ಕಿಸಿ ಗಿಡ, ಹೂವು ಕಾಯಿ ಎಲ್ಲವನ್ನು ತಲುಪಿಸಲು ಹೇಳಿದರು. ಕೊನೆಗೊಂದು ದಿನ ಆ ಗಿಡದ ವೈಜ್ಞಾನಿಕ ಹಿನ್ನಲೆ ಹೊರಬಿತ್ತು. ಇದನ್ನು ಕನ್ನಡದಲ್ಲಿ ಗಂಡು ತುಳಸಿ ಎನ್ನುತ್ತಾರೆ. ಇದರ ವೈಜ್ಞಾನಿಕ ಹೆಸರು ಒಸಿಮಮ್ ಕ್ಯಾನಮ್ (Ocimum Canum). ಈ ಗಿಡ ದಕ್ಷಿಣ ಭಾರತದಲ್ಲಿ ಯಥೇಚ್ಚವಾಗಿ ದೊರೆಯುತ್ತಿದೆ. ರಸ್ತೆಗಳ ಇಕ್ಕೆಲಗಳಲ್ಲಿ, ಊರಿನ ಬಯಲುಗಳಲ್ಲಿ ಸಮೃದ್ಧಿಯಾಗಿ ಬೆಳೆದು ನಿಂತಿರುತ್ತದೆ. ತ್ಯಾವದ ಜಾಗಗಳಿಗಿಂತ,

ಒಣಗಿದ ದಿಣ್ಣೆಗಳಲ್ಲಿ ಬಹಳವಾಗಿ ಕಾಣುತ್ತದೆ. ಎಲೆ ಮತ್ತು ಕಾಯಿ ಎರಡೂ ಔಷದೀಯ ಗುಣ ಹೊಂದಿರುತ್ತದೆ. ಬಿಳಿ ಬಣ್ಣದ ಹಣ್ಣು ಒಣಗಿದ ನಂತರ ಕಪ್ಪಾಗುತ್ತದೆ. ಆ ಹಣ್ಣುಗಳನ್ನು ಹಿಸುಕಿದರೆ ಲೋಳೆಲೋಳೆಯಾದ ವಸ್ತು ಹೊರಬರುತ್ತದೆ. ಸೆಪ್ಟೆಂಬರ್, ಅಕ್ಟೋಬರ್ ತಿಂಗಳುಗಳಲ್ಲಿ ಚಿಕ್ಕ ಚಿಕ್ಕ ನೀಲಿ ಹೂಗಳನ್ನು ಬಿಟ್ಟು ಎಲ್ಲರ ಗಮನ ಸೆಳೆಯುತ್ತದೆ.

ಮಾನವ ವಸತಿ ಪ್ರದೇಶದ ಸುತ್ತಮುತ್ತ ದಂಡಿಯಾಗಿ ದೊರೆಯುವ ಈ ಗಂಡು ತುಳಸಿ ಗಿಡವನ್ನು ಆಡು, ಕುರಿಗಳು ತಿನ್ನುತ್ತವೆ. ಈ ಗಂಡು ತುಳಸಿ ದನಗಳಿಗೆ ಅಪಾಯಕಾರಿಯಲ್ಲ.

ಗಂಡು ತುಳಸಿ ಕಷಾಯವನ್ನು ದನಗಳಿಗೆ ಸವರುವುದು ಕಷ್ಟದಾಯಕವಲ್ಲ. ಈ ಸರಳ ಪರಿಸರ ಸ್ನೇಹಿ ವಿಧಾನ ಉಣ್ಣೆ ಕಾಟದಿಂದ ದನಗಳನ್ನು ಮತ್ತು ಮುಖ್ಯವಾಗಿ ರೈತರನ್ನು ಏಕಕಾಲದಲ್ಲಿ ಮುಕ್ತಿಗೊಳಿಸಬಲ್ಲದು !

❑

# ಕುರಿ ಬದುಕು



# ಅರಮನೆಗೆ ಬಂತು ಕುರಿ-ಮರಿ

**ಒ**ಮ್ಮೆ ಮೈಸೂರಿನ ಮಹಾರಾಜರು ಬಂಡೂರಿನ ಕಾವಲ್‌ಗೆ ಭೇಟಿ ಕೊಟ್ಟಿದ್ದರು. ಕಾವಲಿನಲ್ಲಿ ಬಂಡೂರು ಗ್ರಾಮದ ಕುರಿಗಳನ್ನು ಕದ್ದು ಮೇಯಿಸುತ್ತಾರೆ ಎನ್ನುವ ವರ್ತಮಾನ ಮಹಾರಾಜರಿಗೆ ತಲುಪಿತ್ತು. ಕುರಿ ಕಾಯುವವರನ್ನು ತಕ್ಷಣಕ್ಕೆ ಕಾವಲಿಗೆ ಬರಹೇಳಲು ಆಜ್ಞೆ ಮಾಡಿದರು. ಬಂಡೂರಿನ ತಂಬಡಪ್ಪನನ್ನು ಕರೆದುಕೊಂಡು ಬರಲಾಯಿತು. ಮಹಾರಾಜರು "ಎಲ್ಲಯ್ಯ ನಿನ್ನ ಕುರಿಗಳು ? ಬಹಳ ವಿಶೇಷವಾಗಿದ್ದಾವೆ ಎನ್ನುತ್ತಾರೆ ಎಲ್ಲರೂ!" ಎಂದರು. ಒಂದು ಮೈಲಿ ದೂರದಲ್ಲಿ ಅವನ ಕುರಿಗಳು ಮೇಯುತ್ತಿದ್ದವು. ಇಲ್ಲಿಂದಲೇ ಕರೀತೀನಿ ನೋಡಿ ಸ್ವಾಮಿ" ಎಂದ ತಂಬಡಪ್ಪ. ಮಹಾರಾಜರ ಎದುರೇ ಶಿಳ್ಳೆಹಾಕಿ ಕೂಗು ಹಾಕಿದ. ತಕ್ಷಣವೇ ಕುರಿಗಳು ಧಾವಿಸಿ ಬಂದು ಅವನನ್ನು ಬಳಸಿಕೊಂಡು ಸುತ್ತಲೂ ನಿಂತವು.


ಮಹಾರಾಜರಿಗೆ ಹಿಡಿಯಲಾರದಷ್ಟು ಸಂತೋಷವಾಯಿತು. ತಂಬಡಪ್ಪ ಕುರಿ ಕರೆದ ರೀತಿ, ಕುರಿಗಳು ಬಂದ ಚೆಂದಕ್ಕೆ ಮಹಾರಾಜರು ಮನಸೋತರು. ಕಟ್ಟಿ ಮೇಯಿಸಿದ ವಿಚಾರಣೆಯನ್ನು ಮರೆತು, ಕುರಿಗಳನ್ನು ಕೊಂಡಾಡಿದರು. ಮೈಸೂರಿನ ಅರಮನೆಯಲ್ಲಿ ಬಂಡೂರು ಕುರಿ ತಳಿಯ ಪ್ರದರ್ಶನ ಮಾಡಬೇಕೆನಿಸಿ, ಅರಮನೆಗೆ ಕುರಿಗಳನ್ನು ಹೊಡಕೊಂಡು ಬರಲು ಹೇಳಿದರು. ಊರಿನ ಜನ ತಮಟೆ, ಕಹಳೆ, ಓಲಗ, ಅರೆಯೊಂದಿಗೆ ಬಂಡೂರಿನಿಂದ ಮೈಸೂರು ಅರಮನೆಗೆ ಕುರಿಗಳನ್ನು ಕರಕೊಂಡು ಹೋದರು. ಅಲ್ಲಿ ಇವುಗಳ ಅನನ್ಯ ಗುಣಗಳನ್ನು ಪ್ರಶಂಸಿಸಿ, ಮೆಡಲ್ ಪಡೆದರು. "ಆಗ ಅರಮನೆಯ ಕಮ್ಟಿಯಲ್ಲಿ ಬರಕೊಂಡರು. ಆ ಕಟ್ಟಲ್ಲಿ ಧನಗೂರು ಫಾರಂ ಆಯ್ತು" ಎನ್ನುತ್ತಾ ಕರಗೇಗೌಡ ತಮ್ಮ ಅಪ್ಪನ ಕಾಲದಲ್ಲಿ ನಡೆದ ಈ ಸಂಗತಿಯನ್ನು ಸಂಭ್ರಮದಿಂದ ಸಾದರಪಡಿಸಿದರು.

❑

## ಕುರಿ ತಳಿಗಳು

ಒಂದೊಂದು ಭೌಗೋಳಿಕ ಸೀಮೆಗೆ ಒಂದೊಂದು ತಳಿ ವಿಕಾಸವಾಗುತ್ತಾ ಬಂದಿದೆ. ಕರ್ನಾಟಕದಲ್ಲಿ ಬಂಡೂರು ತಳಿ ಬಿಟ್ಟರೆ, ಉಳಿದ ತಳಿಗಳ ಚರಿತ್ರೆ, ಹಿನ್ನೆಲೆ ಸ್ಪಷ್ಟವಾಗಿಲ್ಲ. ತಳಿಗಳ ಹೆಸರಿಗೂ ಒಂದು ಖಚಿತವಾದ ಅರ್ಥವಿಲ್ಲ. ಕೇವಲ ಭೌಗೋಳಿಕ ಪ್ರದೇಶದ ಹೆಸರನ್ನು ಪಡೆದಿರುವ ತಳಿಗಳಿಗೆ ವಿಭಿನ್ನವಾದ ಹಿನ್ನಲೆಯಿದೆ. ಹಾಗಾಗಿ ಇಲ್ಲಿ ಕೆಲವು ಸೀಮೆಗಳ ಕುರಿಗಾರರ ಅಭಿಪ್ರಾಯವನ್ನು ಮುಖ್ಯವಾಗಿ ಪರಿಗಣಿಸಲಾಗಿದೆ.

**ಕುದುರೆ ಕುರಿ** : ಈ ತಳಿ 'ಡೆಕ್ಕನಿ ತಳಿ'ಗೆ ಇರುವ ಜನಭಾಷೆಯ ಹೆಸರು. ಬೆಳಗಾಂ, ಬಿಜಾಪುರ, ಬೀದರ್, ಗುಲ್ಬರ್ಗಾ ಕಡೆಗಳಲ್ಲಿ ಕಂಡು ಬರುವ ತಳಿ. ಕುರಿಯವರು ಪರಸ್ಥಳಕ್ಕೆ, ದೇಶಕ್ಕೆ ಹೋದಾಗ ಕುದುರೆ ಮೇಲೆ ಹೇರು ಹಾಕಿಕೊಂಡು ಹೋಗುತ್ತಾರೆ. ಅದಕ್ಕೆ ಕರಿ ಕುರಿಯವರು ಈ ಕುರಿಗಳನ್ನು ಕುದುರೆ ಕುರಿ



ಎನ್ನುತ್ತಾರೆ. ಆದರೆ ಕರಿ ಕುರಿಯವರು ಕತ್ತೆಯನ್ನು ಹೇರು ಹೊರಲು ಬಳಸುತ್ತಾರೆ. ಇವುಗಳ ಕಿವಿ ದೊಡ್ಡದಾಗಿರಲ್ಲ. ಅದಕ್ಕೆ ಚಿಟ್ಟೆಕಿವಿ ಎನ್ನುತ್ತಾರೆ. ಕುದುರೆ ಕುರಿಗಳು ಉದ್ದವಾಗಿ, ಬುಡ್ಡವಾಗಿ ಒಳ್ಳೆಯ ಗುಡಾಣ ಇದ್ದಂಗೆ ಇರುತ್ತವೆ. ಕುದುರೆ ಕುರಿಯ ತುಪ್ಪಟ ಮಿದುವಾಗಿದ್ದು, ಕಪ್ಪಾಗಿರುತ್ತದೆ. ಕುದುರೆ ಕುರಿ ಕರೆ ಕುರಿಗಿಂತ ಕೆಲವು ಕಾರಣಗಳಿಗೆ ಉತ್ತಮ ತಳಿ ಎನಿಸಿವೆ. ಕುದುರಿ ಕುರಿ ಮೈಯಿ ಬಿರುಸಾಗಿದ್ದು, ಎತ್ತರ ಇರುತ್ತವೆ. ಕತ್ತು ಉದ್ದ, ತಡಸಾಗಿ ಕಾಣ್ತವೆ.. ಹೊಟ್ಟೆ ದಪ್ಪ, ತಲೆ ಮೇಲೆ ಕೂದಲಿರುತ್ತದೆ. ತುಪ್ಪಟ ಮೆದುವಿರುತ್ತದೆ. ಇವು ಮಿದುವಿನ ನೆಲದಲ್ಲಿ ಮೇಯುತ್ತವೆ.



**ಕರಿ ಕುರಿ :** ಇವು ಬಳ್ಳಾರಿ, ಚಿತ್ರದುರ್ಗ ಜಿಲ್ಲೆಗಳಲ್ಲಿ ಕಂಡುಬರುತ್ತವೆ. ಬಣ್ಣ ಕಪ್ಪು. ಮರಿ ಹಾಕೋದರಲ್ಲಿ ಕರಿ ಕುರಿ ಚಂದ. ಕರಿ ಕುರಿಯ ಮಾಂಸದ ಎಳೆ ದಪ್ಪ, ತೂಕ ಚೆನ್ನಾಗಿ ಬರುತ್ತದೆ. ತುಪ್ಪಟ ಒರಟಾಗಿರುತ್ತದೆ. ಕರೆ ಕುರಿ ಸ್ವಲ್ಪ ಕಾಯಿಲೆಗೆ ತಡಕೊಳ್ಳುತ್ತದೆ. ಗುಡ್ಡದಲ್ಲಿ ಮೇಯುವುದರಿಂದ ರಕ್ತ ಹಿಂಗುವ ಕಾರಣಕ್ಕೆ ಪೇಲವವಾಗಿರುತ್ತವೆ. ಕರಿ ಕುರಿಯ ತುಪ್ಪಟ ಬೇಗ ಬೆಳೆಯುವುದರಿಂದ ವರ್ಷಕ್ಕೆರಡು ಬಾರಿ ಉಣ್ಣೆ ಕತ್ತರಿಸಬೇಕು.

**ಕರೇ ಕೆಂಚಗ :** ಕರೇ ಕುರಿಗಳಲ್ಲಿ ಹಲವು ಬಗೆ. ಒಂದು ಶಿರಾ ಗಡ್ಡೆ ಕುರಿ, ಇನ್ನೊಂದು ಚಳ್ಳಕೆರೆ ಕುರಿ, ಶಿರಾ ಕುರಿಗಳು ಕೆಂಚಗೆ ಇರುತ್ತವೆ. ಆದರೆ ಹಿರಿಯೂರು ಚಳ್ಳಕೆರೆ ಕುರಿಗಳು ನೆರೆ ಹೊಡೆದಿರುತ್ತವೆ. ಶಿರಾ ಕುರಿ ಕರೆ ಬಣ್ಣದಲ್ಲೇ ಕೆಂಚಗಿರುತ್ತವೆ. ಶಿರಾ ಕುರಿಗಳಲ್ಲಿ ತುಪ್ಪಟ ಜಾಸ್ತಿ ಇರಲ್ಲ. ಅಲ್ಲಿ ಜಾಸ್ತಿ ಕಲ್ಲು ತುಳಿದು ತುಪ್ಪಟ ಕಡಿಮೆ ಇರುತ್ತದೆ. ಶಿರಾ ಗಡ್ಡೆ ಕುರಿಯನ್ನು ಕರೇ ಕೆಂಚಗ ಎನ್ನುತ್ತಾರೆ.




**ನೆರೆ ಮಸ್ಕ ಕುರಿ :** ಒಬೇನಹಳ್ಳಿ ಕೃಷ್ಣಮೂರ್ತಿ ಅವರ ಮಾತಿನಲ್ಲಿ ಅವರ ಕುರಿ ಬಗ್ಗೆ ತಿಳಿಯೋಣ : "ಚಳ್ಳಕೆರೆ ತಾಲೂಕಿನ ನೆರೆ-ಮಸ್ಕ ಕುರಿ ಬಣ್ಣ, ನ್ಯಾರಾಕಟ್ಟು, ಬೇರೆಲ್ಲೂ ಕಾಣಲ್ಲ. ಮರಿ ಹೊಡೊದರಲ್ಲಿ ಎತ್ತಿದ ಕೈ. ಈದ ಎರಡೇ ತಿಂಗಳಿಗೆ ಮಾರಬಹುದು. ನೆರೆ ಮಸ್ಕ ಕುರಿ ೪ ೧/೨-೫ ಇಂಚು ತುಪ್ಪಟ ಬರುತ್ತದೆ. ತುಪ್ಪಟ ಒದಗೋದರಲ್ಲಿ ಇದು ಮೇಲು" ಚಳ್ಳಕೆರೆ ತಾಲೂಕಿನ ಸುತ್ತಮುತ್ತಲಿನ ಕುರಿಯನ್ನು ನೆರೆ ಮಸ್ಕ ಕುರಿ ಎನ್ನುತ್ತಾರೆ.




ಹೆಳಗಿನ ಮರಿ : ಹಾಸನ ಜಿಲ್ಲೆಯ ಗಂಡಸಿಯ ಗುರುವಾರದ ಸಂತೆಯಲ್ಲಿ ಹೆಳಗಿನ ಮರಿ ಎನ್ನುವುದೇ ಬಹು ಪ್ರಸಿದ್ಧಿ. ರಾಯಚೂರು ಸಿಂಧನೂರು ಕಡೆಗಳಿಂದ ಒಂದೆರಡು ತಿಂಗಳಿನ ಕುದುರೆ ಕುರಿಯ ಮರಿಗಳನ್ನು ತಂದು ಇಲ್ಲಿ ಮಾರುತ್ತಾರೆ. ದನಗಳ ಹಿಂದೆ ಬಿಟ್ಟು, ಕೈ ತಿಂಡಿ ಕೊಟ್ಟು ಒಂದೆರಡು ಮರಿಗಳನ್ನು ತಂದು ಮನೆಯಲ್ಲಿ ಸಾಕುತ್ತಾರೆ. ಇವುಗಳನ್ನು ಕುರಿ ಹಿಂಡಿನಲ್ಲಿ ಬಿಟ್ಟು ಸಾಕುವುದಿಲ್ಲ. ರಾಗಿಯ ಗರಿಯಿಂದ ಮೊದಲ್ಗೊಂಡು ಮನೆಯಲ್ಲಿ ಸಿಗುವ ಎಲ್ಲಾ ತ್ಯಾಜ್ಯಗಳನ್ನು ತಿನ್ನಿಸಿ ಬೆಳೆಸುತ್ತಾರೆ. ಮನೆಯಲ್ಲಿರುವ ನಾಯಿಯಂತೆ ಮುದ್ದಾಗಿ ಓಡಾಡುತ್ತಿರುತ್ತದೆ. ಕಡಲೆ ಹಿಂಡಿ, ಬೂಸಾ ಈ ತರಹದ ಕೈತಿಂಡಿಗಳ ರುಚಿಗೆ ಪಾಟವಾಗಿರುವ ಈ ತಳಿಯನ್ನು ಕೇವಲ ಆರು ತಿಂಗಳಿನಿಂದ ಒಂದು ವರ್ಷದವರೆಗೆ ಮಾತ್ರ ಸಾಕುತ್ತಾರೆ. ನಂತರ ಐದರಿಂದ ಆರು ಸಾವಿರ ರೂಪಾಯಿಗೆ ಮಾರಾಟವಾಗುತ್ತದೆ. ಒಂದೆರಡು ತಿಂಗಳಿನ ಮರಿಗೆ ರೂ. ೧,೨೦೦ ಕೊಟ್ಟ ಸಾಕಾಣಿಕೆದಾರನಿಗೆ ಇದು ಅತ್ಯಧಿಕ ಲಾಭ ಕೊಡುವ ತಳಿ. ಕೃಷಿ ಕೂಲಿಕಾರ ಹೆಂಗಸರ ಡಾರ್ಲಿಂಗ್ ಇದು.

❑



## ಬಂಡೂರು ಕುರಿ

ಜಗತ್ತಿನಲ್ಲಿ 'ಬಂಡೂರು ಕುರಿ' ಮಾಂಸಕ್ಕಾಗಿ ಬಹು ಪ್ರಸಿದ್ಧಿ. ಮಳವಳ್ಳಿ ತಾಲೂಕಿನ ಹಳ್ಳಿ ಬಂಡೂರು. ಆದರೆ ಬನ್ನೂರು ಎಂದು ಕೆಲವೊಮ್ಮೆ ತಪ್ಪಾಗಿ ದಾಖಲಾಗಿದೆ. ಬನ್ನೂರು ಈ ಬಂಡೂರಿಗೆ ಹತ್ತಿರದಲ್ಲಿರುವ ದೊಡ್ಡ ಪಟ್ಟಣ.

ಕರ್ನಾಟಕದ ಕುರಿ ತಳಿಗಳಲ್ಲಿ ಬಂಡೂರು ವಿಶಿಷ್ಟ ಯಾಕೆಂದರೆ ಕುರಿ ಕಾಯುವ ಜನಪದರ ಪ್ರಕಾರ ಕರೆಕುರಿಗಳಲ್ಲಿ 'ಕತ್ತೆ ಕುರಿ' ಮತ್ತು 'ಕುದುರೆ ಕುರಿ' ಎಂಬುದಾಗಿ ಎರಡು ತಳಿಗಳನ್ನು ಗುರುತಿಸುತ್ತಾರೆ. ಈ ಎರಡೂ ತಳಿಗಳನ್ನು ನೂರು, ಸಾವಿರ ಸಂಖ್ಯೆಯ ಹಿಂಡುಗಳಲ್ಲಿ ಸಾಕುತ್ತಾರೆ. ಆದರೆ ಈ ಬಂಡೂರು ಕುರಿಗಳು ಹಾಗಲ್ಲ. ಸರಾಸರಿ ಹಿಂಡಿನ ಸಂಖ್ಯೆ ೧೦ ರಿಂದ ೨೦ ಅಷ್ಟೆ ಹಿಂದೆ ಬಂಡೂರಿನಲ್ಲಿ ಮೂರ್ನಾಲ್ಕು ಕುಳಗಳು ನೂರರವರೆಗೆ ಸಾಕಿದ್ದರು.

ದಕ್ಷಿಣ ಕರ್ನಾಟಕದ ಮಂಡ್ಯ, ಬೆಂಗಳೂರು, ತುಮಕೂರು ಜಿಲ್ಲೆಗಳ ಕೆಲವು ಭಾಗಗಳಲ್ಲಿ ಈ ತಳಿ ಕಂಡು ಬರುತ್ತವೆ. ಮಂಡ್ಯ

ಜಿಲ್ಲೆಯಲ್ಲಿ ಇಡಿಯಾಗಿ ಎಲ್ಲಿಯೂ ಇಲ್ಲ, ಬಂಡೂರಿನಲ್ಲಿ ಯಥೇಚ್ಛವಾಗಿವೆ. ಬಂಡೂರಿನ ಸುತ್ತಲಿನ ಪಳ್ಳಿಗಳಾದ ಕಿರಿಸ್ಕೂರು, ಕಂದೆಗಾಲ, ಹಳ್ಳದ ಕೊಪ್ಪಲು, ಕಲ್ಲು ಬೀರನಹಳ್ಳಿ, ಭೀಮನಹಳ್ಳಿ, ಹೊಳೆದೊಡ್ಡಿ, ನಂಜರಾಯಪುರ, ಕುರುಬಿನಪುರ, ಹಲಗೂರಿನ ಹತ್ತಿರದ ಕಾಣಾಳು, ನೇಲೂರುಗಳಲ್ಲಿ ಕಂಡುಬರುತ್ತದೆ. ಬಂಡೂರಿನ ಪೂರ್ವಿಕರು ಹೇಳುವ ಪ್ರಕಾರ ಬಂಡೂರಿನಿಂದ ಬೇರೆ ಊರುಗಳಿಗೆ ಈ ತಳಿಯನ್ನು ತೆಗೆದುಕೊಂಡು ಹೋಗಿ ಸಾಕಿದ್ದರೂ ಮೋಪಾಗಿ ತಳಿ ಬಂದಿಲ್ಲ. ಇದಕ್ಕೆ ಅವರು ಹೇಳುವ ಕಾರಣಗಳು ಹಲವಾರು : ನೆಲದ ಗುಣ, ಮರ ಮಂಡಿ ಯಥೇಚ್ಛವಾಗಿರುವ ವಾತಾವರಣ, ಬಿಳೀ ಹರೆ ಇರುವ ಜಾಗ. ಶೀತವಾದರೆ ಬಿಳೀ ಹರೆ ಪ್ರದೇಶದಲ್ಲಿ ಕುರಿ ವರಿಯುವುದಿಲ್ಲ.

ಬಂಡೂರು ತಳಿಯ ಲಕ್ಷಣಗಳು ಹಲವಾರು. ಕಾಲುಗಳು ಮೋಟಾಗಿ, ಸಣ್ಣದಾಗಿ, ಮೋಪಾಗಿರುತ್ತವೆ. ಮಾಂಸಯುಕ್ತ ತೊಡೆ, ಮುಂಗಾಲುಗಳು, ವಿಶಿಷ್ಟ ಆಕಾರದ ಹಣೆ ಬೊಟ್ಟು, ಮೊಂಡಾದ ಮೂಗು, ಟೇಪು, ಕಾಂತಿಯುತವಾದ, ಮಿದುವಾದ ಕೂದಲು ಇವುಗಳು ಮುಖ್ಯ. ಹಣೆಬೊಟ್ಟು ಬೆಳ್ಳಗಿರುತ್ತದೆ. ಹಣೆಬೊಟ್ಟು ಏಕವಾಗಿ, ಕೆಂದಗೂದಲಿನಲ್ಲಿ ಮುಂದುವರಿದು ಬಂದರೆ ಅದನ್ನು ಟೇಪು ಎನ್ನುತ್ತಾರೆ. ಕೆಲವರು ಈ ಹಣೆಬೊಟ್ಟು ಮತ್ತು ಟೇಪುವಿನ ಟೇಪುವಿನ ಆಕೃತಿಯ ಮೇಲೆ ಕೊನೆರಿ ಕುರಿ, ಕಂಪ್ನಿ ಕುರಿ, ಎಂದು ಒಳ ತಳಿಗಳಾಗಿ ವಿಭಾಗಿಸುತ್ತಾರೆ. ಇನ್ನು ಕೆಲವರು ಈ ಹೆಸರುಗಳು ಕುರಿಗಳನ್ನಾಳಿದ ಮನೆತನದ ಹೆಸರು ಎಂದೂ ಹೇಳುತ್ತಾರೆ. ಕಪನಿಗೌಡನಿಂದ ಕಂಪ್ನಿ ಕುರಿ ಎಂದು ಹೆಸರಾಯಿತು. ಆಗಾಗ ಹೊಟ್ಟೆನೋವು ಬರುತ್ತಿದ್ದನೊಬ್ಬ ಆಳುತ್ತಿದ್ದ ಕುರಿಗಳಿಗೆ ಹೊಟ್ಟೆನೋವಿನ ಕುರಿ ಎನ್ನಲಾಗಿದೆ. ಮಳವಳ್ಳಿ ಆಚೆಗಿರುವ ಗಾಜನೂರಿನಿಂದ ತಂದ ಕುರಿಗಳಿಗೆ ಗಾಜನೂರು ಕುರಿ ಎಂದೇ ಉಳಿದು ಹೋಗಿದೆ. ಕಟ್ಟೆಯಾಚೆ ನಿಂತುಕೊಂಡು ತಮಟೆ ಕುಟ್ಟಿದರೆ, ಕುರಿಗಳು ಹೋಗಿ ಕಟ್ಟೆಗೆ ಬೀಳುತ್ತಿದ್ದವು. ಅವುಗಳು ಹುಚ್ಚುಕುರಿಗಳಾಗಿ ಕಂಡಿವೆ. ಬಂಡೂರು ಕುರಿಗಳಲ್ಲಿ ಎದ್ದು ನಿಂತಿರುವ ಕಿವಿಗಳು ಅತ್ಯಂತ ಆಕರ್ಷಕವಾಗಿ ಕಾಣುತ್ತವೆ. ಕಿವಿಗಳ ಅಂದವನ್ನು ಇನ್ನೂ ಹೆಚ್ಚಿಸಲು ಅವುಗಳಿಗೆ ಮೋಟು ಹಾಕಿರುತ್ತಾರೆ. ಅದರ ಜೊತೆಗೆ ಶಂಖು, ಚರ್ಮದ ಬಾರು, ಹಾಲು ಮಣಿ ಕಟ್ಟಿರುತ್ತಾರೆ.

ಬಂಡೂರಿನ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಕರ್ನಾಟಕದಲ್ಲಿ ಎಲ್ಲಿಯೂ ಕಾಣದಿರದ ವಿಭಿನ್ನ ಕುರಿ ಸಾಕಾಣಿಕೆಯ ಪರಂಪರೆ ಬೆಳೆದು ಬಂದಿದೆ. ಪ್ರತಿ ಹೊಲ, ಗದ್ದೆ, ತೋಟಗಳ ಬದು, ಬೇಲಿಗಳ ಮೇಲೆ ಅರಳಿ, ಆಲ, ಗೊಬ್ಬಳಿ ಮರಗಳು ದಂಡಿಯಾಗಿ ಕಾಣಬಹುದು. ಇತ್ತೀಚಿನ ಜಲಾನಯನ ಪ್ರದೇಶದ ಅಭಿವೃದ್ಧಿಯಲ್ಲಿ ಹೇಳುವ ಮರ ಆಧಾರಿತ ಕೃಷಿ ನೆನಪಿಗೆ ತರುತ್ತವೆ, ಆದರೆ ಆಲ, ಅರಳಿ ಮರಗಳು ದೊಡ್ಡ ಮರಗಳು. ಇವುಗಳನ್ನು ಸಹ ಹೊಲ ಗದ್ದೆಗಳ ತೆವರಿಗಳಲ್ಲಿ ಬೆಳೆಸಿರುವುದು ಅಚ್ಚರಿಯಾಗುತ್ತದೆ. ಈ ಮಳೆಗಾಲದಲ್ಲಿ ಚೆನ್ನಾಗಿ ಜಡಿ ಹಿಡಿದುಕೊಂಡಾಗ ಅರಳಿ, ಆಲದ ಸೊಪ್ಪು ಕಡಿದು ತಂದು ಹಾಕುತ್ತಾರೆ. ಕುರಿಗಳಿಗೋಸ್ಕರವೇ ಅರಳಿ, ಆಲ ನೆಟ್ಟಿದ್ದಾರೆ. ಯುಗಾದಿ ಹಬ್ಬದ ನಂತರ ಎಲೆ ಉದುರಿ ಚಿಗುರು ಬಂದಾಗ ಅದನ್ನು ಕುರಿಗಳಿಗೆ ಹಾಕುತ್ತಾರೆ. ಹಿಂದೆ ಊರಿನ ಸುತ್ತೆಲ್ಲಾ ಗೊಬ್ಳಿ ತೋಪೇ ಇತ್ತು ಎಂದು

ಹಿರಿಯರು ನೆನಪಿಸಿಕೊಳ್ಳುತ್ತಾರೆ. ಸಂಕ್ರಾತಿ ಹಬ್ಬದ ಹಿಂದೆ ಮುಂದೆ ಗೋಬ್ಲಿಕಾಯಿಯನ್ನು ಹೊಟ್ಟೆ ತುಂಬಾ ತಿನ್ನುತ್ತಿದ್ದವು.

ಬಂಡೂರು ಕುರಿಗಳು ಜಾಸ್ತಿ ಹೊಲಗಳಲ್ಲೇ ಮೇಯುತ್ತವೆ. ದೀಪಾವಳಿ ಕಾಲದಲ್ಲಿ ಹುರುಳಿ, ಅವರೆ, ತಟಗುಣಿ ಸೊಪ್ಪು, ರಾಗಿ ತೆನೆ, ಹುಚ್ಚೆಳ್ಳು, ಸೊಪ್ಪು ತಿನ್ನುತ್ತಿದ್ದವು. ಎರಡು-ಮೂರು ಎಕರೆಗೆ ಹುಳ್ಳಿ ಚೆಲ್ಲಿ ಕುರಿ ಮೇಯುವುದಕ್ಕೇ ಹಾಗೆಯೇ ಬಿಡುತ್ತಿದ್ದರು. ಒಂದು ಕುರಿ ತನ್ನ ಜೀವಿತಾವಧಿಯಲ್ಲಿ ೨೦ ಮರಿಗಳನ್ನು ಈದ ಉದಾಹರಣೆಗಳಿವೆ. ವರ್ಷಕ್ಕೆ ಎರಡು ಮರಿ ಈಯುವ ತಾಯಿ ಕುರಿಗೆ ಹುರುಳಿ ಹಾಲನ್ನು ಕೊಡುತ್ತಾರೆ. ಹುರುಳಿಯನ್ನು ಉಂಡೆ ಕಾಳಾಗಿಯೂ ತಿನ್ನಿಸುತ್ತಾರೆ. ಹೀಗೆ ಒಂದು ಒಂದೂವರೆ ತಿಂಗಳು ಕೊಡುತ್ತಾರೆ.

ಟಗರುಗಳನ್ನು ಮೇಯಿಸುವುದಕ್ಕೆ ಹೊರಗಡೆಗೆ ಬಿಡುವುದಿಲ್ಲ. ಮನೆಯಲ್ಲಿ ಕಟ್ಟಿ ಮೇಯಿಸುತ್ತಾರೆ. ಕುರಿಗಳು ಬೆದೆಗೆ ಬಂದಾಗ ಮಾತ್ರ ಹಿಂಡಿನೊಳಕ್ಕೆ ಬಿಡುತ್ತಾರೆ. ಚಿತ್ತೆ ಮಳೆಯ ಹಿಂದೆ ಮುಂದೆ ಹೆಚ್ಚಿನ ಸಂಖ್ಯೆಯಲ್ಲಿ ಕುರಿಗಳು ಬೆದೆಗೆ ಬರುತ್ತವೆ. ಯಾವುದಾದರೂ ಒಂದು ಕುರಿ ಬೇರೆ ಸಮಯದಲ್ಲಿ ಬಂದರೆ ಆಗ ಒಂದು ದಿನದ ಮಟ್ಟಿಗೆ ಟಗರನ್ನು ಹಿಂಡಿಗೆ ಬಿಡುತ್ತಾರೆ. ಸುಮಾರಾಗಿರುವ ಟಗರಿಗೆ ೫-೬ ಸಾವಿರ ರೂಪಾಯಿ ಬೆಲೆಯಿದೆ. ಒಂದು ಸಾರಿ ೩೮,೦೦೦ ರೂಪಾಯಿಗೆ ಒಂದು ಜೊತೆ ಟಗರುಗಳು ಮಾರಾಟವಾಗಿದ್ದೂ ಉಂಟು. ಮುಡುಕುತೊರೆ ಜಾತ್ರೆ, ಬಂಡೂರು ಜಾತ್ರೆಯ ಮೆರವಣಿಗೆಗೆ ಟಗರುಗಳನ್ನು ಕೊಂಡುಕಂಡು ಮೆರವಣಿಗೆ ಮಾಡಿ, ಬಹುಮಾನಕ್ಕೆ ಕಟ್ಟುತ್ತಾರೆ.

ಕಾಯಿಲೆ ಬರುವುದು ಇವುಗಳಿಗೆ ಕಡಿಮೆ ಎನ್ನುವ ಬಂಡೂರು ಜನರು ಜಂತುಹುಳಕ್ಕೆ ವರ್ಷಕ್ಕೆ ಒಂದೆರಡು ಬಾರಿ ಔಷದಿ ಹಾಕುತ್ತಾರೆ.

ಬಂಡೂರು ಕುರಿ ಮಾಂಸ ರುಚಿಕರ. ಇವು ಚೆಂದಾಗಿ ಮೇಯ್ದು ಬಸಿ ಬರುತ್ತದೆ. ಚೆರ್ಬಿ ಹೆಚ್ಚಾದಾಗ ಮಾಂಸ ರುಚಿ ಬರುತ್ತದೆ ಎನ್ನುತ್ತಾರೆ. ೨೦ ಕುರಿಗಳನ್ನು ಸಾಕುತ್ತಿರುವ ಬಂಡೂರಿನ ಕರಗೇಗೌಡ, ವಯಸ್ಸಿನಲ್ಲಿ ನಾಲ್ಕು ಹಲ್ಲು, ಎರಡು ಹಲ್ಲು ಇದ್ದಾಗ ಕುಯ್ದಿರೆ ರುಚಿ ಬರುತ್ತೆ. ಅಷ್ಟೇ ಅಲ್ಲ, ಮೇಯಿಸ್ಥಾಣೆ, ವಾತಾವರಣ ಇವೆಲ್ಲಾ ರುಚಿಗೆ ಕಾರಣಗಳು.

ಬಂಡೂರಿನ ಸುತ್ತಮುತ್ತಲಿನ ಹಳ್ಳಿಗಳು ಮಳೆಯಾಶ್ರಿತ ಪ್ರದೇಶಗಳು. ಅಲ್ಲಿಗೆ ಕಳೆದ ದಶಕದಲ್ಲಿ ನಾಲೆ ಬಂದಿದೆ. ಕಾವೇರಿ ನದಿಯ ನೀರು ಚಾನಲ್ ಮೂಲಕ ಹರಿದಾಡುತ್ತಿದೆ. ಹಾಗಾಗಿ ಹೊಲಗಳೆಲ್ಲಾ ಗದ್ದೆಗಳಾಗಿವೆ. ಆಗ ಹೊಲಗಳಲ್ಲಿ ಹುರುಳಿ ಚೆಲ್ಲಿಕೊಳ್ಳುತ್ತಿದ್ದರು. ಅವರೆ ಸೊಪ್ಪು, ಹುಚ್ಚೆಳ್ಳು ಸೊಪ್ಪು, ತಟಗಣಿ ಸೊಪ್ಪು ತಿನ್ನುತ್ತಿದ್ದವು. ಈಗ ನಾಲೆ ಬಂದ ಮೇಲೆ ನೆಲ್ಲು ಹುಲ್ಲು ಸಿಗುತ್ತದೆ. ರೈತರು ನೀರಾವರಿ ಬೆಳೆಗಳಾದ ಭತ್ತ, ಕಬ್ಬಿನ ಹಿಂದೆ ಹೋಗಿ, ಕುರಿಗಳನ್ನು ಕಡೆಗಾಣಿಸುತ್ತಿದ್ದಾರೆ. ಆ ಪ್ರದೇಶದಲ್ಲಿ ಮೊದಲಿದ್ದ ಬೆಳೆ ವೈವಿಧ್ಯ ಮಾಯವಾಗಿದೆ. ಇವೆಲ್ಲಾ ಅಂಶಗಳು ಬಂಡೂರು ತಳಿಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿವೆ.

❑

## ಸಾವಿರಾರು ಬಣ್ಣ

ಸಾವಿರಾರು ಕುರಿಗಳನ್ನು ಆಳುವ ಕುರಿಯವರು ಪ್ರತಿಯೊಂದು ಕುರಿಯ ಅನನ್ಯತೆಯನ್ನು ಕಂಡುಕೊಂಡಿದ್ದಾರೆ. ನಮಗೆಲ್ಲಾ ನಾಲ್ಕು ಬಣ್ಣಗಳಿದ್ದರೆ, ಇವರಿಗೆ ಬಣ್ಣಗಳು ಸಾವಿರಾರು. ಯಾವುದೇ ಕುರಿ ಕಳೆದುಹೋಗಿದ್ದರೂ ತಕ್ಷಣಕ್ಕೆ ಇವರ ಗಮನಕ್ಕೆ ಬರುತ್ತದೆ. ಕುರಿಗಳನ್ನು ಎಣಿಸಬಾರದು, ಅದರಿಂದ ಏಳ್ಗೆಯಾಗುವುದಿಲ್ಲ ಎನ್ನುವ ನಂಬಿಕೆ ಇವರ ತಲೆಕಾಯುತ್ತಿದೆ. ವರ್ಷದಲ್ಲಿ ಒಮ್ಮೆ ತುಪ್ಪಟ ಕತ್ತರಿಸುವ ಕುರುಬ ಕುರಿ ಎಣಿಕೆಯನ್ನು ಮಾಡುತ್ತಾನೆ. ಕುರಿಗಳು ಕುರುಬನಿಗೆ ಸೇರಿದವು. ಅವುಗಳನ್ನು ಕಾಯೋದಿಕ್ಕೆ ನಮಗೆ ಒಪ್ಪಿಸಿದ್ದಾನೆ. ಹಾಗಾಗಿ ವರ್ಷಕ್ಕೆ ಒಂದು ಸಾರಿ ಬಂದು ತುಪ್ಪಟ ಕತ್ತರಿಸಿ, ಎಣಿಕೆ ಮಾಡಿ ನಮ್ಮ ವಶಕ್ಕೆ ಒಪ್ಪಿಸುತ್ತಾನೆ ಎನ್ನುವುದು ಕುರಿ ಕಾಯುವ ಬಹುಮುಖ್ಯ ಸಮುದಾಯವಾದ ಗೊಲ್ಲರ ನಂಬಿಕೆ.


ಕುರಿಗಳನ್ನು ಬಣ್ಣ, ವಯಸ್ಸು, ಲಿಂಗ ಮೋಟುಗಳ ಆಧಾರದಲ್ಲಿ ಗುರುತಿಸುತ್ತಾರೆ. ಕರಿಯ, ಬಿಳಿಯ, ಸೋಳಕ, ಜನ್ನ, ಹಂಡ, ಹೊಟ್ಟೆ ಚೊಳಕ, ಚೆಂಚೊಳಕ, ಕಂಕುಳ ಚೊಳಕ (ಚೋಳಕದಲ್ಲೇ ನಾನಾತರ), ಬೂತ ಜನ್ನಾಳ, ಕೆಂಚಗ, ಕೆಂಚಗುಂಡ, ಚುಂಚ, ಕರೀ ಚುಂಚ, ಹಾಳಗ, ಕೆಂದ, ಕರಿ ಹಂಡಾಳ, ಬೂದು ಮಣಕ, ಹಾಳಗ, ಹರಿಗಾಡು, ಕಾರಾಡು, ಉಂಡುಗಾರ, ಮಸಗುಂಡಾಳ,



ಕರೇ ಹಳಗದ ಪಕ್ಕೆ ಮೇಲೆ ಮಚ್ಚೆ ಕುರಿ



ಚೋಳಕ



ಸಬ್ರದ ಕರೇಹಳಗ



ಪಾಳಹಂಡ

ಹಾಳ, ಹಾಳು ಜನ್ನ, ಸುಕಜನ್ನಾಳ ಪರಮ, ಅಚ್ಚಕರಿ ಪರಮ, ಪಟ್ಟೆದಲೆ, ಹುಂಡದಲೆ ಪರಮ, ಉಂಡುಗುರಿ, ಜನ್ನಾಳು ಪಚ್ಲೆ. –ಹೀಗೆ ಸಾವಿರಾರು ಬಣ್ಣಗಳಲ್ಲಿ ತಮ್ಮ ಕುರಿಗಳನ್ನು ಗುರುತಿಸು ತ್ತಾರೆ.

ಕರಿ, ಬಿಳಿ, ಕೆಂದ ಈ ಮೂರೂ ಬಣ್ಣಗಳಿದ್ದರೆ ಅದನ್ನು ಸೋಳಕ ಎನ್ನುತ್ತಾರೆ. ತಲೆ ಮೇಲೆ ಬೆಳ್ಳನೆಯ ಮಸ್ಕ, ಹೊಬಾಲ, ಕಾಲಿನ ಮೇಲೆ ಬೆಳ್ಳಗಿರು ವುದು–ಇದನ್ನು ಮಸಗುಂಡ ಕಾಲಕಣ್ಣಿ ಎನ್ನುತ್ತಾರೆ. ಹಾಳಗ ಎಂದರೆ ಇಡೀ ಮೈಯಿ ಕೆಂದಗಿರುವುದು. ಕೊಳ್ಳಾಳಗಕ್ಕೆ ಹಾಳು ಕುರಿಯ ಕತ್ತಿನಲ್ಲಿ ಕೊಳಮಣೆ ಗಳಿರುತ್ತವೆ. ತಲ ಮೇಲೆ ಬೆಳ್ಳಗಿದ್ದು, ಹೊಟ್ಟೆ ಕೆಳಗೆ ಕರೆಯದು ಇದ್ದರ ಅದು ಜನ್ನ, ತಲೆ, ಹೊಟ್ಟೆ ಮೇಲೆ ಬೆಳ್ಳಗಿದ್ದು ಇನ್ನುಳಿದ ಭಾಗ ಚೋಳಕವಾಗಿದ್ದರೆ ಉಂಡಜನ್ನ ಸೋಳಕ. ಪಾರಿವಾಳ ಬಣ್ಣದ ಕುರಿ ಪಾಲಿವಾಣ.


ಬಾರಸೊಳಕ ಕುರಿಗೆ ಹೊಟ್ಟೆಯ ಮ್ಯಾಲೆ ಸೊಳಕದ ಬಾರ್‌ಗಳು. ಹೊಟ್ಟೆಯ ಕೆಳಗೆ ಕರ್‍ರಗಿರುತ್ತದೆ. ನೆರೆ ಕುರಿ ಅಂದ್ರೆ ಒಳಗೆಲ್ಲಾ ಕರ್‍ರಗಿರುತ್ತದೆ. ಮೇಲ ನೆರೆ ಕೂದಲಿರುತ್ತದೆ. ಯರೆಗಡ್ಡೆ ಸೀಮೇಲಿ ಕರೀವು ಜಾಸ್ತಿ. ನೆರೆಗುಂಡು ಕುರಿ, ಕರಿ ಹುಂಡ ಕುರಿ ಹೆಚ್ಚಾಗಿ ಕಂಡುಬರುತ್ತವೆ. ಶಿರಾ, ಹಿರಿಯೂರು ಕಡೆಗಳಲ್ಲಿ ಕರೀವು, ಸೊಳಕ, ಜನ್ನಹುಂಡಾ ಬಹಳ ಖಾಯಸ್ಸು ಪಡುತ್ತಾರೆ. ಚೋಳಕ ಹಂಡ ಅಪರೂಪದ ಬಣ್ಣ.

ಅರ್ಧ ಮೈಲಿಯಲ್ಲಿ ಕುರಿಗಳು ಇದ್ರೂ ನಮ್ಮ ಪಾಲು ಇದು ಎಂದು ಗೊತ್ತಾಗುವ ಕೆಲವು ಹೆಗ್ಗುರುತಿನ ಕುರಿಗಳು ಇರುತ್ತವೆ. ಅವುಗಳ ಬಣ್ಣ ಆಕರ್ಷಕವಾಗಿರುತ್ತದೆ. ತುಮಕೂರು ಜಿಲ್ಲೆಯಲ್ಲಿ ಬಣ್ಣಗಳು ; ಕರಿಮುಖದ ಕುರಿ, ಚೋಳಕ, ಕೆಂಪನಳಗ, ಕರಿಯಳಗ, ಚೋಳಕಹಂಡ.

**ಕುರಿ ಮೋಟು** : ಕುರಿಗಳನ್ನು ಬಣ್ಣದ ಜೊತೆ ಇನ್ನು ಸ್ಪಷ್ಟವಾಗಿ ಗುರುತಿಸುವ ಉದ್ದೇಶದಿಂದ ಕುರಿಗಳ ಕಿವಿಗೆ ಮೋಟು ಹಾಕುತ್ತಾರೆ. ಕಾರಹಬ್ಬದ ಮೂಲಾ ನಕ್ಷತ್ರದ ದಿವಸ ಕುರಿಗಳಿಗೆ ಮೋಟು ಹಾಕುತ್ತಾರೆ. ಆಗ ಬಿಟ್ಟರೆ ಬೇರೆ ಕಾಲದಲ್ಲಿ ಮೋಟು ಹಾಕುವುದಿಲ್ಲ. ಕಾರಹಬ್ಬದ ಹಿಂದೆ ಮುಂದೆ ಹಿಂಗಡೆ, ಮುಂಗಡೆ ಮರಿಗಳನ್ನೆಲ್ಲಾ ಮಾರುತ್ತಾರೆ, ಬೀಜದ ತಗರಿಗೆ, ಹೆಣ್ಮರಿಗಳಿಗೆ ಮೋಟು ಹಾಕುತ್ತಾರೆ. ಬಲಗಿವಿ ಸೀಳು ಮೋಟು, ಮುಂಗಡ್ಕ, ಹಿಂಗಡ್ಕ, ಸೀಳು ಮೋಟು, ವಾರೆಮೋಟು, ಎಡಗಿವಿ ವಾರೆಮೋಟು, ಬಲಗಿವಿ ವಾರೆಮೋಟು – ಹೀಗೆ ಆಯಾಯ ಮನೆತನ ಆದರದೇ ಮೋಟನ್ನು ತಲೆತಲಾಂತರದಿಂದ ಮುಂದುವರಿಸಿಕೊಂಡು ಬಂದಿವೆ. ಉದಾಹರಣೆಗೆ ಹೊರಕೇರಿ ಮನೆತನಕ್ಕೆ ಬಲಗಿವಿ ಸೀಳುಮೋಟು, ನಿರ್ವಾಣಜ್ಜಿ ಮನೆತನಕ್ಕೆ ಬಲಗಿವಿ ವಾರೆಮೋಟು, ಕರ್‍ರಂಜ್ಜಿ ಮನೇರು ಎಡಗಿವಿ ಸೀಳುಮೋಟು ಹಾಕಿಸಿಕೊಂಡು ಅದು ಪರಂಪರೆಯಾಗಿ ಬೆಳೆದುಬಂದಿದೆ. ಒಂದೇ ವರಸೆಯಲ್ಲಿ ಒಂದೇ ಬಣ್ಣದಲ್ಲಿ ಕುರಿ ಇದ್ದಾಗ ಮೋಟು ಆಗ ಅನುಕೂಲಕ್ಕೆ ಬರುತ್ತದೆ.

❑





## "ಹಲ್ಲು ಹಿಡಿದು ನೋಡ್ರೀ"

ಸಾಮಾನ್ಯವಾಗಿ ಕುರಿ-ಮೇಕೆಗಳಲ್ಲಿ ವಯಸ್ಸನ್ನು ಹಲ್ಲು ಹಿಡಿದು ನೋಡಿಯೇ ತಿಳಿಯುತ್ತಾರೆ. ಆದರೆ ದನಗಳಂತೆ ಇವುಗಳಲ್ಲಿ ವಯಸ್ಸಿಗೆ ಪ್ರಾಮುಖ್ಯ ಇಲ್ಲ. ಏನಿದ್ದರೂ ಅದರ ನಡುಬಿಗೆ ಕೈಯಾಕಿ ಯಾಪಾರ ಮಾಡುತ್ತಾರೆ. ಆದರೆ ಆಳೋ ಕುರಿಗಳನ್ನು ಕೊಳ್ಳುವವರು ಸಾಕು ಮರಿಗಳನ್ನು ಮನೆಹತ್ತಿರ ಬಿಟ್ಟುಕೊಳ್ಳುವವರು ಮಾತ್ರ ಹಲ್ಲು ಹಿಡಿದು ನೋಡುತ್ತಾರೆ.


ಕುರಿ ಹುಟ್ಟಿದ ಒಂದು ವರ್ಷಕ್ಕೆ ಎರಡು ಹಲ್ಲು ಹಾಕುತ್ತದೆ. ಅದು ಕಟ್ಟಿಸಿಕೊಳ್ಳುವ ವಯಸ್ಸು. ಎರಡನೆಯ ವರ್ಷಕ್ಕೆ ನಾಲ್ಕು ಹಲ್ಲು ಉದುರಿರುತ್ತವೆ. ನಾಲ್ಕನೆಯ ಹಲ್ಲಿನ ಕುರಿ ಮರಿ ಹಾಕಿರುತ್ತದೆ. ಮೂರನೆಯ ವರ್ಷಕ್ಕೆ ಆರನೆಯ ಹಲ್ಲು ಬಿದ್ದಿರುತ್ತದೆ. ಆರು ಹಲ್ಲಿಗೆ ಬಂದ ಒಂದು ವರ್ಷಕ್ಕೆ ಕಡೇ ಹಲ್ಲು ಅಂದರೆ ಎಂಟನೆಯ ಹಲ್ಲು ಉದುರಿಸುತ್ತದೆ. ಕಡೆ ಹಲ್ಲಿಗೆ ಬಂದರೂ ಪ್ರಾಯದ ಕುರಿ ಅನ್ನುತ್ತಾರೆ. ಎಂಟನೆಯ ಹಲ್ಲಿಗೆ ಮೂರನೆಯ ಸೂಲಿಗೆ ಬಂದಿರುತ್ತದೆ.


ಬಾಯ್ದೊಡಿದ ನಂತರ ಹಲ್ಲು ಸವೆಯುತ್ತಾ ಬರುತ್ತದೆ. ಕೆಲವೊಮ್ಮೆ ಐದನೆಯ ಸೂಲಿಗೆ ಹಲ್ಲು ಸವೆಯುತ್ತಾ ಬರುತ್ತದೆ. ಹಲ್ಲು ಸವೆಯುತ್ತಾ ಬಂದಾಗ ಅದು ಮುದುಗುರಿ. ಆರನೆಯ ಸೂಲಿಗೆ ಹಲ್ಲು ಸಂದು ಬಿಡುತ್ತದೆ. ಆರು ಅಥವಾ ಏಳನೆಯ

ಸೂಲಿಗೆ ಬಲ್ಕಿ ಕುರಿಯಾಗುತ್ತದೆ. ಆಗ ಅದನ್ನು ಮಾರುತ್ತಾರೆ. ಕೆಲವೊಮ್ಮೆ 'ದೇವರು' ಮಾಡಿದಾಗ ಆ ಕುರಿಯನ್ನು ಕಡಿಯುತ್ತಾರೆ.

ಕುರಿಯನ್ನು ಸರಿಯಾಗಿ ಕಾಪಾಡಿ, ಕಾಯಿಲೆ-ಕಸಾಲೆ ಇರದಿದ್ರೆ, ಹತ್ತರಿಂದ ಹನ್ನೆರಡು ವರ್ಷ ಬಾಳುತ್ತದೆ. ಹನ್ನೆರಡು ಸೂಲು ಕುರಿ ಈದ ಉದಾಹರಣೆಗಳಿವೆ.

❑





## ನಾಕು ನಿಟ್ಟು ; ನಾಕು ಪಾಲು

**ಕು**ರಿ ಕಳ್ಳೆಯೆಂದರೆ ನಾಕು ನಿಟ್ಟು ; ಮೂಡ, ಪಡುವ, ತೆಂಕ, ಬಡಗ. ನಾಲ್ಕು ನಿಟ್ಟಿನಲ್ಲಿ ನಾಕು ಪಾಲು ಕುರಿ ಹೋಡೀಬೇಕೆಂದ್ರೆ ಬೆರಸಾಡೋದು ಲೆಕ್ಕವಲ್ಲ. ನಾಲ್ಕು ಪಾಲಿನಲ್ಲಿ ಕುರಿ ನಾಲ್ಕು ದಿಕ್ಕಿಗೆ ಅವೇ ಹೋಗಿ ನಿಂತುಕೊಳ್ಳುತ್ತವೆ. ಹುಷ್sss ಎಂದರ ಅಟೋಮ್ಯಾಟಿಕ್ ಆಗಿ ಕುರಿನೇ ಹೋಗಿ ನಾಲ್ಕು ಪಾಲಿಗೆ ನಿಂತುಕೊಂಡು ಬಿಡುತ್ತಾವೆ. ಬೆಳಿಗ್ಗೆ ಹತ್ತು ಗಂಟೆಗೆ ಕಳ್ಳೆಯೊಳಗೆ ಪಾಲು ಹೊಡೆಯುತ್ತಾರ್–ನಾಲ್ಕು ಮೂಲೆಗಳಿಗೆ ; ನಿಶಾನೆ, ಈಶಾನ್ಯ, ಅಗ್ನಿ, ವಾಯುವ್ಯ ಮೂಲೆಗಳಿಗೆ. ಇವು ಇಂತಿಂಥ ಮೂಲೆ ಅಂತಲೇ ಮಾಡಿಕೊಂಡಿರುತ್ತಾರೆ. ಸಾಯಂಕಾಲ ಬಂದು ಕೂಡಿದಾಗ ಅದೇ ಮೂಲೆಗೆ ಕೂಡಿಕೊಳ್ಳುತ್ತಾರೆ.

ಬೆಳಿಗ್ಗೆ ಪಾಲು ಹೊಡಿಕೊಳ್ಳಬೇಕಾದ್ರು ಮೊದಲಿಗೆ ಐವತ್ತು ಕುರಿಗಳನ್ನು 'ದುಂಡಗೆ' ಮಾಡುತ್ತಾರೆ. ಇನ್ನುಳಿದ ಕುರಿಗಳು ತನ್ನ ದಆರಿ ಹಿಡಿದುಕೊಳ್ಳುತ್ತವೆ. ಆರು ನೂರು ಕುರಿ ಒಂದು ಕಳ್ಳೆ. "ಕುರಿಗೂ ಕೂಡ ಪ್ರಜ್ಞೆ ಇದೆ. ನನ್ನ ಮೂಲೆ, ನನ್ನ ನಿಟ್ಟು ಅಂತ ಅದಕ್ಕೂ ಗೊತ್ತಾಗುತ್ತೆ. ನಂದು ಈಶಾನ್ಯ ಮೂಲೆ ಕಣ್ಲೇ ಎನ್ನುವುದು ಕುರಿಯವರ ವಾಡಪೆ" ಎನ್ನುತ್ತಾರೆ ನುರಿತ ಕುರಿಗಾರ ಹಂದನಕೆರೆಯ ಹೊರಕೇರಿ ಸಿದ್ದಣ್ಣ. ಹಂದನಕೆರೆ ಪರಿಸರಕ್ಕೆ ಶೆಟ್ಟಿಕೆರೆ ಮೂಲೆ, ಅಲ್ಲೂರು ಮೂಲೆ, ಬಾಗೂರು ಮೂಲೆ ಎಂದು ಊರುಗಳನ್ನು ಗುರುತಿಟ್ಟುಕೊಂಡು ಕರೆಯುತ್ತಾರೆ.

ನಾಲ್ಕು ಮೂಲೆಯಲ್ಲಿ ತಟಿಕೆ ಹಾಕಿದ್ದರೂ ಅವರವರ ಮೂಲೆಯಲ್ಲಿಯೇ ತಟಿಕೆ ತೆಗೆದು ಕುರಿ ಹೊಡೆಯುವುದು. ಆ ಮೂಲೆಯಲ್ಲಿಯೇ ಕುಂತು ಉಣ್ಣುತ್ತಾರೆ. ಡರ್ರ ಅಂತ ಎಬ್ಬಿಸಿದರೆ ಅವು ಅವುಗಳ ಮೂಲೆಗೆ ಅವುಗಳೇ ಬಂದು ನಿಂತುಕೊಳ್ಳುತ್ತವೆ. ೧೫೦ ಕುರಿಗಳಂತೆ ನಾಲ್ಕು ಪಾಲುಗಳಿರುತ್ತವೆ. ಗರಿ ಎಸೆದು, ಕಂಬಳಿ ಹಾಕಿ ಬಂದರೆ ಆ ಪಾಲಿನ ನಾಯಿ ಅಲ್ಲಿಯೇ ಮಲಗಿರುತ್ತದೆ.

❑



## ಕುರಿ ಕಾಯುವುದು

ಬೆಳಿಗ್ಗೆಯೆದ್ದು ಕುರಿ ಹೊಡ್ಕೊಂಡು ಹೋದರೆ ಸದಾ ಕಾಲ ಎಲ್ಲಾ ಕುರಿಗಳನ್ನು ನೋಡಿಕೊಳ್ಳುವುದಕ್ಕೆ ಆಗಲ್ಲ. ಮಧ್ಯಾಹ್ನ ಒಂದು ಸಾರಿ, ಸಾಯಂಕಾಲ ಒಂದು ಸಾರಿ ನೊಡ್ಕೋಬಹುದು. ಮಧ್ಯಾಹ್ನ ನೀರಿಗೆ ಬಿಟ್ಟಾಗ ನೋಡಿಕೊಳ್ಳುತ್ತಾರೆ. ಒಂದು ಕುರಿ ಹಿಂಡಿನಿಂದ ಹಿಂದೆನೆ ಹೋಗುತ್ತಾ ಇರುತ್ತದೆ. ಅದು ದಂದು ಗುರಿ. ಇನ್ನೊಂದು ಸಿಡಿಗುರಿ: ಅದು ಕಳ್ಳೆಯಿಂದ ಸಿಡಿದು ಹೋಗ್ತಾ ಇರುತ್ತದೆ. ಇವೆರಡನ್ನು ಮಾತ್ರ ಕುರಿ ಕಾಯುವವರು ನೋಡುತ್ತಾ ಇರುತ್ತಾರೆ. ದಂದುಗುರಿ ಪೂರ್ಣಿಮಿ ದಿನದಲ್ಲಿ ಮರಿ ಹಾಕಿದ್ರೆ ಮರಿಯನ್ನು ಬೇಗ ಮೇಯುವುದಕ್ಕೆ ಬಿಡುವುದಿಲ್ಲ. ಯಾಕಂದ್ರೆ ಮರಿ ಮಗ್ಗುಲಲ್ಲಿ ಇದ್ರೆ ಕುರಿ ಅಷ್ಟೂ ಮಗ್ಗುಲಲ್ಲಿ ಇದಾವೆ ಅನ್ನಿಸಿ, ಹಿಂಡು ಅರ್ಧ ಮೈಲಿ ಮುಂದೆ ಹೋದರೂ ದಂದುಗುರಿ ಬರುವುದೇ ಇಲ್ಲ. "ದಂದು ಗುರಿ ಹಣೆಬರವೇ ಪ್ರೋಟು" ಎಂದು ಕುರಿ ಕಾಯುವವರು ಮೂಗು ಮುರಿಯುತ್ತಾರೆ. ದಂದುಗುರಿ ಕೊನೆಗ್ಯೆಯಲ್ಲೇ ಹೋಗುತ್ತಾ ಇರುತ್ತದೆ. ದಂದುಗುರಿ, ಸಿಡಿಗುರಿ ಬೇರೆ ಕುರಿ ಹಿಂಡಿಗೆ ಹೋದ್ರೂ ಅರಚಲ್ಲ; ಅವು ನಿಧಾನಕ್ಕೆ ಅರಚುತ್ತವೆ. ಬೇರೆ ಕುರಿ ಇನ್ನೊಂದು ಪಾಲಿನ ಕುರಿಗೆ ಹೊದರೆ ಲಪ್ಪಂತ ಅರುಚುತ್ತೆ, ಇದು ತನ್ನ ಪಾಲಲ್ಲ ಅಂತ ಗಬರಾಡುತ್ತೆ, ಮುಸುಗುಡುತ್ತೆ, ಹಂಬಲಿಸುತ್ತೆ.

ಮಾರ್‍ನಾಮಿಯಿಂದ ಕೂಳೆ ಬರುವವರೆಗೂ ಗಿಡ (ಕಾಡು)ದಲ್ಲಿ ಕುರಿ ಕಾಯಬೇಕು. ಆಗ ಕೆರೆ–ಕಟ್ಟೆ ತುಂಬಿರುತ್ತದೆ. ಕಾಡಿನಲ್ಲಿ ಕುರಿ ಕಾಯಬೇಕಾದರೆ ಕುರಿಯನ್ನು ನ್ಯಾರವಾಗಿ ಕಾಯಬೇಕು. ಕುರಿ ಕೊನೆಗೆ ಹೋಗುತ್ತದ್ದಲ್ಲ ಅದನ್ನು ನಡುವಿಗೆ ಹಾಕಿಕೊಂಡು ಬಗ್ಗಿಸಿಕೊಳ್ಳಬೇಕು. ೧೫೦–೩೦೦ ಕುರಿಗಳಿಗೆ ಇಬ್ಬರು ಕಾಯಬೇಕು ಮುಂದಿನ ಕುರಿಗೊಬ್ಬ ; ಹಿಂದಿನ ಕುರಿಗೊಬ್ಬ, ಮುಂದಿನ ಕುರಿಗಳನ್ನು ನಡೆಸುವವನು ಬಹಳ ಮುಖ್ಯ. ಕಾಡಿನಲ್ಲಾದರೂ ಅಷ್ಟೆ ; ಬೇಸಿಗೆ ಕಾಲದಲ್ಲಿಯೂ ಅಷ್ಟೆ, ಮೂಡ ಮುಂದಾಗಿ ಹೋಗಬೇಕು ಅಂದ್ರೆ, ಕೆಲವು ಕುರಿಗಳು ಪಡು ಮುಂದಾಗಿ ಎಳಕೊಳ್ಳುತ್ತವೆ. ಕೆಲವು ತೆಂಕ ಕಡೆಗೆ, ಬಡಗಡೆಗೆ ಎಳಕೊಳ್ಳುತ್ತವೆ. ಆಗ ನಡಿಕೆ ಹಾಕಿಕೊಂಡು ಕುರಿ ನ್ಯಾರ ಮಾಡಬೇಕು ; ತಿದ್ದಬೇಕು.

ಹಳ್ಳದಲ್ಲಿಯಾಗಲೀ, ಬಾರೆಯಲ್ಲಾಗಲಿ ಕುರಿ ಕಚ್ಚಿಗೊಂಡರೆ ಮುಂದೆ ಹೋಗುತ್ತಿದ್ದ ಇಪ್ಪತ್ತು ಕುರಿಗಳನ್ನು ಮಕಾಡೆ ಎಸೆಯುತ್ತಾರೆ. ಸುಮಾರಾಗಿ ಮಕಾಡೆ ಎಸೆದ್ರೆ, ಅಲ್ಲಿ ಕುರಿ ಕೆದರಿ ಮೇಯುತ್ತವೆ. ಯಾವತ್ತೂ ಕುರಿಗಳು ಒಳ್ಳೆಯ ಹುಲ್ಲು ಸಿಕ್ಕಾಗ ಕೆದರಿ ಮೇಯುತ್ತಿರುತ್ತವೆ. ಇಷ್ಟಪಟ್ಟು ಒಂದೇ ಕಡೆ ಚೆನ್ನಾಗಿ ಮೇಯುತ್ತಿದ್ದರೆ, ಅದನ್ನು ಕೆದರಿ ಮೇಯುತ್ತಾವೆ ಅನ್ನುತ್ತಾರೆ. ಅದನ್ನು ಕುರಿ ಕಾಯುವವನು ಸೂಕ್ಷ್ಮವಾಗಿ ಗಮನಿಸುತ್ತಿರಬೇಕು. ಆ ಜಾಗ ಉಕ್ಕೆ ಹೊಲ ಆಗಿರಬಹುದು, ವೆಡಕೆ ಬೀಳು ಇರಬಹುದು, "ಉಕ್ಕೆ ಹೊಡೆದಿದ್ದ, ಬೀಳುಲ್ಲು ಇತ್ತು, ಎರಡು ಪಟ್ಟೆ ಒಂದು ಕೆದರು ಚೆನ್ನಾಗಿ ಮೇಯ್ದು, ಇವತ್ತಿನ ಕತೆ ಮುಗಿತಪ್ಪ, ಇನ್ನು ಹಂಗೆಹಿಂಗೆ ಆಡಿಸ್ಕೊಂಡು ಹೋಗಬಹುದು" ಎನ್ನುತ್ತಿರುತ್ತಾರೆ ಕುರಿ ಕಾಯುವವರು.

ಗಿಡದಲ್ಲಿ, ಕಾಡಿನಲ್ಲಿ ಕುರಿ ಕಾಯಬೇಕಾದ್ರೆ ದಂದುಗುರಿ, ಸಿಡಿಗುರಿ, ನೋಡಿದಂಗೆ, ಬೇಸಿಗೆಯ ಹೊಲದ ಬಾರೆಯಲ್ಲಿ ಮೇಯಿಸಬೇಕಾದರೆ ಮರಗುರಿಯ ಮೇಲೆ ಒಂದು ಕಣ್ಣಿರಬೇಕು. ಮರಗುರಿ ಜಾಲಿ ಮರದ ಸೊಗಡಿಗೆ ಮರ ಮರ ಹುಡುಕಿ ಕೊಂಡು ಹೋಗುತ್ತದೆ. ಶಿವರಾತ್ರಿಯಿಂದ ಉಗಾದಿಯವರೆಗೂ ಜಾಲಿಕಾಯಿ ಇರುತ್ತದೆ. ಒಂದು, ಒಂದೂವರೆ ತಿಂಗಳು ಜಾಲಿಕಾಯಿ ಸಿಗುತ್ತದೆ. ಆದಕ್ಕೆ ಮರಗುರಿ ಜಾಲಿಮರಕ್ಕೆ ಪಾಟಾಗುತ್ತದೆ. ಒಂದು ಮೈಲಿ ದೂರದಲ್ಲಿ ಮರ ಇದ್ದರೂ ಹುಡುಕಿಕೊಂಡು ಹೋಗುತ್ತದೆ. ಮತ್ತೆ ಅದೇ ವಾಪಸ್ಸು ಬರುತ್ತದೆ, ಬರುವಾಗ ಎರಡು ಮೂರು ಬೇರೆ ಹಿಂಡುಗಳು ಅಡ್ಡ ಬಂದರೂ ತಪ್ಪಿಸಿಕೊಂಡು ಸಲೀಸಾಗಿ ಬರುತ್ತದೆ.

ಕುರಿ ಕಾಯುವುದರಲ್ಲಿ, ಕುರಿ ಪಯಣದಲ್ಲಿ ಕರ್‍ರಗುರಿ ಪ್ರಮುಖ ಪಾತ್ರ ವಹಿಸುತ್ತದೆ. ಇದು ಯಾವಾಗಲೂ ಮೊದಲು ಹೋಗುತ್ತಾ ಇರುತ್ತದೆ ; ಮುನ್ನುಗ್ಗುತ್ತಿರುತ್ತದೆ. ಅದೊಂದು ಆಳು ; ಕುರಿ ಕಾಯುವವರು ಮುಂದೆ ಹೋಗದಿದ್ದರೂ, ಅದು ಹಿಂಡನ್ನು ಕರಕೊಂಡು ಹೋಗುತ್ತಿರುತ್ತದೆ. ಅಕಸ್ಮಾತ್ ಕರ್‍ರಗುರಿ ನಡುಗುರಿಲಿದ್ರೆ ಹುಷ್ ಅಂತ ಅದ್ಲಿಸಿದರೆ ಮುಂದಕೋಡುತ್ತದೆ. ನೀರಿಗೆ ಹಿಂಡನ್ನು ಬಿಳಿಸಿದಾಗಲೂ ಕರ್‍ರಗುರಿಯನ್ನು ಮೊದಲು ಕರೆಯುತ್ತಾರೆ. ಜಾತ್ರೆಯಲ್ಲಿಯೂ ಕುರಿ ಕರೆದಾಗ ಅದನ್ನೇ ಮೊದಲು ಕರೆಯುವುದು.

ಕರ್‍ರಗುರಿಯ ಪಕ್ಕದಲ್ಲಿ ಒಂದು ಕುರಿ ಇರುತ್ತದೆ. ಅದು ಬಲಗುರಿ, ಕರ್‍ರಗುರಿ ನೀರಿಗೆ

ದುಮ್ಮಿಕ್ಕಿಸೋ ಮೊದಲು ಬಲಗುರಿಯನ್ನು ನೀರಿಗೆ ತಳ್ಳಬೇಕು. ಕರ್‍ರ್ಗುರಿ ನೀರಿಗೆ ಬಿದ್ದ ಮೇಲೆ ಸರಾಗವಾಗಿ ಕುರಿ ನೀರಿಗಿಳಿಯುತ್ತವೆ. ನೀರಿಗೆ ಹೋಗಿ ಕುರಿ ಹಿಂದಿರುಗಿದರೆ ಮಡೆ ಹುಯ್ಯುತ್ತಾವೆ. ಕುರಿ ಒಂದು ತಿಕಕ್ಕೆ ಒಂದರ ತಿಕ ಇಟ್ಟು ಚಿಂಡಿಕ್ಕಿದರೆ, ಮಡೆ ಹೊಯ್ದರೆ, ಅಲ್ಲಿಗೆ ಮುಗಿಯಿತು. ಇನ್ನು ಏನು ಬೇಕಾದರೂ ಮಾಡಲಿ, ಕುರಿ ನೀರಿಗಿಳಿಯುವುದಿಲ್ಲ.

ಕುರಿಯನ್ನು ಸೋವಕ್ಕೆ ಈಚಲು ಜರ್ಲು ಬಳಸುತ್ತಾರೆ. ಈಚಲು ಗರಿಯ ಮುಂದಿನ ತುದಿ ಕಡಿದು ಹಾಕಿ, ಕಾರೆ ಗಿಡಕ್ಕೆ ಬಡಚಿದರೆ, ಮುಂದಿನ ತುದಿಮುಳ್ಳು ಹೋಗುತ್ತದೆ. ಒಂದೂವರೆ ಮೊಳದ ಜರಲು ರೆಡಿಯಾಗುತ್ತದೆ. ಅದರಿಂದ ಕುರಿಗೆ ಹೊಡೆದರೆ ಏಟು ಬೀಳುವುದಿಲ್ಲ; ಆದರೆ ಚುರುಕು ಮುಟ್ಟುತ್ತದೆ. ಇಂಥ ಸವರಿದ ಜರ್ಲು ಎರಡು ದಿನ ಬಾಳುತ್ತೆ, ಕುರಿಹಟ್ಟಿಯ ತಟಿಕೆಗೆ ಸಿಕ್ಕಿಸಿರುತ್ತಾರೆ–ರಾತ್ರಿ ಹೊತ್ತಿನಲ್ಲಿ. ಈಚಲು ಜರ್ಲು ಬಿಟ್ಟು ಕುರಿ ಕೋಲಲ್ಲಿ ಇತ್ತೀಚಿನ ದಿನಗಳಲ್ಲಿ ಕುರಿಗೆ ಹೊಡೆಯುತ್ತಾರೆ. ಅದು ಕುರಿ ಕೋಲಲ್ಲ ; ಅದು ನಮ್ಮ ಬೀರಪ್ಪ ಎನ್ನುತ್ತಾರೆ ಹೊರಕೇರಿ ಸಿದ್ದಣ್ಣ. ಕುರಿ ಕರೆಯುವ ಆಚರಣೆಯಲ್ಲಿ ಕುರಿಕೋಲನ್ನು ಇಟ್ಟು ಕುರಿ ಕರೆಯುತ್ತಾರೆ. ಹಂದನಕೆರೆಯಲ್ಲಿ ಹಿಂದೆ ಕಲ್ಲಬಿಲ್ಲಿ ನಿಂಗಣ್ಣ ಎಂಬ ಹಿರೀಕರು ಇದ್ದರು. ಅವರ ಹೆಗಲ ಮೇಲೊಂದು ಹಗಲು ಗಂಬಳಿ, ಕೈಯಲ್ಲೊಂದು ಕುರಿಕೋಲು, ಇನ್ನೊಂದು ಕೈಯಲ್ಲಿ ಜರ್ಲು ಮತ್ತು ಕುಡ್ಲು ಯಾವಾಗಲೂ ಇರುತ್ತಿತ್ತು. ಹಗಲು ಗಂಬಳಿ ಎಂದರೆ ಆರು ಮೊಳದ ಕಂಬಳಿ. ರಾತ್ರಿ ಬಳಸುವುದು ಒಂಭತ್ತು ಮೊಳದ ಕಂಬಳಿ. ಕುರಿ ದೊಣ್ಣೆ ಸುಮ್ಮನೆ ಹಿಡಿದುಕೊಳ್ಳುವುದಕ್ಕೆ. ಅದು ಬೀರಪ್ಪ. ರಾತ್ರಿ ಹೊತ್ತು ಕುರಿ ಕೋಲಿದ್ದರೆ ಅವನಿಗೆ ಧೈರ್ಯ. ಬೇಕಾದಂಥ ಮಳೆ ಹೊಡೆತಾ ಇರ್ಲಿ, ದೊಣ್ಣೆ ಹಿಡಕೊಂಡು ನಿಂತಿರ್ತಾನೆ. ಮಲಗಿದರೆ ಅದೇ ಅವನಿಗೆ ಹತಾರ. ದೊಣ್ಣೇ ಬೀರಪ್ಪ ಅವನಿಗ ಜತೆಗಾರ.

ಫಲ ಮರಿ ಚೆನ್ನಾಗಿ ಬಂದಿದ್ದಾವೆ ಅಂದ್ರೆ ಅವನು ಕುರಿ ಚೆನ್ನಾಗಿ ಕಾದಿದ್ದಾನೆ ಅಂತ. ಮಾರ್ನಾಮಿ ತಿಂಗಳಿನಲ್ಲಿ ಕಾದನ ಕುರಿ ನೋಡು ; ಗೇಯ್ದ ಹೊಲ ನೋಡು ಎನ್ನುವುದು ಹಳ್ಳಿಗಾಡಿನಲ್ಲಿ ಜನಜನಿತವಾದ ಮಾತುಕತೆ. ಮಾರ್ನಮಿ ತಿಂಗಳಿನಲ್ಲಿ ಸರಿಯಾಗಿ ಕುರಿಗೊಂದು ಮರಿ ಇರುತ್ತದೆ. ಮರಿಗಳು ಮುಲು ಮುಲು ಅಂತಿರುತ್ತವೆ. ಗೇಯ್ದವನ ಹೊಲದಲ್ಲಿ ಒಳ್ಳೆಯ ಒಡೆ ಒಡೆತಿರೋ ಕಾಲ. ಆಗ ನಿಂತುಕಂಡು ನೋಡಬೇಕು ಅನ್ನಿಸುತ್ತಿರುತ್ತದೆ.

❑



## ಬಗೆ ಮರಿ,
## ಬಗೆ ಗೌಡ, ಬಗಲದಾರ

ಊರಿನಲ್ಲಿ ಕುಲೆಂಟೂ ಜಾತಿನೂ ಇರುತ್ತದೆ. ಅದನ್ನು ಹದಿನೆಂಟು ಪಣ ಎನ್ನುತ್ತೀವಿ. ಊರಿನಲ್ಲಿ ಈ ಹದಿನೆಂಟು ಪಣದವರ ಆಸ್ತಿ, ಜಮೀನು, ತೋಟ, ಪೊಲಗಳಿರುತ್ತವೆ. ನೂರು ಭಾಗದ ಊರಿನಲ್ಲಿ ೩೦ ಭಾಗ, ೪೦ ಭಾಗ ಕುರಿ ಕಾಯುವವರು ಇರುತ್ತಾರೆ. ಊರಿನಿಂದ ಎರಡು ಮೂರು ಮೈಲಿ ಫಾಸಲೆಯವರೆಗೂ ಊರಿನವರ ಜಮೀನಿರುತ್ತದೆ. ಇದನ್ನು ಕುರಿಯವರು ಮೇಯಿಸುವ ಅನುಕೂಲಕ್ಕೆ ಮೂರು, ನಾಲ್ಕು 'ಬಗೆ'ಗಳನ್ನಾಗಿ ಮಾಡಿಕೊಂಡಿರುತ್ತಾರೆ. ಇಂಥ ಕಟ್ಟೆಯಿಂದ, ಇಂಥ ದಾರಿಯವರೆಗೂ ಅಂಥ ಒಂದೊಂದು ಗಡಿ ಹಾಕಿಕೊಂಡು 'ಬಗೆ'ಗಳನ್ನು ಮಾಡಿಕೊಂಡಿರುತ್ತಾರೆ. ಒಂದೊಂದು ಬಗೆಗೂ ಒಬ್ಬ ಬಗೆಗೌಡ ಇರುತ್ತಾರೆ. ಅವನ ಕೈಕೆಳಗೆ ಅವನ ಅನುಕೂಲಕ್ಕೆ, ಕುರಿ ಮೇಯಿಸುವವರ ಇಚ್ಚೆಯಂತೆ ಹಲವಾರು ಬಗಲುದಾರರು ಇರುತ್ತಾರೆ. ಊರಿನ ಕುರಿಗಾರರು ಇಂಥಿಂಥ 'ಬಗೆ'ಯಲ್ಲಿ ಮಾತ್ರ ಮೇಯಿಸುವ ಹಕ್ಕು ಹೊಂದಿರುತ್ತಾರೆ. ಸಂಕ್ರಾಂತಿಯ ನಂತರ ಕೊಳೆಯಲ್ಲಿ, ಶಿವರಾತ್ರಿಯವರೆಗೂ ಆಯಾಯ ಬಗೆಯಲ್ಲಿಯೇ ಮೇಯಿಸಬಹುದು. ಗೌರಿ ಮುಂದೆ ಹೆಸರು, ಶೇಂಗಾ ಕೊಳೆ ಬಂದರೆ ಆಗಲೂ ಈ ವ್ಯವಸ್ಥೆ ಜಾರಿಗೆ ಬರುತ್ತದೆ.

ಈ ಬಗೆಯ ವ್ಯವಸ್ಥೆಯಿಂದ ಊರಿನ ಹದಿನೆಂಟು ಪಣದವರು ಕುರಿಯವರಿಗೆ ಮೇಯಿಸುವುದಕ್ಕೆ ಅಧಿಕಾರ ಕೊಟ್ಟಂತಾಗುತ್ತದೆ. ಇದಕ್ಕೆ ಪ್ರತಿಯಾಗಿ ಬಗೆಗೌಡರು ಊರಿನ ಜಾತ್ರೆ, ಬಾನ, ಪರಿಷೆಗಳಲ್ಲಿ ಊರೊಟ್ಟಿನ ಕೆಲಸಕ್ಕೆ ಹೆಗಲು ಕೊಡುತ್ತಾರೆ. ಹಂದನಕೆರೆ ಊರನ್ನೇ ನಿರ್ದಿಷ್ಟ ಉದಾಹರಣೆಯಾಗಿ ವಿವರಿಸಬಹುದು. ಆ ಊರಿನಲ್ಲಿ ಮೂರು ಬಗೆಗಳಿವೆ. ಆ ಊರಿನ ದೊಡ್ಡಬಾನ, ಸಿಡಿ, ಸಿದ್ದರ ಜಾತ್ರೆಯನ್ನು ಮೂರು ಬಗೆಗೌಡರು ನಡೆಸಿಕೊಡುತ್ತಾರೆ. ಸಿಡಿಯಲ್ಲಿ ಸಿಡಿಮರಿಯನ್ನು ಈ ವರ್ಷ ಒಬ್ಬ, ಮುಂದಿನ ವರ್ಷ ಮತ್ತೊಬ್ಬ... ಹೀಗೆ ಸರತಿಯಂತೆ ಕೊಡುತ್ತಾರೆ. ಗುಡ್ಡದಲ್ಲಿ ಸಿದ್ದಪ್ಪನ ಜಾತ್ರೆ ಮಾಡುತ್ತಾರೆ. ಮಾರನೆಯ ದಿನ ದುರ್ಗಿ ಊಳಗ ಇರುತ್ತದೆ. ಆಗ ಮೂರು ಬಗೇ ಗೌಡರೂ ಒಂದೊಂದು ಬಗೆಮರಿಯನ್ನು ಕೊಡಬೇಕು.

ಒಂದು ಊರಿನ ಮೇಯಿಸುವ ಜಾಗಗಳನ್ನು ಸೌಹಾರ್ದಯುತವಾಗಿ ಹಂಚಿಕೊಂಡ ವ್ಯವಸ್ಥೆ ಇದು. ಇಲ್ಲಿ ಊರಿನಲ್ಲಿ ಮೇಯಿಸುವುದಕ್ಕೆ ಯಾವುದೇ ಕಿತ್ತಾಟ ಇರುವುದಿಲ್ಲ.

❑





## ಈವಳೆ ಕುರಿಗಳ ಆರೈಕೆ

ಶಿವರಾತ್ರಿಯಿಂದ ಉಗಾದಿಯವರೆಗೂ ಕುರಿ ಕಟ್ಟುತ್ತಿರುತ್ತವೆ. ಜೋರಾಗಿ ಕಟ್ಟುವುದು ಮೂರು ಬೆದೆಗಳಲ್ಲಿ ಮಾತ್ರ, ಮುಂಗಾರು ಟೈಮಲ್ಲಿ, ಹತ್ತೆ, ಚಿತ್ತೆ, ಉತ್ತರೆ ಮಳೆಗಳಲ್ಲಿ, ಮತ್ತೊಂದು ಅಸ್ಲೆ, ಮಳೆ, ಉಬ್ಬೆ ಮಳೆಗಳಲ್ಲಿ – ಈ ಮೂರು ಕಾಲಾವಧಿಗಳಲ್ಲಿ ಕುರಿಗಳು ಬೆದೆಗೆ ಬಂದು ಕಟ್ಟಿಸಿಕೊಳ್ಳಲು ಹಾತೊರೆಯುತ್ತಿರುತ್ತವೆ. ಕಾರಪಬ್ಬದಲ್ಲಿ ಕಟ್ಟಿಸಿಕೊಂಡ ಕುರಿಗಳು ಮಾರ್ನಾಮಿಯಲ್ಲಿ ಈಯ್ತಾವೆ. ಬೆದೆ ಕುರಿ ತಗರನ್ನು ರಾತ್ರಿಯಲ್ಲೂ ಹಿಂಬಾಲಿಸುತ್ತದೆ. ತಗರು ರಾತ್ರಿ ಮಲಗುವು ದಕ್ಕೆ ಬಿಡುವುದಿಲ್ಲ. ಬೆದೆ ಕುರಿಯೇ ತಗರನ್ನ ಹತ್ತುವುದಕ್ಕೆ ಪ್ರಯತ್ನಿಸುತ್ತಿರುತ್ತದೆ. ೧೫೦ ಕುರಿಗಳ ಪಾಲಿನಲ್ಲಿ ೧೦೦-೧೨೦ ಈವಳೆ ಕುರಿಗಳು ಇರುತ್ತವೆ.

ದೇಶಕ್ಕೆ ಹೋದಾಗ ಒಂದು ವರ್ಷದ ಮ್ಯಾಲೆ ಮೂರು ತಿಂಗಳಿಗೆ ಎರಡು ಸೂಲು ಈಯ್ತಾವೆ. ಐದು ತಿಂಗಳಿಗೆ ಒಂದು ಸೂಲು. ಕುರಿ ಈದ ಎರಡು ತಿಂಗಳಿಗೆ ಕುರಿ ಕಟ್ಟೇ ಬಿಡುತ್ತವೆ. ಕುರಿ ಕುಡಿಯುತ್ತಲೇ ಇರುತ್ತವೆ ; ಆ ಅವಧಿಯಲ್ಲಿ ಹೊಟ್ಟೆಯಲ್ಲಿ ಮರಿ ಇರುತ್ತದೆ. ಆರೈಕೆಯಿಂದ ಸರಿಯಾಗಿ ಮೇಯಿಸಿದರೆ ಕುರಿ, ಹೊಟ್ಟೆಯೊಳಗಿನ ಮರಿ ಎರಡೂ ಚೆನ್ನಾಗಿರುತ್ತವೆ.

ಕುರಿ ಈಯಬೇಕಾದ್ರೆ ಗಿಡದ ಬಡ್ಡೆಗೆ ಹೋಗಿ ಈಯುತ್ತವೆ. ಗೂಡಿನಲ್ಲಿದ್ರೂ ಅದು ಒಂದು ಕಡೆಗೆ ಹೋಗಿ ಮರಿ ಹಾಕಿಕೊಂಡಿರುತ್ತದೆ–ಮರಿಯನ್ನು ತುಳಿಯುತ್ತವೆ ಅಂತ. ಮೇಯುವುದಕ್ಕೆ ಹೋದಾಗಲೂ ಅಷ್ಟೆ, ಈಯುವ ಕುರಿ ಹಿಂದಗಡೆ ಇರುತ್ತದೆ. ಇಲ್ಲಾಂದ್ರೆ ಗಿಡದ ಬಡ್ಡೆಯಲ್ಲಿ ಇರುತ್ತದೆ. ಈದ ಮೇಲೆ ಮರಿ ನೋಡಿಕೊಂಡು ಅಲ್ಲೇ ನಿಂತುಕೊಂಡಿರುತ್ತದೆ. ಬೆಳ್ಳಗ್ಗೆ ಹೋಗಿ ಹೊಡೆದುಕೊಂಡು ಬರುತ್ತಾರೆ. ಮರಿ ಬಿಟ್ಟು ಬರುವುದಿಲ್ಲ. ಹಾಲು ಕುಡಿಸುತ್ತಾ ಅಲ್ಲೇ ನಿಂತಿರುತ್ತವೆ ಎಂದು ತಮ್ಮ ಅನುಭವವನ್ನು ದುಗ್ಗಾಣಿಹಟ್ಟಿ ದಾಸಪ್ಪ ವಿವರವಾಗಿ ಹೇಳುತ್ತಾರೆ.

ಗೌರಿಯಿಂದ ದೀಪಾವಳಿಯವರೆಗೆ ಈಯುವ ಮರಿಗಳೆಲ್ಲಾ ಮುಂಗಡೆ ಮರಿ. ಡಿಸೆಂಬರ್‌ನಿಂದ ಜನವರಿ, ಫೆಬ್ರವರಿಯವರೆಗೆ ಹುಟ್ಟಿದ ಕುರಿಗಳು ಹಿಂಗಡೆ ಮರಿ. ಫೆಬ್ರವರಿಯಿಂದಾಚೆಗೆ ಹುಟ್ಟಿಬಂದವು ಕಿರುಮರಿ. ಈಯುವುದು ಎರಡು ಈ ಕಾಲಘಟ್ಟಗಳಲ್ಲಿ.

ಶಿವರಾತ್ರಿಗೆ ಈಯುವುದನ್ನು ಬಹಳ ಅಪೇಕ್ಷೆ ಪಡುತ್ತಾರೆ. ಯಾಕೆಂದರೆ ಬೇಸಿಗೆಯ ಕೂಳೆಯಲ್ಲಿ ಚೆನ್ನಾಗಿ ಮೇವು ಸಿಕ್ಕುತ್ತದೆ. ಮರಿಗೆ ಆತಂಕ ಇರುವುದಿಲ್ಲ. ಮಾರ್‍ನಾಮಿಗೆ ಈಯುವ ಕುರಿ ಮಳೆಗಾಲಕ್ಕೆ ಸಿಕ್ಕಿ, ಸ್ವಾತಿ, ವಿಶಾತಿ ಮಳೆಗೆ ಮೈಯೊಡ್ಡಿ, ಗೆಜ್ಜೆ (ಕೆಚ್ಚಲು) ಬತ್ತುತ್ತವೆ. ಕೂಳೆಯಲ್ಲಿ ಈದ ಕುರಿ ಯಾವತ್ತೂ ಗೆಜ್ಜೆ ಬತ್ತುವುದಿಲ್ಲ. ಕಾರಹಬ್ಬ, ಮುಂಗಾರು ಮಳೆಯವರೆಗೂ ಕೂಳೆ ಮೇಯುತ್ತವೆ. ಅದಕ್ಕೆ ಕೂಳೆ ಮರಿ ಚೆನ್ನಾಗಿರುತ್ತವೆ. ೧೫೦ ಕುರಿಗಳ ಹಿಂಡಿಗೆ ಮೂವತ್ತು ಮುಂಗಡೆ ಮರಿಯಾದ್ರೆ, ಇನ್ನು ಮೂವತ್ತು ಕೂಳೆ ಮರಿಯಾಗುತ್ತವೆ. ಪರಸ್ಥಳಕ್ಕೆ ಹೋದಾಗ ಅಂದರೆ ಅಕ್ಟೋಬರ್–ನವೆಂಬರ್‌ನಲ್ಲಿ ಕಟ್ಟಿದ ಕುರಿ, ಉಗಾದಿ ಮುಂದೆ ಈಯುತ್ತದೆ. ಆಗ ಸ್ವಲ್ಪ ತೊಂದ್ರೆಯಾಗುತ್ತದೆ. ಯಾಕೆಂದರೆ ಆಗ ಮೇವಿರುವುದಿಲ್ಲ.

**ನೊಸೆ ಕಟ್ಟುವುದು:** ಕೆಲವು ಸಾರಿ ಮರಿ ಮಲೆ ಮರೆಯುತ್ತದೆ. ಕುರಿ ಕಾಯುವವರು ಬೆಟ್ಟನ್ನ ಮರಿ ಬಾಯಿಗೆ ಕೊಟ್ಟುಕೊಂಡು ಚೀಪಿಸುತ್ತಾರೆ. ಒಂದೇ ದಿನಕ್ಕೆ ಮರಿ ಕುಡಿಯುವುದನ್ನು ಕಲಿಯುತ್ತದೆ. ಕುರಿ ಪಯಣದಲ್ಲಿ ಅಂಥ ಮರಿಯನ್ನು ಕಂಕುಳಲ್ಲಿ ಇರುಕಿಕೊಂಡು ಹೋಗುತ್ತಾ ಚೀಪಿಸುತ್ತಿರುತ್ತಾರೆ, ಗೊಲ್ಲರ ಕೆಲವು ಒಳಜಾತಿಗಳಲ್ಲಿ ಈಗಲೂ ಕರು ಸತ್ತರೆ ಹಸುವಿನ ಹಾಲನ್ನು ಕರೆಯುವುದೇ ಇಲ್ಲ. ಕೆಚ್ಚಲು ಸೀಯಲಿ ಅಂತ ಬಿಸಿನೀರು ಕಾಯಿಸಿ ಎರಚುತ್ತಾರೆ. ಕೊನೆಗೆ ಹಾಲು ಬತ್ತುತ್ತದೆ. ಕೆಲವು ಸಾರಿ ಈದ ಕುರಿ ಸತ್ತು ಹೋಗಿರುತ್ತದೆ. ಕೆಲವು ಕುರಿಗಳಿಗೆ ಗೆಜ್ಜೆ ಬತ್ತಿರುತ್ತದೆ. ಆಗ ಇನ್ನೊಂದು ಈದ ಕುರಿ ಅಥವಾ ಆಡಿಗೆ ನೊಸೆ ಕಟ್ಟುತ್ತಾರೆ. ಹರಿದ ಬಟ್ಟೆಯನ್ನು ಸಗಣಿ ಹಚ್ಚಿ ಕುರಿ ಅಥವಾ ಆಡಿನ ಮೊಲೆಗೆ ಕಟ್ಟುತ್ತಾರೆ. ದಾರದಲ್ಲಿ ಕಟ್ಟುವುದಿಲ್ಲ. ನೊಸೆ ಪಂಚರ್ ಆದ ಸೈಕಲ್‌ಟ್ಯೂಬ್‌ಗೆ ಪ್ಯಾಚ್ ಹಾಕಿದ ಹಾಗೆ ನೊಸೆ ಕಟ್ಟಿಸಿಕೊಂಡ ಕುರಿ ಅಥವಾ ಆಡು ತನ್ನ ಮರಿಗಳಿಗೆ ನೊಸೆ ಕಟ್ಟದ ಇತರ ಮೊಲೆಗಳನ್ನು ಕುಡಿಸುತ್ತದೆ. ಆ ಮರಿಗಳು ನೊಸೆ ಕಟ್ಟಿದ ಆ ಮೊಲೆಯನ್ನು ಸಗಣಿ ವಾಸನೆಯಿಂದ ಕುಡಿಯುವುದಿಲ್ಲ. ಆ ಮರಿಗಳೆಲ್ಲಾ ಕುಡಿದಾದ ಮೇಲೆ, ತನ್ನ ತಾಯಿ ಇಲ್ಲದ, ಹಾಲಿಲ್ಲದ ಮರಿಗಳನ್ನು ಆ ನೊಸೆ ಕಟ್ಟಿದ ತಾಯಿ ಕುರಿಗೆ ನೊಸೆ ಬಿಚ್ಚಿ ಬಿಡುತ್ತಾರೆ. ಇದನ್ನು ನೊಸೆ ಕಟ್ಟುವುದು ಎನ್ನುತ್ತಾರೆ.

ಮರಿಗಳ ಆರೈಕೆ: ಮರಿಗಳು ಐದು ತಿಂಗಳುಗಳವರೆಗೂ ಹಾಲನ್ನು ಕುಡಿಯುತ್ತಿರುತ್ತವೆ. ಕುರಿ ಈದ ಮೇಲೆ ಕಟ್ಟಿದರೆ ನಾಲ್ಕು ತಿಂಗಳು ಕುಡಿಸುತ್ತವೆ. ಸುಖವಾಗಿ ಮೇಯ್ದರೆ ಒಂದು ಒಂದೂವರೆ ತಿಂಗಳಿಗೆ ಮತ್ತೆ ಕಟ್ಟಿಸಿಕೊಳ್ಳುತ್ತವೆ. ಕಟ್ಟಿಸಿಕೊಂಡ ಕುರಿಗಳಲ್ಲಿ ಗೀಬು ಹಾಲು ಬರುತ್ತದೆ. ಆಗ ಮರಿ ಕುಡಿಯುವುದನ್ನು ಬಿಡುತ್ತವೆ. ಹದಿನೈದು ದಿನ ಕುಡಿದರೆ ಸಾಕು. ಆಮೇಲೆ ಹಾಲು ಕಮ್ಮಿಯಾದರೂ ಪರವಾಗಿಲ್ಲ. ಆಮೇಲೆ ಬೇವಿನ ಸೊಪ್ಪು, ಹುಣಿಸೆ ಸೊಪ್ಪು, ಜಾಲಿ ಸೊಪ್ಪು ಎರಡು ತಿಂಗಳು ಕಟ್ಟುತ್ತಾರೆ. ಹಾಲು ಚೆನ್ನಾಗಿದ್ದು ಬೇವಿನ ಸೊಪ್ಪು ಕಟ್ಟಿದರೆ ಮರಿ ಚೆನ್ನಾಗಿ ಬರುತ್ತವೆ. ಹಾಲು ಕಡಿಮೆಯಾದಾಗ ಜಾಲಿ ಸೊಪ್ಪು ಚೆಂದ. ಜಾಲಿ ಸೊಪ್ಪಿಗೆ ಕಾಯಿಲೆ ಅಂಟಲ್ಲ ಎಂದು ಹೇಳುತ್ತಾರೆ. ಹಾಲು ಕರೆಯುವ ಕುರಿಗೆ ಕಮರದ ಸೊಪ್ಪು ಕಡಿದರೆ ಹಾಲು ಕಡಿಮೆಯಾಗುತ್ತದೆ. ಮರಿಗಳು ತಿಂದರೆ ಏನೂ ಆಗುವುದಿಲ್ಲ. ಮೇಯುವುದಕ್ಕೆ ತಿಂಗಳ ಮರಿ ಬಿಡುತ್ತಾರೆ. ಜನವರಿ ತಿಂಗಳು ಕಳೆದು ಹುಟ್ಟುವ ಮರಿಗಳನ್ನು ತಿಂಗಳಿಗೆ ಮೇವಿಗೆ ಬಿಡುತ್ತಾರೆ. ಮಾರ್ನಾಮಿ ಟೈಮಲ್ಲಿ ಹುಟ್ಟುವ ಮರಿಗಳನ್ನು ಮೂರು ತಿಂಗಳ ನಂತರ ಬಿಡುತ್ತಾರೆ.

ಮರಿಗಳನ್ನ ಚೆನ್ನಾಗಿ ಮೇಯಿಸಿ ಎರಡು ತಿಂಗಳಿಗೆ ಮಾರುತ್ತಾರೆ. ಒಂದು ಎಂಟು ಕೆ.ಜಿ.ಯವರೆಗೂ ಬರುತ್ತದೆ. ಪಟ್ಲಿಗಳನ್ನೆಲ್ಲಾ ಮಾರಿ, ಹೆಣ್ಣು ಮರಿಗಳನ್ನು ಉಳಿಸಿಕೊಳ್ಳುತ್ತಾರೆ. ಒಂದು ಕುರಿ ಹತ್ತು ಹನ್ನೆರಡು ಸೂಲು ಈಯುತ್ತವೆ. ಒಂದು ಕುರಿಯಿಂದ ೪-೫ ವರ್ಷಗಳಲ್ಲಿ ಸಾವಿರ ಕುರಿ ಮಾಡಿದ ಉದಾಹರಣೆ ಇದೆ ಎನ್ನುತ್ತಾರೆ ಮಾಕಮಾರನಹಳ್ಳಿ ನಿಜಲಿಂಗಪ್ಪ.

**ಮುಸುರೆ ಹಾಕುವುದು :**

ಇದೊಂದು ವಿಶಿಷ್ಟ ಪದ್ಧತಿ. ಇದನ್ನು ಈಗಲೂ ಪಾಲಿಸುತ್ತಿರುವವರು ಚಳ್ಳಕೆರೆ ತಾಲೂಕಿನ ಪರಶುರಾಂಪುರ ಹಟ್ಟಿಯ ಕೃಷ್ಣಮೂರ್ತಿ. ಅವರ ಪ್ರಕಾರ ಮರಿಗಳಿಗೆ ಸೊಪ್ಪು ಮುಖ್ಯವಲ್ಲ. ಇಪ್ಪತ್ತು ದಿನ ಹಾಲನ್ನು ಚೆನ್ನಾಗಿ ಕುಡಿದರೆ ಬೇರೆ ಯಾವುದೂ ಬೇಕಾಗಿಲ್ಲ. ಒಂದು ತಿಂಗಳು ಎಂಟು ದಿವಸಗಳ ಮರಿಗಳನ್ನು ಹನ್ನೊಂದು ನೂರುಗಳಿಗೆ ಮಾರಿದ್ದಾರೆ. ಹಾಗಾಗಿ ಹಾಲೇ ಮುಖ್ಯ.

ಹಾಲು ಹೆಚ್ಚಾಗುವುದಕ್ಕೆ ಮುಸುರೆ ಅಂತ ಹಾಕುತ್ತಾರೆ. ಕೊಕ್ಕರಿ ಬಳ್ಳಿ, ಮೇಟುಳ್ಳಿ, ಬಿಳಿ ಕೆಂಜೊಳ, ಕೆಂಪು ಕೆಂಜೋಳ, ಕೆಂಪು, ಬಿಳಿ ಕಣಗಲ, ಬೆಳ್ಳುಉಗಣೆ, ಬಿಳಿ ಗುಲಗಂಜಿ – ಈ ಎಲ್ಲಾ ಸೊಪ್ಪುಗಳನ್ನು ಅರೆದು, ಮಳೆಗಾಲದಲ್ಲಿಯಾದ್ರೆ ಸಜ್ಜೆ ಜೊತೆ, ಬೇಸಿಗೆಯಲ್ಲಿ ಕೆಂಬತ್ತಿ ಅನ್ನದ ಜೊತೆ, ಆಕಳ ಹಾಲು ಅಥವಾ ಮೇಕೆ ಹಾಲು ಬೆರೆಸಿ ಕುರಿಗಳಿಗೆ ಮೇಲೆ ಎರಚುತ್ತಾರೆ. ಒಂದು ನೂರು ಕುರಿಗಳಿಗೆ ಅರ್ಧ ಬಕೆಟ್‌ನಷ್ಟು ಆದ್ರೆ ಸಾಕಾಗುತ್ತದೆ. ಎಲ್ಲಾ ಕುರಿಗಳ ಮೇಲೆ ಚಿಮುಕಿಸಿದರೆ ಸಾಕು. ಈ ಮುಸುರೆ ತನುವು ಕೊಟ್ಟು ಹಾಲು ವೃದ್ಧಿಯಾಗುತ್ತಿದೆ ಎಂದು ತಮ್ಮ ಅನುಭವವನ್ನು ಹಂಚಿಕೊಳ್ಳುತ್ತಾರೆ ಕೃಷ್ಣಮೂರ್ತಿ.

ನೂರು ಕುರಿ ಇದ್ದರೆ ೭೦-೮೦ ಮರಿ ಹಾಕ್ತಾವೆ. ವರ್ಷಕ್ಕೆರಡು ಬಾರಿ ಈದರೆ ಕುರಿಗೂ ಚೆನ್ನಾಗಿರುವುದಿಲ್ಲ. ಮರಿನೂ ಚೆನ್ನಾಗಿ ಬರುವುದಿಲ್ಲ.

❑



## ಹುಲ್ಲು – ನೀರು

ಕುರಿಗಳು ಇಡೀ ವರ್ಷ ಹೊಲದ ಬಾರೆಗಳಲ್ಲಿ, ಕಾಡು–ಗಿಡದಲ್ಲಿ ಮೇಯುತ್ತವೆ. ಕೂಳೆ ಹೊಲದಲ್ಲಿ ಹುರುಳಿಕಾಯಿ, ಅವರೆ ಕಾಯಿ, ತೊಗರಿ ಕಾಯಿ, ಅಲಸಂಡೆ ಕಾಯಿ ತಿನ್ನುತ್ತವೆ. ಹೊಲದ ಬಾರೆಯಲ್ಲಿ ಶಿವರಾತ್ರಿಯವರೆಗೂ ಇಂಥ ಕಾಯಿಗಳನ್ನು ಹುಡುಕುತ್ತವೆ. ಹೊಲ ಹಾಳಾದ ಮೇಲೆ ಮೊದಲು ಇಂಥ ಕಾಯಿಗಳಿಗೆ ಹುಡುಕುತ್ತವೆ. ಆಮೇಲೆ ಹುಲ್ಲು, ತರಗು, ನುಗ್ಗಿಗೆ ಹೋಗುತ್ತವೆ. ಶಿವರಾತ್ರಿ ಹಬ್ಬ ಆದ ಮೇಲೆ ನುಗ್ಗಿಗೆ ಹೋಗುತ್ತವೆ. ತೊಗರಿ ನುಗ್ಗು, ಅಲಸಂಡೆ ನುಗ್ಗು, ಅವರೆ ನುಗ್ಗುಗಳನ್ನು ಹುಡುಕುತ್ತಾ ತಿನ್ನುತ್ತವೆ. ಮುಂಗಾರು ಮಳೆ ಬಿದ್ದಾಗ ಹುರುಳಿ, ರಾಗಿ, ಕಾಳುಗಳು ಚಿಗಿತು ಮೊಳಕೆ ಹೊಡೆದಿರುತ್ತವೆ. ಆ ಮೊಳಕೆ ಹುಲ್ಲುಗಳನ್ನು ಅಪೇಕ್ಷೆ ಪಡುತ್ತವೆ. ಬೇಸಿಗೆ ಕಾಲದಲ್ಲಿ ಅಡಿಕೆ ಸೊಪ್ಪು ಚಿಗತಿರುತ್ತದೆ. ಹಳ್ಳದ ಸರದಲ್ಲಿ ಸುಂಟಿ ಮೊಳಕೆ ಬಾಯಿಗೆ ಸಿಗುತ್ತದೆ. ಶಿವರಾತ್ರಿ ಹಿಂದೆ ಮುಂದೆ ಮಳೆ ಬೀಳದೆ ಹೋದ್ರೆ ಮುಂಗಾರು ಮಳೆಯವರೆಗೂ ರಾಗಿ ಗರಿ ಸಿಗುತ್ತದೆ. ಶಿವರಾತ್ರಿ ಸುಮಾರಿನಲ್ಲಿ ಮಳೆ ಬಂದ್ರೆ ಕುರಿಯೋರೆಲ್ಲ "ಮಳೆ ಬಂದು ಕುರಿ ಬಾಯಿಗೆ ಮಣ್ಣಾಕ್ತು" ಎನ್ನುವ ಮಾತನ್ನು ಎಲ್ಲೆಡೆಯಲ್ಲೂ ಆಡುತ್ತಿರುತ್ತಾರೆ. ಅಕಾಲಿಕ ಮಳೆ ಬಂದ್ರೆ ಅವರೆ ನುಗ್ಗು, ಅಲಸಂಡೆ ನುಗ್ಗು ಎಲ್ಲಾ ಮಳೆಗೆ ಸಿಕ್ಕು ಹಾಳಾಗುತ್ತವೆ.

ಇನ್ನು ಕಾಡಿನಲ್ಲಿ–ಗಿಡದಲ್ಲಿ ತಮ್ಮದೇ ವೈಶಿಷ್ಟ್ಯತೆಯನ್ನು ಹೊಂದಿರುವ ನೂರಾರು ಬಗೆಯ ಹುಲ್ಲುಗಳು ದಂಡಿಯಾಗಿ ದೊರಕುತ್ತವೆ. ಕಬ್ಬಿನ ಜಲ್ಲೆಯಂಗೆ ಘಮಘಮ ನಾರುವ, ಬಿಳಿ ಜ್ವಾಳದ ಹುಲ್ಲಿನ ರುಚಿ ಹೊಂದಿರುವ ಕರಿ ಮಸಿಯ ಹುಲ್ಲು ಮೊಲ, ಕುರಿ, ದನಿಗೆ ಅಪರೂಪದ ಹುಲ್ಲು. ಸಣ್ಣಗೆ ತೆನೆ ಹೊಡೆದಿರುವ ಪುಟ್ಟಂಪುರ್ಲೆ ಕುರಿ, ದನಿಗೆ ಇಷ್ಟ, ಕುಚ್ಚು, ಕುಚ್ಚಾಗಿದ್ದು ಎಲ್ಲಕ್ಕಿಂತ ರುಚಿಯಾದದ್ದು–ಷಡೇದ ಗರಿ ಹುಲ್ಲು. ತೆಳುವಾದ ಕರ್ರನೆಯ ತೆನೆಯ ಗಂಡಲ್ಲು, ಒಂದೊಂದ ಗೆಣ್ಣಿಗೆ ಒಂದೊಂಥರ ಇರುವ ಬಳಗರುಕೆ ಹುಲ್ಲು, ಅಂಚಿ ಹುಲ್ಲು, ಕಾರಂಚಿ ಹುಲ್ಲು ಅಕ್ಕಿ ಹರಿವೆ ಹುಲ್ಲು, ತಪ್ರೆ ಹುಲ್ಲು, ಅಕ್ಕಿ ಹುಲ್ಲು ಇವೆಲ್ಲಾ ಆಡು–ಕುರಿಗಳಿಗೆ ಪರಮಾನ್ನ. ಬೇಸಿಗೆಯಲ್ಲಿ ಗೇಯ್ಮೆ ಮಾಡಿ ಬಿಟ್ಟ ಹೊಲದಲ್ಲಿ ಯಮದಪರೆ ಹುಲ್ಲು ಹುಲುಸಾಗಿರುತ್ತದೆ. ಸಿಲ್‌ಗಲ್ಡ, ಹೆಣ್‌ಕಲ್ಡ, ಗಂಡಕಲ್ಡ, ಕರಿಕಡ್ಡಿ ಕಲ್ಡ, ಕಾತರಿಕೆ, ಸಾಲೆ ಬೋಟು, ಕಡಿಮೆಯಾಗುತ್ತಾ ಬಂದಾಗ ಬಾದೆ ಹುಲ್ಲನ್ನು ಅರ್ಧ ಹೊಟ್ಟೆಗೆ ತಿನ್ನುತ್ತವೆ. ಮಳೆಗಾಲದಲ್ಲಿ ಚಿಗುರು ಚಿಗುರು ತಿನ್ನುತ್ತವೆ. ಬರಗಾಲದಲ್ಲಿ ಪೂರ್ತಿ ಅದನ್ನೇ ತಿನ್ನುತ್ತವೆ. ಅದನ್ನೇ ತಿಂದರೆ ಅದು ಕಳ್ಳಿಗೆ ಜಾಸ್ತಿ ಕಾರ ಆಗಿ ಕುರಿ ಒಣಗಿಬಿಡುತ್ತವೆ. "ಗುಡ್ಡದಲ್ಲಿನ ಬಾದೆ ಸ್ವಲ್ಪ ರಕ್ತ ಹಿಂಗಿಸಿ ಬಿಡುತ್ತದೆ. ಲಂಟಾನ ಸೊಪ್ಪು ತಿಂದರೆ ಅರ್ಧ ಬಲ ಕರಗಿ ಹೋಗ್ತಾವೆ. ಅದೂ ರೋಜಾದ ಹೂವು ವಿಷಕಂಠಕ. ಅದನ್ನು ತಿಂದು ಚೌಳುನೀರು ಕುಡಿದರೆ, ರೂಪಾಯಿಗೆ ನಾಲ್ಕಾಣೆ ಭಾಗ ಕಾಯಿಲೆ ಅಂಟಿಬಿಡುತ್ತೆ" ಎನ್ನುವ ಬಾಲದೇವರ ಹಟ್ಟಿ ಬಡಜ್ಜ ಪ್ರತಿ ಇಂಚಿನ ನೆಲದಲ್ಲಿ ಒಂದೊಂದು ಹುಲ್ಲನ್ನು ಗುರುತಿಸುತ್ತಾ ಹೋಗುತ್ತಾರೆ.

ಇದೇ ರೀತಿ ಹುಲ್ಲುಗಳಂತೆ ಹಲುಬುಗಳು ನೂರಾರಿವೆ. ಸಂಜೆನ ಹಲುಬು, ಅರಿಶಿನಗುತ್ತಿ ಹಲಬು, ಬೋರ್‌ಬುತ್ತಿನ ಹಲಬು, ಸೇವಂತಿ ಹೂ ಹಲುಬು, ಕರಿ ಹಲಬು, ಗಂಟಿನ ಹಲಬು, ಕಡೆಗಾಲಿನ ಗುತ್ತಿ, ಬಿಳಿ ಹೂ ಹಲಬು, ಹೆಣ್ಣಲಬು, ನೆಗ್ಗಿ ಹಲುಬು, ಕರಿ ಹಲುಬು, ಗೋಣಿ ಹಲಬು, ಮುಳ್ಳು ಗಡ್ಡೆ ಹಲಬು–ಇವುಗಳೆಲ್ಲವೂ ತಮ್ಮದೇ ವಿಶಿಷ್ಟತೆ ಕಾಪಾಡಿಕೊಂಡು ಬಂದ ಹಲಬುಗಳಾಗಿವೆ. ಚೌಳ ನೀರು ಕುಡ್ದು, ಮಸಿಕಡ್ಡಿ ಹುಲ್ಲು ತಿಂದರೆ ಬೆಣ್ಣಕಟ್ಟಂಗೆ ಬೆಳೆತಾವೆ ಎನ್ನುವುದು ದುಗ್ಗಾಣಿ ಹಟ್ಟಿ ಕುಳಪ್ಪನ ಕುರಿಕಾಯುವ ಜ್ಞಾನ. ಬಾಡತ್ತಿದರೆ ಗಂಟಿನಲುಬು ಚೆನ್ನಾಗಿ ತಿನ್ನುತ್ತವೆ. ಕೆಲವು ಕಡೆ ಹುಲ್ಲನ್ನು ಕಡಿದು ಅಗಿದರೆ ಸೀಪುರು ಇರುತ್ತದೆ. ಕೆಲವು ಕಡೆ ಇರುವುದಿಲ್ಲ. ವಡೆ ಹೊಡೆಯುವುದಕ್ಕೆ ಮುನ್ನ ತಿಂದರೆ ಸತ್ವಮಾನ ಇರುತ್ತದೆ ಎನ್ನುತ್ತಾರೆ ಕುರಿಕಾಯುವವರು ಗೊಲ್ಲ ಮಾಯೆಯಂತ ಮಾಯೆಯಿಲ್ಲ. ನೆಗ್ಗಿ ಮುಳ್ಳಿನಂತ ಆಯಿಲ್ಲ–ಎನ್ನುತ್ತಾರೆ. ನೆಗ್ಗಿ ಮುಳ್ಳು ಒಕ್ಕೊಂಡರೆ ದನಗಳಿಗೆ ಬಹಳ ಅಪಾಯಕಾರಿ. ನೆಲಗಾಡಲ್ಲಿ ಹುಲ್ಲುಗಳು ಮಿದುವಾಗಿರುತ್ತವೆ. ಬೆಟ್ಟದ ಕಾಡಲ್ಲಿ ಹಾಲುಬೋರು ಕಡಿಮೆ. ಅಷ್ಟು ರುಚಿ ಬರುವುದಿಲ್ಲ, ಸಮತಳವಾದ ನೆಲಗಾಡಲ್ಲಿನ ಮೇವು ರುಚಿಯಾಗಿರುತ್ತದೆ.

ಸುಂಟಿ ಹುಲ್ಲು ಎಲ್ಲದಕ್ಕಿಂತ ಒಳ್ಳೆಯದು. ಒಂದು ವರ್ಷವೆಲ್ಲಾ ತುಂಬಿರದ ಕೆರೆಯಲ್ಲಿನ ಸುಂಟಿ ತುಂಬಾ ಕೊಬ್ಬಾಗಿ ಬರುತ್ತದೆ. ಕೆರೆ ತುಂಬಾ ನೀರಿದ್ದಾಗ ಆ ಸುಂಟಿ ತಿಂದರೆ ಕಾರ್ಲಾಗುತ್ತದೆ. ಈರಿ ಹುಣ್ಣಾಗುತ್ತದೆ. ದೇಶಕ್ಕೆ ಹೋದಾಗ ಕುರಿಗಳಿಗೆ ಸ್ಯಾಲೆ ಬೋಟು ಜಾಸ್ತಿ

ಸಿಗುತ್ತದೆ. ಅದು ಜಾಸ್ತಿ ತಿಂದರೆ ನೊರೆ ಬಂದು ಹೊಟ್ಟೆ ಉಬ್ಬರ ಬರುತ್ತದೆ. ಅದಕ್ಕೆ ತಕ್ಷಣ ೫-೧೦ ಎಂ.ಎಲ್. ಕಡಲೆಕಾಯಿ ಎಣ್ಣೇ ಹೊಡೆದರೆ ತಕ್ಷಣ ಇಳಿಯುತ್ತೆ ಎನ್ನುವ ಅನುಭವ ಮ್ಯಾಕಮಾರನಹಳ್ಳಿ ನಿಜಲಿಂಗಪ್ಪನದು.

ದಿನಗಟ್ಟಲೆ ಮಳೆ ಹೊಯ್ದಾಗ, ಮೇವಿಲ್ಲದಾಗ ರೋಜಾ ಸೊಪ್ಪನ್ನು ಮುತ್ತರಿಕೊಂಡು ತಿನ್ನುತ್ತವೆ. ಅದು ಕಾರ ಜಾಸ್ತಿ. ಮಳೇಲಿ ನೆಂದಾಗ ವಡಿಕೆ ಚೆನ್ನಾಗಿ ಮೇಯುತ್ತವೆ. ಇಡೀ ದಿನ ಮಳೆ ಬಂದರೆ ಬೇವಿನ ಸೊಪ್ಪು ಹೊಂಗೆ ಸೊಪ್ಪು, ಬಾದೆ ಹುಲ್ಲು ತಿನ್ನುತ್ತವೆ. ಜಡಿಯಲ್ಲಿಯೂ ಹಲುಬು ತಿನ್ನುತ್ತವೆ. ಎಂಥ ಹುಯ್ಯುವ ಮಳೆಯಲ್ಲೂ ಕುರಿಹಟ್ಟಿಯಿಂದ ಈಚೆಗೆ ಬಿಟ್ಟು ಮೇಯಿಸಲೇಬೇಕು. ಬಳ್ಳಾರದ ಕಾಡಿನಲ್ಲಿ ದಟ್ಟವಾಗಿರುವ ಕಮರದ ಮರಗಳು ಕುರಿ ಆಡಿಗೆ ಒಳ್ಳೆಯ ಸೊಪ್ಪನ್ನು ಒದಗಿಸುತ್ತವೆ. ಮಳೆ ಬಂದು ಪೂರ್ತಿ ತ್ಯಾವವಾದಾಗ ಬಂದ್ರೆ ಸೊಪ್ಪು ತಿನ್ನುತ್ತವೆ. ರೋಜಾದ ಕಾಯಿ ತಿನ್ನುತ್ತವೆ. ದ್ವಾದರೆ ಸೊಪ್ಪು, ಉದೇದ ಸೊಪ್ಪು ಎಲ್ಲವನ್ನು ಸ್ವಲ್ಪ ಸ್ವಲ್ಪ ತಿನ್ನುತ್ತವೆ.

ಬರಗಾಲ ಬಂದಾಗ ಪರಸ್ಥಳ ಮಾಡುತ್ತಾರೆ. ಹೀಗೆಯೆ ದೇಶಕ್ಕೆ ಹೋಗುವುದು ರೂಢಿಯಾಗಿರುವುದು. ಕಳ್ಳೆ ಬಳ್ಳಿ, ತಂಗಡಿ ಸೊಪ್ಪು ತಿಂದಾದರೂ ಯಟ್ಟೆ ಕಾಲದಲ್ಲಿ ಜೀವನ ಹೊರೆಯುತ್ತಾವೆ. ನಮ್ಮ ಬಾಲದೇವರಹಟ್ಟಿ ಬಡಜ್ಜನವರ ಬರಗಾಲದ ನೆನಪು ಕೂಹಲಕಾರಿಯಾಗಿದೆ : "ಕಂಟ್ರಾಲ ಬರ ಅಂತ ಬಂತು; ಇಡೀ ಸೀಮೆಗೆ ಬಂತು. ನೀವೆಲ್ಲಾ ಕೆಂಪು ಜೋಳದ ಗೊಟ್ಟನ್ನು ನಿಮ್ಮ ಹುಟ್ಟುವಳಿಯಲ್ಲಿ ನೋಡಿದ್ದೀರ. ಆ ಕೆಂಪ ಜೋಳದ ಯಟ್ಟೆಯಲ್ಲಿ ಎಡಬಲ ನೀರಿತ್ತು ; ಪರ್ವಾಗಿಲ್ಲ. ಅದರಾಚೆನದು ಕಂಟ್ರಾಲ ಗೊಟ್ಟು, ಬಾದೆ, ಕಲ್ಡ, ಗಂಡ ಕಲ್ಡ ಮೆಯ್ಸಿ ಉಳಿಸಿದೀವಿ. ಆ ಗೊಟ್ಟನ್ಲಿ ಈಚಲು ಗರಿಗೆ ಮೂರು ದಿವಸ ಉಪ್ಪು ನೀರನ್ನು ಹಾಕಿ, ಆಮೇಲೆ ತಿನ್ನಸಿರೀವಿ. ಹಂಗೆ ಆ ಬರದಲ್ಲಿ ಆಡು-ಕುರಿ ದನಕರುಗಳನ್ನೆಲ್ಲಾ ಉಳಿಸಿಕೊಂಡ್ವಿ, ಇತ್ತೀಚಿನ ಗೊಟ್ಟುಗಳಲ್ಲಿ ಹೊಳೆದಡಕ್ಕೆ ಹೋಗಿ ಕುರಿ ಮೇಕೆ ಉಳಿಸ್ಕೊಂಡು ಬಂದೀಚೆಗೆ ಅಲ್ಪ ಸಲ್ಪ ಮಳೆಯಾಗಿ ಅದಕ್ಕೆ ಔಷದಿ ಮಾತ್ರೆ ಹಾಕ್ಕೊಂಡು ಉಳಿಸಿಕೊಂಡು ಬಂದಿದೀವಿ."

### ನೀರು ತೋರಿಸುವುದು

ಕುರಿ ಎಬ್ಬಿಸೋರಿಗೆ ಯಾವಕಡೆಗೆ ನೀರಿಗೆ ಹೋಗಬೇಕು ಅಂತ ಗೊತ್ತಿರುತ್ತದೆ ಮದ್ಯಾಹ್ನ ಒಂದು ಗಂಟೆ ಸುಮಾರಿಗೆ ಹಳ್ಳಕ್ಕೆ ನೀರಿಗೆ ಹೋಗುತ್ತವೆ. ಅಲ್ಲೇ ಒಂದು ಗಂಟೆ ಕುರೀನ ಕೆದರುಸುತ್ತಾರೆ. ಆಮೇಲೆ ತಿರುಗಿ ಕುರೀನ ಹಿಂದಕ್ಕೆ ಎಸೆಯುತ್ತಾರೆ. ಇನ್ನೊಂದು ಸಲ ಕುಡಿಸುತ್ತಾರೆ. ಕುರಿಗೆ ಚೌಳುನೀರು ಒಳ್ಳೆಯದು. ಹಾಗೆ ಬಿಟ್ಟಾಗ ಚೌಳನ್ನು ಒಂದು ಗಂಟೆ ನೆಕ್ಕುತ್ತಾವೆ.

ಬೇಸಿಗೆಯಲ್ಲಿ ಬಿಟ್ಟು ಇನ್ನುಳಿದ ಕಾಲದಲ್ಲಿ ಕುರಿಗಳಿಗೆ ಒಂದೇ ಸಾರಿ ನೀರು ತೋರಿಸುವುದು. ಆದರೆ ಮಾರ್ಚಿಯಿಂದಾಚೆಗೆ, ಅಂದ್ರೆ ಬಿಸಿಲು ಬಲಿಯುತ್ತದಲ್ಲ ಆಗ ಮಧ್ಯಾಹ್ನ ಹನ್ನೆರಡಕ್ಕೇ

ಒನ್ನೀರು ಸಾಯಂಕಾಲ ಒನ್ನೀರು. ಆ ಕಾಲದಲ್ಲಿ ಕುರಿಗಳು ಒಣಕಡ್ಡಿ ಕಡಿಯುತ್ತವೆ. ಆಗ ಎರಡು ಬಾರಿ ನೀರನ್ನು ಕುಡಿಸುತ್ತಾರೆ.


ಮಳೆಯಿಂದ ಹರಿದುಕೊಂಡು ಬಂದ ನೀರು ಶ್ರೇಷ್ಠ. ಬಸಿಯುವ ನೀರು, ಜೋಪಿನ ನೀರು ಕುಡಿಸುವುದಿಲ್ಲ. ನಿಚ್ಚಳವಾದ, ವೈನಾದ ನೀರು ಬೇಕು. ಕಟ್ಟೆಯಲ್ಲಿ ನೀರನ್ನು ಕುಡಿಸುತ್ತಾರೆ. ಆದರೆ ಕಟ್ಟೆ ಹಿಂದಿನ ಜೋಪಿನಲ್ಲಿ ಕುಡಿಸುವುದಿಲ್ಲ. ಕೆಂಪ ನೆಲದಲ್ಲಿ ನೀರನ್ನು ಹಲ್ಕಚ್ಚಿಕೊಂಡು ಬಾಯಾರಿಕೆಗೆ ಕುಡಿಯುತ್ತವೆ. ಬಿಳಿ ನೆಲದ ನೀರು ಅಂದ್ರೆ ಪೂರ್ತಿ ಅದು ಜೋಪಿನ ನೀರು, ಮರಿ, ಕುರಿ ಎರಡೂ ಕುಡಿದು ಅನಾರೋಗ್ಯಕ್ಕೆ ಈಡಾಗುತ್ತವೆ. ನೀರಿನಲ್ಲಿ ಬೆಳೆಯುವ ಜಂಡು, ಕಾಯಿ ಜಂಡು, ಬಳ್ಳಿಗನ್ನೆ, ಊಸನರಿಗಳನ್ನು ಕುರಿಗಳು ಮೇಯ್ದರೆ ಗದ್ದಕ್ಕೇ ನೀರನ್ನು ಇಳಿಸುತ್ತವೆ. ಆದ್ದರಿಂದ ಕೆರೆ, ಕಟ್ಟೆಗಳ ಅಂಗಳಗಳಲ್ಲಿ ಕುರಿಗಳನ್ನು ಮೇಯಿಸುವುದಿಲ್ಲ.

**ಮೈಯ ತೊಳೆಯುವುದು :**

ಕುರಿಗಳ ಮೈಯನ್ನು, ತಿಂಗಳಿಗೆ, ಎರಡು ತಿಂಗಳಿಗೆ ತೊಳೆಯುತ್ತಾರೆ. ನೀರು ಸಿಗದಿದ್ದರೆ ಎರಡುವರೆ ತಿಂಗಳಿಗೆ ತೊಳೆಯುತ್ತಾರೆ. ಕುರಿಗೆ ಹದಿನೈದು ದಿವಸ, ತಿಂಗಳಿಗೆ ಮೈ ತೊಳೆದ್ರೆ ಜಳ್ಳು ಬಂದು ಬಿಡುತ್ತವೆ ಎಂಬ ನಂಬಿಕೆಯಿದೆ. ನೀರಗಾಕಿ, ನೀರಗಾಕಿ, ಮೈ ಬಿಗಿ ಬರುವುದಿಲ್ಲ. ದಿನಗಟ್ಟಲೆ ಮಳೆ ಹೊಯ್ದಾಗ ಕುರಿ ಮೆತ್ತಗಾಗುತ್ತವೆ.

ಹಿರಿಯೂರು ತಾಲೂಕಿನ ರಂಗೇನಹಳ್ಳಿ ಪ್ರಕಾಶ್ ಕುರಿ ಮೇಯಿಸುವುದರಲ್ಲಿ ತಮ್ಮ ಅನುಭವ ಹೀಗೆ ಹಂಚಿಕೊಳ್ಳುತ್ತಾರೆ. ಆ ಕಡೆ ಶೇಂಗಾ, ಸೂರ್ಯಕಾಂತಿ, ಜೋಳಗಳನ್ನು ಬೆಳ್ದು ಜಮೀನಿಗೆ ಹಾಕುತ್ತಾರೆ. ಶೇಂಗ ಕಿತ್ತ ಮೇಲೆ ಬಿದ್ದಿರೋ ಕಡ್ಲೆಕಾಯಿ, ತರುಗ ಎಲ್ಲಾ ತಿನ್ನುತ್ತವೆ. ಸೂರ್ಯಕಾಂತಿಯಲ್ಲಿ ಒಣಗಿದ ತರಗು ತಿನ್ನುತ್ತವೆ. ಕಡ್ಡಿ ತಿನ್ನುವುದಿಲ್ಲ. ಶೇಂಗಾವನ್ನು ದೀವಣಿಗೆಯಲ್ಲಿ ಕುಯ್ಯುತ್ತಾರೆ. ದನಕರು-ಕುರಿ-ಆಡುಗಳಿಗೆ ಶೇಂಗಾ ಬಳ್ಳಿ ಚೆನ್ನಾಗಿರುತ್ತದೆ. ಮರಿ ಕುರಿಗೆ ಶೇಂಗಾ ಸೊಪ್ಪನ್ನು ಹಾಕುತ್ತಾರೆ. ಮಳೆಗಾಲದಲ್ಲಿ ಸೆಡೆ ಸೊಪ್ಪನ್ನು ಕಟ್ಟುತ್ತಾರೆ.

□



## ದೇಶಕ್ಕೆ ಹೋದಾಗ....

ಬಹು ಹಿಂದೆ ಕುರಿಗಳ ಸಂಖ್ಯೆ ಕಡಿಮೆ ಇತ್ತು. ಅಲ್ಲದೆ ಮಳೆ-ಬೆಳೆ ಚೆನ್ನಾಗಿ ನಡೆಯುತ್ತಿತ್ತು. ಬರುಬರುತ್ತಾ ಹಲವು ಕಾರಣಗಳಿಂದ ಕುರಿ ಜಾಸ್ತಿ ಇದ್ದವರು ಪರಸ್ಥಳಕ್ಕೆ ಕುರಿ ಮೇಯಿಸುವುದಕ್ಕೆ ಹೋಗಲು ಶುರುಮಾಡಿದರು. ಮೊದಲು ಪಕ್ಕದೂರಿಗೆ ಹೋಗುವುದರಿಂದ ಆರಂಭಿಸಿ ನಂತರ ಮುಂದಿನ ಊರಿಗೆ ಮುಂದಿನ ವರ್ಷಕ್ಕೆ ಹೋಗಿದ್ದಾರೆ. ಹೀಗೆ ಹೋಗುತ್ತಾ ಕೊನೆಗೆ ಚಳ್ಳಕೆರೆ, ಹಿರಿಯೂರು, ಶಿರಾ ಕಡೆಯ ಕುರಿಗಳು ಇಡೀ ಕರ್ನಾಟಕದಲ್ಲಿ ಅತ್ಯಂತ ಹೆಚ್ಚಿನ ಸಂಖ್ಯೆಗೆ ಹೆಚ್ಚಿಕೊಂಡವು. ಆ ಸಂಖ್ಯೆಗೆ ತಕ್ಕನಾದ ಕಾಡು ಗಿಡ-ಇಲ್ಲದಿದ್ದ ಪ್ರಯುಕ್ತ ಆ ಪ್ರದೇಶದಿಂದ ಮೈಸೂರು, ಕೆ.ಆರ್. ನಗರ, ಪಿರಿಯಾಪಟ್ಟಣ, ಹುಣಸೂರು ಮುಂತಾದ ಕಾವೇರಿ ನದಿಯ ಕಣಿವೆ ಪ್ರದೇಶದ ಗದ್ದೆ ಬಯಲಿಗೆ ಹೋಗಲು ಶುರುಮಾಡಿದರು. ಈ ಪ್ರದೇಶದಲ್ಲಿ ಆ ಬೆಳೆ ಪ್ರದೇಶಕ್ಕೆ ತಕ್ಕನಾದ ಆಡು-ಕುರಿ ಇಲ್ಲದಿರುವ ಕಾರಣಕ್ಕೆ ಮತ್ತು ಈ ಕುರಿಗಳಿಂದ ಮಂದೆ ಹಾಕಿಸಿಕೊಳ್ಳುವುದರ ಮೂಲಕ ಭೂಮಿ ಫಲವತ್ತಾಗುವುದರಿಂದ ಅವರು ಇವರನ್ನು ಪ್ರೋತ್ಸಾಹಿಸತೊಡಗಿದರು. ಅಲ್ಲದೆ ಮಲೆನಾಡಿನಲ್ಲಿ ಆಡು-ಕುರಿ ಸಾಕಾಣಿಕೆ ಮಳೆಯ ಅಬ್ಬರಕ್ಕೆ ಸಾಧ್ಯವಿಲ್ಲ. ಆದರೆ ಮಳೆಗಾಲದ ನಂತರ, ಮುಂದೆ ಮುಂಗಾರಿನವರೆಗೆ ಭತ್ತದ ಗದ್ದೆಯಲ್ಲಿ ಹೇರಳವಾಗಿ

ಹುಲ್ಲು ದೊರಕುತ್ತದೆ. ಅಲ್ಲದೆ ಬಯಲು ಸೀಮೆಯ ಬೇಸಿಗೆಯಲ್ಲಿ ಕುರಿಗಳನ್ನು ಮೇಯಿಸುವುದಕ್ಕೆ ಹುಲ್ಲು-ನೀರು ಎರಡೂ ಇರುವುದಿಲ್ಲ. ಹಾಗೂ ಪರಸ್ಥಳಕ್ಕೆ ಹುಲ್ಲಿಗೆ, ನೀರಿಗೆ ಹೋಗುವುದನ್ನು ದೇಶಕ್ಕೆ ಹೋಗುವುದು ಎಂದು ಕರೆಯುತ್ತಾರೆ.

ದೀವಣಿಗೆಯಿಂದ ಸಂಕ್ರಾಂತಿಯವರೆಗೆ ಕುರಿಗಳು ದೇಶಕ್ಕೆ ಹೋಗುವುದಕ್ಕೆ ಪ್ರಾರಂಭಿಸುತ್ತವೆ. ದೊಡ್ಡ ದೊಡ್ಡ ತಾಟಿನವರು ಮುಂಚೆಯೇ ಊರನ್ನು ಬಿಟ್ಟರೆ, ಕಡಿಮೆ ಸಂಖ್ಯೆಯ ಕುರಿಗಳವರು ಊರಿನಲ್ಲಿಯೇ ಕೂಳೆ ಮೇಯಿಸಿಕೊಂಡು ಸಂಕ್ರಾಂತಿ ಹಬ್ಬದ ಸುಮಾರಿಗೆ ಊರು ಬಿಡುತ್ತಾರೆ. ದೇಶಕ್ಕೆ ಹೋಗುವಾಗ ಬುಕ್ಕಾಪಟ್ಟಣದ ಹತ್ತಿರದ ಕಾಡಿನಲ್ಲಿರುವ ಭೂತಪ್ಪನಿಗೆ ಮರಿ ಕಡಿದು, ಮಂಗಳಾರತಿ ಮಾಡಿಸಿ ಮುಂದಕ್ಕೆ ಹೋಗುತ್ತಾರೆ. ಮತ್ತೆ ದೇಶದಿಂದ ವಾಪಸ್ಸು ಬರುವಾಗ ಭೂತಪ್ಪನಿಗೆ ಮರಿ ಕಡಿದು ಮಂಗಳಾರತಿ ಮಾಡಿಸುತ್ತಾರೆ.

ಹೀಗೆ ಹೋಗುತ್ತಾ, ದಿನಕ್ಕೆ ಸರಾಸರಿ ಎಂಟು ಕಿ.ಮೀ ದೂರ ಕುರಿ ಪಯಣ ನಡೆಯುತ್ತೆ. ಹೋಗಬೇಕಾದರೆ ಮೇಯಿಸೋದು ಮುಖ್ಯವಲ್ಲ. ಹೋಗುತ್ತಿರುವ ದಾರಿಯಲ್ಲಿ ಒಳ್ಳೆಯ ಜಾಗದಲ್ಲಿ ಅರಗು ಮಾಡಿ ನಿಮಿಷ ಬಿಟ್ಟರೆ ಗಡಗಡ ಮೇಯ್ತಾವೆ. ಹಿರಿಯೂರಿನಿಂದ ಹುಣಸೂರಿಗೆ ಹೋಗೋದಿಕ್ಕೆ ಒಂದು ತಿಂಗಳು ಬೇಕು. ಹಿರಿಯೂರು, ಚಿಕ್ಕಬ್ಯಾಲದಕೆರೆ, ಹುಳಿಯಾರು, ಬಾಣಾವರ, ಬೇಲೂರು, ಹಳೇಬೀಡು, ಹಾಸನ – ಹೀಗೆ ಪಯಣ ಮಾಡಿ ಹಾಸನದಲ್ಲಿ ಒಂದು ತಿಂಗಳು ಆಡಿಸಿ, ಸುಧಾರಿಸಿಕೊಂಡು ಹುಣಸೂರನ್ನು ತಲುಪುತ್ತಾರೆ.

ಕನಿಷ್ಟ ಅಂದರೆ ಒಂದು ಸಾವಿರ ಕುರಿಯಾದರೆ, ಅದಕ್ಕೆ ತಕ್ಕ ಆಳುಗಳು ಸಿಗುತ್ತಾರೆ. ಅದಕ್ಕಿಂತಲೂ ಕಡಿಮೆ ಇದ್ದರೆ, ಅಣ್ಣ ತಮ್ಮಂದಿರು, ಭಾವ ಮೈದುನರು ಒಟ್ಟಿಗೆ ಹೊಡಕೊಂಡು ಹೋಗುತ್ತಾರೆ. ಕುರಿ ಮಂದೆಯ ನಾಲ್ಕು ಮೂಲೆ ಚೌಕಟ್ಟನಲ್ಲಿ ನಾಲ್ಕು ಗೂಡು ಇಟ್ಟಿರುತ್ತಾರೆ. ಆ ಗೂಡೆಗಳಲ್ಲಿ ಎಲ್ಲಾ ತರಹದ ಸಾಮಾನುಗಳು ಇರ್ತಾವೆ. ಇನ್ನೂರು ಕುರಿ ಅಂದ್ರೆ ಒಂದು ಚರಿಗೆ. ಅದು ಒಂದು ತಾಟು, ಅಂಥ ಹಲವಾರು ತಾಟುಗಳಿರುತ್ತವೆ. ಅವರವರ ತಾಟು ಅವರವರು ಮೇಯಿಸ್ಕೊಂಡು ಬರುತ್ತಾರೆ. ಒಂದು ತಾಟಿನ ಕುರಿಗಳ ಬೆವರು ಇನ್ನೊಂದು ತಾಟಿನವಕ್ಕೆ ಆಗುವುದಿಲ್ಲ. ಬೆಳಿಗ್ಗೆಯೆದ್ದು ಒಂದು ಮೂಲೆಗೆ ಹೊಡೆದರೆ ಒಂದು ಪಾಲು ಒಂದು ದಿಕ್ಕಿಗೆ ಹೋಗಿ ಒಂದು ಮೂಲೆಗೆ ಹೋಗಿ ನಿಂತುಕೊಳ್ಳುತ್ತವೆ. ಅಲ್ಲೊಂದು ಇಲ್ಲೊಂದು ಇದ್ದವು ಓಡಿಬಂದು ತಾಟಿಗೆ ಸೇರಿಕೊಳ್ಳುತ್ತವೆ.

ನಾಲ್ಕು ಗೂಡಿಗೆ ಒಂದು ರಾತ್ರಿಗೆ ಮೂನ್ನೂರು ರೂಪಾಯಿ, ಒಂದು ಚೀಲ ಅಕ್ಕಿ ಕೊಡ್ತಾರೆ. ಊರು ಮಾಡುವ ಹೆಗ್ಗಿ ನಾಲ್ಕು ಗೂಡುಗಳನ್ನು ಸಲಹಬೇಕು. ಅಲ್ಲಿಂದ ಮನೆಗೆ ಬರುವವರೆಗೂ ಅವರ ಕಷ್ಟ ನೋಡ್ಕೋಬೇಕು. ನಿಮ್ಮ ಗೂಡಿಗೆ ಇಷ್ಟು ದುಡ್ಡು ಕೊಟ್ಟಿದ್ದೀನಿ ಅಂತ ಊರಲ್ಲಿರೋ ಯಜಮಾನನಿಗೆ ಊರ ಮಾಡುವ ಹೆಗ್ಗಿ ಲೆಕ್ಕ ಕೊಡ್ತಾನೆ. ಒಂದೊಂದು ಗೂಡಿನಿಂದ ಒಬ್ಬೊಬ್ಬ ಊರು ಮಾಡುವ ಹೆಗ್ಗಿ ಜೊತೆಯಲ್ಲಿ ಹೋಗ್ತಾರೆ. ಎಲ್ಲ ನಾಲ್ಕು ಜನರೂ ಹೆಗ್ಗಿಗಳೇ. ಊರ ಮಾಡೋರು ರಾತ್ರಿ ಹೊತ್ತಿನ ಪೂರ್ತಿ ಜವಾಬ್ದಾರಿ ಅವರದೇ. ಕತ್ತೆ ಕಟ್ರಿ, ಮರಿ ಹೂಡ್ರಿ, ಬಲೆ ಕಟ್ರಿ, ಬಲೆ ಬಿಚ್ರಿ, ಮರಿ ಕಣ್ಣು ನೋಡ್ರಿ ಇವೆಲ್ಲಾ ಬೆಳಗೆಯದ್ದು

ಉಸ್ತುವಾರಿ ಮಾಡುವವರೂ ಕೂಡ ಊರು ಮಾಡೋವರೆ. ಇನ್ನು ಹೇರಿನವರು ಎಲ್ಲಾ ಗೂಡೆ ಕಟ್ಟಿ, ಹೇರ್ ಕಟ್ಟಬೇಕು. ಊರಿಗೆ ಹೋದವನು ಹೇರಿನವನಿಗೆ ಇಂಥ ಮುಂದಿನ ಊರಿಗೆ ಹೋಗಿ ಅಂತ ಹೇಳ್ತಾನೆ.

ಸಾಮಾನ್ಯವಾಗಿ ಹೇರು ಕಟ್ಟುವರು ಹೆಂಗಸರು ಮತ್ತು ಮುದುಕರು. ಹೆಂಗಸರು ಬೆಳಿಗ್ಗೆ ಏಳು ಗಂಟೆಗೆ ಮುದ್ದೆ ಮಾಡ್ತಾರೆ. ಅದನ್ನು ಕುರಿಯವರು, ಊರಾಡುವವರು ಉಂಡು ಅವರ ಮುಂದಿನ ಕೆಲಸಕ್ಕೆ ಹೋಗ್ತಾರೆ. ಕುರಿಯವರು ಊಟ ಮಾಡಿದ ಮ್ಯಾಲೆ ಕುರಿ ಹೊಡಕೊಂಡು ಒಂದೊಂದು ತಾಟಿನಂತೆ ಮುಂದೆ ಹೋಗುತ್ತಾರೆ. ಅವರೆಲ್ಲಾ ಅನುಭವಸ್ಥ ಹುಡುಗರು. ಹೇರಿನವರು ಪಾತ್ರ ಪಗಡೆಲ್ಲಾ ಕಟ್ಟಿಕೊಂಡು ಆ ಜಾಗವನ್ನು ಬಿಟ್ಟು ಊರಾಡಿದವರು ಹೇಳಿದ ಮುಂದಿನ ಜಾಗಕ್ಕೆ ಹೊರಡುತ್ತಾರೆ. ಈ ಜಾಗ ಈ ಮೂರೂ ಗುಂಪಿಗೆ ತಿಳಿದಿರುತ್ತದೆ. ಹೇರಿನವರು ೮ ರಿಂದ ೨೦ ದಿನಗಳವರೆಗಿನ ತಡಸು ಮರಿಗಳನ್ನು ಬೇರೆಯಾಗಿ ಹೊಡಕೊಂಡು ರಸ್ತೆಗುಂಟ, ಹೊರಡುತ್ತಾರೆ. ಒಂದೆರಡು ದಿನಗಳ ಕುರಿಗಳನ್ನು ಕತ್ತೆ ಗೂಡಿಗೆ ಹಾಕುತ್ತಾರೆ. ಕುರಿ ಕಾಯುವವರು ಆ ರಸ್ತೆಯ ಸುತ್ತಮುತ್ತಲಿನ ಕಾಡು ಗಿಡದಲ್ಲಿ ಸಾವಕಾಶವಾಗಿ ಮೇಯಿಸ್ಕೊಂಡು ಮೊದಲೇ ನಿರ್ಧಾರಿತ ಸ್ಥಳಕ್ಕೆ ತಲುಪುತ್ತಾರೆ. ಅದಕ್ಕಿಂತ ಮೊದಲೇ ತಲುಪಿದ್ದ ಊರಾಡುವವರು ಮುಂದಿನ ದಿನದ ಮಂದೆ, ಯ್ಯಾಪಾರ, ಸಂತೆ ಎಲ್ಲಾ ಮುಗಿಸಿಕೊಂಡು ಹೇರಿನವರು ಬಂದ ಜಾಗಕ್ಕೆ ತಲುಪಿಕೊಳ್ಳುತ್ತಾರೆ. ಹೀಗೆ ದಿನನಿತ್ಯ ನಡೆಯುತ್ತದೆ ಕುರಿ ಪಯಣ.

ತಳ ಮಂದೆ ಆದ ಮ್ಯಾಲೆ ಹೆಗಡಿಗೆ ಉತ್ತಮ. ತಳ ಮಂದೆ ಅಂದರೆ ಆ ವರ್ಷದ ಕುರಿ ಪಯಣದ ಕೊನೆಯ ಊರು. ನಂತರ ಅಲ್ಲೇ ಸುತ್ತ ತಿರುಗುತ್ತಾ ಆ ಜಾಗದಲ್ಲಿಯೇ ಎರಡು-ಮೂರು ತಿಂಗಳು ಉಳಿದು ಬಿಡುತ್ತಾರೆ. ಹುಣಸೂರು, ಪಿರಿಯಾಪಟ್ಟಣ, ಕೆ.ಆರ್. ನಗರ ಮುಂತಾದವು ಇವರ ತಳ ಮಂದೆಗಳು. ಹುಣಸೂರು ಸೀಮೇಲಿ ದೊಡ್ಡ ಗದ್ದೆ ಬಯಲಿನಲ್ಲಿ. ಹತ್ತಾರು ಜಿಲ್ಲೆಯ ಕುರಿಗಳನ್ನು ತಡೆದರೂ ಅಲ್ಲಿ ಮೇಯುತ್ತವೆ. ದೇಶಕ್ಕೆ ಹೋದಾಗ ಆ ಗದೆ ಬಯಲಿನಲ್ಲಿ ಯಥೇಚ್ಛವಾಗಿ ಸುಂಟಿ ಮೊಳಕೆ, ಸ್ಯಾಲೆ ಬೋಟು, ಸ್ವಲ್ಪ ಕಲ್ಲ, ಮಲತುಪ್ಪರೆ ಹುಲ್ಲು ಪುಟ್ಟಂಪುರ್ಲೆ ಸಿಗುತ್ತದೆ. ಬೆಳೆ ಕುಯ್ದದ ಗದ್ದೆಯಲ್ಲಿ ತೆನೆ ಸುರಿದಿರುತ್ತೆ. "ನಮ್ಮ ಕಂಪಾಳ ದೇಶದಲ್ಲಿ ಕಾಲು ಕತ್ತರಿಸುತ್ತಾರೆ, ಅಲ್ಲಿ ಮುಂದೆ ಮೆದೆ ಎತ್ತಿಕೊಂಡು ಹೋದರೆ ಹಿಂದೆ ಕುರಿ ಬಿಡಕೊಂಡು ಹೋಯ್ತೀವಿ. "ನಿಮ್ಮ ಮನೆಕಾಯ್ತಾಗ ಕುರಿ ಹಿಂದೆ ಹೊಡಕೊಳ್ರೊ ಸ್ವಲ್ಪ ಮೆದೆ ಎತ್ತಿಕೊಳ್ತಿವಿ" ಅಂತಾರೆ. ಸತ್ಯವಂತರಿಗೆ ಕೈಮುಗಿಬೇಕು" ಎನ್ನುತ್ತಾ ಅ ಗದ್ದೆ ಸೀಮೆಯ ಜನರಿಗೆ ಕೃತಜ್ಞತೆ ಸಲ್ಲಿಸುತ್ತಾರೆ ದುಗ್ಗಾಣಿಹಟ್ಟಿ ಕುಳಪ್ಪ.

"ಹಕ್ಕಿ ಶ್ರಾಣವೊ ರೆಕ್ಕೆ ತ್ರಾಣವೊ" ಎನ್ನುವ ನಾಣ್ಣುಡಿಯಂತೆ ಒಂದೊಂದು ಊರಿನ ಹಕ್ಕಿ ಒಂದೊಂದು ಥರ. ಅಲ್ಲಿ ಮರಿ ಹಾಕಿರೋ ಕುರಿ ಚೆನ್ನಾಗಿ ಮೇಯಿದರೆ ಇನ್ನೊಂದು ತಿಂಗಳಿಗೆ ಕಟ್ಟಿಸಿಕೊಳ್ಳುತ್ತದೆ. ದೇಶಕ್ಕೆ ಹೋದಾಗ ಒಂದು ವರ್ಷದ ಮೇಲೆ ಮೂರು ತಿಂಗಳಿಗೆ ಎರಡು ಸೂಲು ಈಯ್ತಾವೆ. ದೇಶಕ್ಕೆ ಹೋದಾಗ ಶೀತದ ನೆಲದಲ್ಲಿದ್ದರೆ ಹಿಂಗಡೆ ಮರಿಗಳನ್ನು ಇಪ್ಪತ್ತು ದಿನದವರೆಗೂ ಜಲ್ಲೆಗೆ ಹಾಕುತ್ತಾರೆ. ಹಕ್ಕಿ ಕಾವಾಗಿ ಚೆನ್ನಾಗಿದ್ರೆ ಬೆಳಿಗ್ಗೆ ನಾಲ್ಕು

ಗಂಟೆಗೆ ತಾಯಿ ಕುರಿ ಎದ್ದು ಮರಿಗಳಿಗೆ ಅಂಬಲಿಸುತ್ತೆ, ಬೋರಾಡುತ್ತದೆ, ಹಕ್ಕಿ ಶೀತದಿಂದ ಕೂಡಿದ್ದರೆ, ಬೆಳಿಗ್ಗೆ ಆರು ಗಂಟೆ ಆದ್ರೂ ಮರಿಗಳ ಕಡೆಗೆ ಹಂಬಲಿಸುವಿದಲ್ಲ, ಗೆಚ್ಚೆ ಆಟೋಮ್ಯಾಟಿಕ್ ಆಗಿ ಬತ್ತುತ್ತದೆ.

**ಜಾವಾ ಕಾಯುವುದು ; ಕುರಿದಳ**

ವರಸ್ಥಳಕ್ಕೆ ಹೋದಾಗ ಕಾಡುಮೃಗ, ಕಳ್ಳಕಾಕರ ಹಾವಳಿಯಿಂದ ಕುರಿಗಳನ್ನು ರಕ್ಷಿಸಲು ಜಾವಾ ಕಾಯುತ್ತಾರೆ, ರಾತ್ರಿ ಊಟ ಮುಗಿಸುವುದಕ್ಕೆ ೮–೯ ಗಂಟೆ ಆಗುತ್ತದೆ. ರಾತ್ರಿ ೯ ಗಂಟೆಯಿಂದ ಬೆಳಿಗ್ಗೆ ೫ ಗಂಟೆ ಯವರಿಗಿನ ಎಂಟು ಗಂಟೆಗಳನ್ನು ಜನಗಳ ಮೇಲೆ ವಿಭಾಗ ಮಾಡಿಕೊಳ್ಳುತ್ತಾರೆ. ಎಂಟು ಜನ ಇದ್ದರೆ ಎರಡು ಗಂಟೆಗಳ ಜಾವಾ ಜಾರಿಗೆ ತರುತ್ತಾರೆ. ಇಬ್ಬರು ಎರಡು ಗಂಟೆಗಳ ಕಾಲ ಕಾಯಬೇಕು. ಆ ಕಡೆ ಒಬ್ಬ, ಈ ಕಡೆ ಒಬ್ಬ ನಿಂತುಕೊಂಡೆ ಜಾವಾ ಕಾಯಬೇಕು. ಕುರಿ ಎದ್ದೆದ್ದು ಓಡಾಡುತ್ತಿದ್ದರೆ ಸುತ್ತರಿಸಿ ಸುತ್ತರಿಸಿ ಮಲಗಿಸಬೇಕು. ಜಾವಾ ಕಾಯುವವನು ಸದಾ ತಿರುಗುತ್ತಾ ಧೈರ್ಯದಿಂದ ಓಡಾಡುತ್ತಿರಬೇಕು. ಕುರಿಗಳು ಮಲಗಿದ್ದರೆ ಮಾತ್ರ ಕುಳಿತುಕೊಳ್ಳಬಹುದು.

ಕುರಿದಳ, ದನ ಕಾಯುವ ಹುಡುಗರು, ಕೋಳಿ ಪಿಳ್ಳೆ, ಎತ್ತು ಕಾಯೋ ಚುಕ್ಕಿ – ಈ ಆಕಾಶಕಾಯಗಳ ನಡೆಗಳ ಮೇಲೆ ಜಾವಾ ಬದಲಾಯಿಸುತ್ತಾರೆ. ಒಂದರ ಮೇಲೆ ಒಂದು, ಎರಡು ಅಡಿಗೊಂದರಂತೆ, ಸಾಲಾಗಿ ಚುಕ್ಕಿಗಳು ಮೂಡುತ್ತವೆ. ಅವುಗಳನ್ನು ಕುರಿದಳ ಎನ್ನುತ್ತಾರೆ. ಕುರಿದಳದ ಚುಕ್ಕಿಗಳು ಆಕಾಶದ ನಿಗದಿಯಾದ ಜಾಗದಲ್ಲಿ ಕಾಣಿಸಿಕೊಂಡಾಗ, ಅದರ ಆಧಾರದಲ್ಲಿ ಸಮಯ ನಿಗದಿ ಮಾಡಿಕೊಂಡಿರುತ್ತಾರೆ. ಕುರಿ ದಳ ನೆಟ್ಟಗೆ ತಲೆಯ ಮೇಲೆ ಕಾಣಿಸಿಕೊಂಡಾಗ ಎರಡನೆಯ ಜಾವಾ ಬದಲಾಯಿಸುತ್ತಾರೆ.

ದುಂಡಗೆ ೧೦–೧೫ ಚುಕ್ಕಿಗಳು ಮೂಡುತ್ತವೆ. ಅವುಗಳಿಗೆ ದನ ಕಾಯುವ ಹುಡುಗರು ಎನ್ನುತ್ತಾರೆ. ಎತ್ತು ಕಾಯೋ ಚುಕ್ಕಿ ಸಾಮಾನ್ಯವಾಗಿ ಇಳಿಸಂಜೆಯಲ್ಲಿ ಕಾಣಿಸುತ್ತದೆ. ಆಗ ನೇಗಿಲ ನೊಗದ ಕೊರಳನ್ನು ಬಿಟ್ಟು ಎತ್ತುಗಳನ್ನು ಮೇಯಿಸಿದರೆ ಸಾಕು. ಎತ್ತು ಕಾಯೋ ಚುಕ್ಕಿ ರಾತ್ರಿ ೭ ಗಂಟೆಯವರೆಗೂ ಇರುತ್ತದೆ. ಅಷ್ಟರಲ್ಲಿ ಎತ್ತು ಚೆನ್ನಾಗಿ ಮೇಯುತ್ತದೆ ಎನ್ನುವುದು ಹಿರೀಕರ ಅನುಭವ.

ಹೀಗೆ ಹಲವಾರು ವಿಭಿನ್ನ ಅನುಭವಗಳನ್ನು ನೀಡುವ ದೇಶದ ಕುರಿ ಪಯಣ ಕುರಿಗಾರರಿಗೆ ಮಹತ್ವವಾದದ್ದು. ಯಾಕೆಂದರೆ ಒಂದು ಕುರಿ ಜೊತೆಯಲ್ಲಿ ಇನ್ನೊಂದು ಮರಿಯನ್ನು ಆ ಕಡೆಯಿಂದ ತರುತ್ತಾರೆ. ಬಸವ ಜಯಂತಿ, ಉಗಾದಿ ಹಬ್ಬ ಕಳೆದ ಮೇಲೆ ದೇಶದೊಳಗಿನ ಆಸೆ ಇರುವುದಿಲ್ಲ. ಮುಂಗಾರಿನ ಹುಲ್ಲು, ಹರಿದುಕ್ಕೆ ಹುಲ್ಲು ಮೇಯಿಸಿದರೆ ಕುರಿಗೆ ಚೆನ್ನಾಗಿರುತ್ತದೆ ಎಂದು ಊರಿನಕಡೆಯ ಗ್ಯಾನ ಬಲಿಯುತ್ತದೆ. ಉಗಾದಿ ಹಬ್ಬದ ಹಿಂದೆಮುಂದೆ ಯಾವ ಕಡೆ ಮಳೆ ಹುಯ್ಯುತ್ತದೋ ಅದರ ವಾಸನೆ ಹಿಡಿದು, ಅದೇ ಹೊಳೆಯಲ್ಲಿ ಮೇಯಿಸುತ್ತಾ, ಮೇಯಿಸುತ್ತಾ ಊರಿಗೆ ಹಿಂದಿರುಗುತ್ತಾರೆ.

❑



## ಶಾಡೆ ಸೊಪ್ಪು

ಶಿರಾ, ಹಿರಿಯೂರು, ಚಳ್ಳಕೆರೆ ತಾಲೂಕುಗಳಲ್ಲಿ ಓಡಾಡುತ್ತಿದ್ದರೆ ನೀವು ಎಲ್ಲಾ ಕಡೆ ಶಾಡೆ ಸೊಪ್ಪನ್ನು ಬೆಳೆದಿರುವುದನ್ನು ನೋಡಬಹುದು. ಗದ್ದೆಗಳಲ್ಲಿ, ಅಡಿಕೆ, ತೆಂಗಿನ ತೋಟಗಳಲ್ಲಿ ೭–೮ ಅಡಿಗಳವರೆಗೂ ಬೆಳೆದು ನಿಂತಿರುವ ಶಾಡೆ ಸೊಪ್ಪಿನ ದೃಶ್ಯ ಸರ್ವಸಾಮಾನ್ಯ. ನಾಲ್ಕು ಅಡಿಗಳ ಅಂತರದ ಶಾಡೆ ಗಿಡಗಳ ಸಾಲುಗಳು ಒತ್ತೊತ್ತಾಗಿ ನಿಂತಿರುತ್ತವೆ. ಈ ಪ್ರದೇಶದಲ್ಲಿ ಇಡೀ ಕರ್ನಾಟಕದ ಕುರಿ–ಮೇಕೆಗಳು ಗರಿಷ್ಠ ಸಂಖ್ಯೆಯಲ್ಲಿವೆ. ಹಿಂದೆ ೨೦ ದಿನದ ಕುರಿ ಮರಿಗಳಿಗೆ ಜಾಲಿ ಸೊಪ್ಪು, ಹುಣಸೆ ಸೊಪ್ಪು, ಗಂಟಿಗನ ಹಲುಬು, ಮಂಡಿ ಮಸ್ಕ, ತಪರೆ ಹುಲ್ಲು, ಕೊರಲೆ ಸೊಪ್ಪು ಮುಂತಾದವನ್ನು ಕಟ್ಟುತ್ತಿದ್ದರು.

ಇತ್ತೀಚಿನ ದಶಕದಲ್ಲಿ ಶಿರಾ, ಹಿರಿಯೂರು, ಚಳ್ಳಕೆರೆಯ ಹಳ್ಳಿಗಳಲ್ಲಿ ಶಾಡೆ ಸೊಪ್ಪು ಬೆಳೆದು ಆಡು–ಕುರಿಗೆ ಕಟ್ಟುತ್ತಾರೆ. ಎರಡೂವರೆ ಮೂರು ತಿಂಗಳಿನವರೆಗೂ ಈ ಸೊಪ್ಪನ್ನು ಕಟ್ಟುತ್ತಾರೆ. ಈ ಸೊಪ್ಪಿಗೆ ಕುರಿಮರಿ ಪರಿಯುತ್ತದೆ. ಈ ಅವಧಿಯಲ್ಲಿ ಒಳ್ಳೆಯ ತೂಕ ಬಂದು, ರೂ. ೧೫೦೦–೨೦೦೦ರವರೆಗೂ ಮಾರಾಟವಾಗುತ್ತವೆ. ಈ ಸೊಪ್ಪಿನ ಜೊತೆಯಲ್ಲಿ ಬೇರೆ ಸೊಪ್ಪನ್ನು ಸ್ವಲ್ಪ

ಪ್ರಮಾಣದಲ್ಲಿ ಬಳಸುತ್ತಾರೆ. ಇದು ಕಳೆದ "ದಶಕದ ಆಗಸ್ಟ್‌ನಿಂದ ಡಿಸೆಂಬರ್‌ವರೆಗೆ ಮರಿ ಈಯುವ ಕುರಿಗಳು ಪರಸ್ಥಳಕ್ಕೆ ಹೋಗುವ ಮುನ್ನ ಈ ಸೊಪ್ಪಿಗೆ ಭಾರೀ ಬೇಡಿಕೆಯಿದೆ.

ಸಾಮಾನ್ಯವಾಗಿ ಕುರಿ ಕಾಯುವವರು ನೀರಾವರಿ ಪ್ರದೇಶವನ್ನು ಹೊಂದಿರುವುದಿಲ್ಲ. ಶಾಡೆ ಸೊಪ್ಪನ್ನು ಬೇರೆಯವರಿಂದ ಖರೀದಿ ಮಾಡಿ ಮೇಯಿಸುತ್ತಾರೆ. ಐದು ಕುಂಟೆ ಜಮೀನಿನಲ್ಲಿ ಐದಾರು ಸಾವಿರ ದುಡ್ಡು ಬರುತ್ತದೆ. ಒಮ್ಮೆ ಈ ಗಿಡ ಹಾಕಿದರೆ ಮೂರು ತಿಂಗಳ ನಂತರ ಸೊಪ್ಪನ್ನು ಮುರಿಯಬಹುದು. ಮೂರು ತಿಂಗಳಿಗೊಮ್ಮೆ ಒಂದು ಬೀಡು ಸೊಪ್ಪು ಬರುತ್ತದೆ. ಎರಡು ವರ್ಷದವರೆಗೂ ಹೊಸದಾಗಿ ಹಾಕುವುದು ಅಗತ್ಯವಿರುವುದಿಲ್ಲ. ಎರಡು ವರ್ಷಗಳ ನಂತರ ಗಳಗಳಾಗಿ ಬೇರೆ ಕೆಲಸಕ್ಕೆ ಬಳಸಬಹುದು. ಒಂದ ಗಳಕ್ಕೆ ೫೦-೬೦ ರೂ ಬೆಲೆಯಾಗುತ್ತದೆ. ಒಂದು ಎಕರೆಯಲ್ಲಿ ಮೂನ್ನೂರು ಗಳಗಳನ್ನು ಪಡೆಯಬಹುದು.

ಎರಡು ತೆಂಗಿನ ಸಾಲುಗಳ ನಡುವೆ ನಾಲ್ಕು ಅಡಿಗಳ ಅಂತರದಲ್ಲಿ ಶಾಡೆ ಗಿಡಗಳು ಬರುವುದರಿಂದ ತೆಂಗಿನ ಫಸಲಿಗೆ ಯಾವುದೇ ವ್ಯತಿರಿಕ್ತ ಪರಿಣಾಮ ಉಂಟಾಗುವುದಿಲ್ಲ. ಅಡಿಕೆ ಸಸಿ ಭಾರೀ ಬಿಸಿಲಿಗೆ ಬಾಡಿಹೋಗುವ ಸಂಭವ ಇರುತ್ತದೆ. ಹಾಗೇ ತೆಂಗು, ದಾಳಿಂಬೆ, ಕಿತ್ತಳೆ, ಮೊಸಂಬಿ ಮುಂತಾದ ಗಿಡಗಳು ಬಲಿತು ದೊಡ್ಡವುಗಳಾವುದಕ್ಕಿಂತ ಮೊದಲು ನೆರಳನ್ನು ಅಪೇಕ್ಷಿಸುತ್ತವೆ. ಈ ಶಾಡೆ ಸೊಪ್ಪಿನ ಗಿಡಗಳು ಯಥೇಚ್ಚವಾಗಿ ಅವುಗಳಿಗೆ ನೆರಳನ್ನು ಒದಗಿಸುತ್ತದೆ. ಇದು ರೈತನಿಗೆ ಇನ್ನೊಂದು ಲಾಭ.

ಬೆಳವಣಿಗೆ ದೃಷ್ಟಿಯಲ್ಲಿ, ಕುರಿ-ಮೇಕೆಗಳ ಮೊದಲ ಮೂರು ತಿಂಗಳ ಮಹತ್ವ ಪಡೆದಿದೆ. ಅಲ್ಲದೆ ಇತ್ತೀಚೆಗೆ ಮೂರು ತಿಂಗಳ ನಂತರದ ಮರಿಗಳನ್ನು ಮಾಂಸಕ್ಕಾಗಿ ಮಾರುಕಟ್ಟೆಯಲ್ಲಿ ಭಾರೀ ಬೇಡಿಕೆಯಿದೆ. ಹಿಂದೆ ಬಲಿತ ಮರಿಗಳಿಗೆ ಬೆಲೆಯಿತ್ತು, ಆದ್ದರಿಂದ ಶಿರಾ, ಚಳ್ಳಕೆರೆ, ಹಿರಿಯೂರು ತಾಲೂಕುಗಳಲ್ಲಿ ಕುರಿ ಮರಿ ಸಾಕಿ, ಈ ಅವಧಿಯಲ್ಲಿ ಗರಿಷ್ಠ ಲಾಭ ಪಡೆಯುತ್ತಿದ್ದಾರೆ. ಈ ಶಾಡೆ ಸೊಪ್ಪನ್ನು ಬೇರೆಯ ಸೀಮೆಗಳಲ್ಲಿ ಅಗಸೆ ಸೊಪ್ಪು ಎನ್ನುತ್ತಾರೆ. ಅಗಸೆ, ಚೊಗಚೆ, ಶಾಡೆ-ಇವೆಲ್ಲಾ ಆಡು, ಕುರಿಗೆ ಪೌಷ್ಟಿಕತೆ ಒದಗಿಸುವ ಸೊಪ್ಪುಗಳು.

❑



## ತಗರು ಬಿಡೋದು

ಕುರಿಗಳು ಕಟ್ಟುವುದಕ್ಕೆ ತಗರುಗಳು ಬೇಕು. ಹಿಂಡಿನಲ್ಲಿ ತಗರಿಗೆ ವಿಶೇಷ ಸ್ಥಾನಮಾನ ನೀಡುತ್ತಾರೆ. ವಿಶೇಷ ಆರೈಕೆಗೆ ಒಳಪಡುತ್ತವೆ. ಒಂದು ಟಗರು ಆ ಹಿಂಡಿನಲ್ಲಿ ಹುಟ್ಟುವ ಮರಿಗಳನ್ನು ನಿರ್ಧರಿಸುತ್ತದೆ. ಹುಟ್ಟುವ ಮರಿಗೆ ಅರ್ಧ ತಾಕತ್ತನ್ನು ಮಂದೆಯಲ್ಲಿ ತಗರು ಕೊಡುತ್ತದೆ. ನೂರು ಕುರಿಗೆ ೪-೫ ತಗರುಗಳನ್ನು ಬಿಡುತ್ತಾರೆ. ಯಾಕೆಂದರೆ ಒಂದೊಂದು ದಿನ ೩೦ ಕುರಿ ಬೆದೆಗೆ ಬರುವ ಸಂಭವವಿರುತ್ತದೆ. ಮೊದಲ ಸೂಲಿನಲ್ಲಿ ಈದ ತಗರುಗಳನ್ನು ಬಳಸುವುದಿಲ್ಲ. ಮಾರಬಿಡ್ತಾರೆ. ಎರಡನೆಯ, ಮೂರನೆಯ ಸೂಲಿನಲ್ಲಿ ಈಯುವ ಪಟ್ಲಿಗಳನ್ನು ವಿಶೇಷವಾಗಿ ಸಾಕಿ ತಗರಾಗಿ ಬಿಡುತ್ತಾರೆ. ಆ ಪಟ್ಲಿ ಮರಿಗಳಿಗೆ, ಯಥೇಚ್ಛವಾಗಿ ಹಾಲು ಸಿಗಲಿ ಎನ್ನುವ ಕಾರಣದಿಂದ ಬೇರೆ ಕುರಿಗಳಿಂದಲೂ ಹಾಲು ಕುಡಿಸುತ್ತಾರೆ.

ಮೇಲ್ನೋಟಕ್ಕೆ ನೋಡಿದರೆ, ತಗರುಗಳನ್ನು ಆ ಹಿಂಡಿನಲ್ಲಿಯೇ ಆಯ್ದು ಬಿಡುತ್ತಾರೆ ಎನ್ನುವ ಅಭಿಪ್ರಾಯ ಎಲ್ಲ ಕಡೆಯೂ ಇದೆ. ಆದರೆ ಕುರಿಗಾರರನ್ನು ವಿಚಾರಿಸುತ್ತಾ ಹೋದ ಹಾಗೆ, ತಗರು ಬಿಡುವುದರ ಬಗ್ಗೆ ತನ್ನದೇ ಆದ ಅಭಿಪ್ರಾಯಗಳನ್ನು ರೂಢಿಸಿ ಕೊಂಡಿದ್ದಾರೆ ನಮ್ಮ ಪೂರ್ವಿಕರು. "ನೆಂಟರದು ಒಂದು ಇರಲಿ

ಅಂತ ಅವರ ತಗರನ್ನ ಬಿಡಕ್ಕಂತಿದ್ದವು; ನೆಂಟರದು ಒಂದು ಬಣ್ಣ ಇರಲಿ ಅಂತ ಅವರು ನಮ್ಮದನ್ನು ಬಿಟ್ಟುಕೊಳ್ಳುತ್ತಿದ್ದರು" ಎಂದು ಬಾಲದೇವರಹಟ್ಟಿ ಬಡಜ್ಜ ನೆನಪಿಸಿಕೊಳ್ಳುತ್ತಾರೆ. ಬೇರೆ ಕುರಿ ಟಗರು ಬಿಟ್ಟುಕೊಂಡರೆ ಪೇಣಿ ಬರ್ತಾವೆ ಅಂತ ನೆಂಟರ ತಗರನ್ನ ಬಿಟ್ಟುಕೊಳ್ಳುತ್ತಿದ್ದರು. ಫಲಮರಿಯನ್ನು ಹೊಡಿಸ್ಕೊಂಡು ಬರುತ್ತಿದ್ದರು. ಅದರಲ್ಲೊಂದು ಮಿದುರಾಮಂದು ತಗರು ಇರುತ್ತದೆ, ಇನ್ನೊಂದು ಒಲ್ಲು ರಾಮಂದು ಅಂತ ಇರುತ್ತದೆ. ಮಿದುರಾಮಂದಿನ ಕುಪ್ಪಟ ಒಂದು ಗೇಣು ಬರುತ್ತದೆ. ಮಿದುರಾಮಂದು ನೆಂಟರಿಗೆ ಹೊಡೆಯುತ್ತಾರೆ. ಕೊಟ್ಟ ತಗರಿಗೆ ಫಲಮರಿಗಳನ್ನು ಅವರು ಬಿಟ್ಟುಕೊಳ್ಳುತ್ತಾರೆ. ಸಂಬಂಧದಲ್ಲಿ ನಿಮ್ಮ ಕುರೀದು ಒಂದು ತಳೀನ ಕೊಡ್ರೊ ಅಂತ ನೆಂಟರದ್ದನ್ನು, ತರುತ್ತಾರೆ.

೨೦೦-೩೦೦ ಕುರಿ ಇದ್ದರೂ ಹೊರಗಡೆ ಕುರಿಗಳನ್ನು ಒಂದೆರಡನ್ನ ಹಾಕಿಕೋ ಎನ್ನುವ ಮನೋಭಾವ ಪದ್ಧತಿಯಾಗಿ ಬೆಳೆದು ಬಂದಿದೆ. ಆಗ ಕುರಿ ಬೆಳವಣಿಗೆ ಆಗುತ್ತದೆ ಎನ್ನುವ ತಿಳುವಳಿಕೆ ಕುರಿಗಾರರಲ್ಲಿದೆ ಎನ್ನುತ್ತಾರೆ ಹೊರಕೇರಿ ಸಿದ್ದಣ್ಣ. ವರುಷಕ್ಕೆ ಎರಡು ಅದಲು-ಬದಲು ಮಾಡಿಕೊಳ್ಳುವ ಪದ್ಧತಿ ರೂಢಿಯಲ್ಲಿದೆ. ಜೂನ್-ಜುಲೈ ತಿಂಗಳುಗಳಲ್ಲಿ ಹೆಚ್ಚಾಗಿ ಕುರಿ ಕಟ್ಟುವುದು. ಆಗ ಬೇರೆಯವರಿಂದ ತಗರು ತಂದು ಬಿಟ್ಟುಕೊಳ್ಳುತ್ತಾರೆ. ಬಿತ್ತನೆ ಟಗರು ಹೊಡ್ಕೊಡು ಅಂತ ಕೇಳಿ ಹದಿನೈದು ದಿನಗಳ ಮಟ್ಟಿಗೆ ತಗರನ್ನ ಬಿಡಿಸಿಕೊಳ್ಳುತ್ತಾರೆ. ಹೀಗೆ ಪರಸ್ಪರ ವಿನಿಯಮವಾಗುತ್ತದೆ ತಗರು.

ಚಳ್ಳಕೆರೆ ಸೀಮೆಲಿ ನೆರೆ ಮುಸುಕು ಕುರಿ ಅಂದರೆ ಎಲ್ಲರಿಗೂ ಇಷ್ಟ. ಯಾರ ಕುರೀಲಿ ಆ ತಗರು ಇರುತ್ತದೊ ಅಲ್ಲಿಗೆ ಹೋಗಿ ತರುತ್ತಾರೆ. ಆ ಪಟ್ಲಿ ತಂದು ಕುರಿಗೆ ಬಿಟ್ಟು ಕಟ್ಟಿಸುತ್ತಾರೆ. ಆಗ ಹುಟ್ಟಿದ ಪಟ್ಲಿಯ ಗುಣ ಇಷ್ಟವಾದರೆ ಅದನ್ನೇ ತಗರಾಗಿ ಬಿಡುತ್ತಾರೆ "ಹೋದ ಸಾರಿ ಆರು ಸಾವಿರ ಕೊಟ್ಟು ಒಂದು ತಿಂಗಳ ಮರಿ ತಂದೆ. ಅಲ್ಲಿಯೆ ಆರು ತಿಂಗಳು ಬಿಟ್ಟು ಆಮೇಲೆ ತಂದೆ, ಎರಡು ಸಾರಿ ಅದರಲ್ಲಿ ಕಟ್ಟಿಸಿದೆ. ಅದಕ್ಕೆ ಕಾಲು ಊನವಾಗಿ, ಅದನ್ನು ಮಾರಿದೆ, ಆದರೆ ಅದಕ್ಕೆ ಹುಟ್ಟಿದ ಪಟ್ಲಿಗಳನ್ನು ಈಗ ಬಳಸಿಕೊಳ್ಳುತ್ತಿದ್ದೇನೆ" ಎಂದು ತಮ್ಮ ಅನುಭವ ಹಂಚಿಕೊಳ್ಳುತ್ತಾರೆ ಒಬನಹಳ್ಳಿ ಕೃಷ್ಣಮೂರ್ತಿ.

**ಟಗರಿನ ಲಕ್ಷಣಗಳು :**

ತಗರು ಎತ್ತರವಾಗಿರಬೇಕು. ಒಳ್ಳೆ ಶಿರವಾಗಿರಬೇಕು.. ಲೊಳಗವನ್ನು ಇಟ್ಟುಕೊಳ್ಳುವುದಿಲ್ಲ. ಟಗರು ಹಿಡಿತವಾಗಿರಬೇಕು. ಚಿಟ್ಟು ಬೀಜದ ತಗರಿಗೆ ಎಲ್ಲರೂ ಅಪೇಕ್ಷೆ ಪಡುತ್ತಾರೆ. ಒಳ್ಳೆಯ ಬಣ್ಣ, ಕಾಯಿಲೆ-ಗಿಯಲೆ ಇರದಲೆ ಪಿಂಡವಾಗಿ ಇರುತ್ತಲ್ಲ ಅದನ್ನು ಬಿಟ್ಟು ಕೊಳ್ಳುತ್ತಾರೆ. ನಡು ಅಗಲವಾಗಿರಬೇಕು. ಬನಿಯಾಗಿರಬೇಕು. ಬನಿಕಟ್ಟಾಗಿರಬೇಕು. ಜಾಬಾಗಿರಬೇಕು. ಬೀಜ ಜಾಸ್ತಿ ದಪ್ಪವಾಗಿರಬಾರದು, ಟಗರಿಗೆ ಸಿಟ್ಟು ಇರಬೇಕು ; ಮಬ್ಬಾಗಿರಬಾರದು. ಸಿಟ್ಟಿರದ ಪಟ್ಲಿಯನ್ನು ಮಾರುತ್ತಾರೆ ; ಇಲ್ಲ ಇಡ ಮಾಡಿಸುತ್ತಾರೆ. ಬೀಜ ಒಳಗೆ ಸೇರಿರುವ ತಗರನ್ನು ಬೀಜಕ್ಕೆ ಬಿಡುವುದಿಲ್ಲ. ಬೀಜದ ಪಟ್ಲಿಗೆ ಕೊಳಮಣಿ ಇದ್ದರೆ, ಅದೇ ಗುಣ ಮರಿಗಳಲ್ಲಿ ಬರುತ್ತದೆ.

ಬಣ್ಣದಲ್ಲಿ ಪ್ರದೇಶವಾರು ಆಯ್ಕೆಗಳಿರುತ್ತವೆ. ಕರೇ ಕುರಿಗಳಲ್ಲಿ ಜನ್ನಾಳು ಪಟ್ಟೆ ಇದ್ದರೆ ಚಂದ. ಉಂಡು ಪಟ್ಟೆ, ಕರೆ ಪಟ್ಟೆ, ಕಾಲಕಣ್ಣು ಇವೆಲ್ಲಾ ತಗರು ಬಿಡೋದಿಕ್ಕೆ ಖಾಯಸ್ಸಾಗಿರುವವು ಚಳ್ಳಕೆರೆ ಸುತ್ತಮುತ್ತ ನೆರೆ ಮಸ್ಕ ತಗರು ಇಷ್ಟವಾಗುತ್ತದೆ. ಬಿಳೀ ಕುರಿಗಳಲ್ಲಿ ಕೆಂಪನಳಗ, ಹಾಲು ಗಣ್ಣಿನ ತಗರು, ಕರೇ ಮುಖದ ಟಗರು, ಕರೆಹಳಗಗಳನ್ನು ಇಷ್ಟಪಡುತ್ತಾರೆ.

**ದುಗ್ಗಾಣಿ ಹಟ್ಟಿ ದಾಸಪ್ಪ – ತಗರು ಬಿಡುವ ಒಂದು ವಿಶಿಷ್ಟ ಪದ್ಧತಿ :**

ಎರಡು ಟೈಮಲ್ಲಿ ಕುರಿ ಈಯುತ್ತವೆ. ಒಂದು ಕಾರಹಬ್ಬದಲ್ಲಿ ; ಇನ್ನೊಂದು ಕೂಳೆ ಟೈಮಲ್ಲಿ. ಕೂಳೆ ಕಾಲದಲ್ಲಿ ಈದರೆ ಕುರಿಮರಿಗಳನ್ನು ಕಾಪಾಡುವುದು ಸುಲಭ. ಮಳೆ ಗಾಳಿಗೆ ಸಿಕ್ಕಿ ಶೀತ ಆಗೋದು, ಕೆಮ್ಮು-ದಮ್ಮು ಬರುವುದು ತಪ್ಪುತ್ತದೆ. ಶೀತಕ್ಕೆ ಈದರೆ ತುಪ್ಪಟ ಸಹ ಉದುರುತ್ತದೆ. ಮುಖ್ಯವಾಗಿ ಮಳೆಗಾಲದಲ್ಲಿ ಈದರೆ ಕೆಚ್ಚಲಲ್ಲಿ ಹಾಲಿರುವುದಿಲ್ಲ. ಸ್ವಾತಿ, ವಿಸಾತಿ ಮಳೆಗೆ ಕುರಿ, ಆಡು, ದನಕರು ಚೆನ್ನಾಗಿ ಮೇಯುವುದಿಲ್ಲ, ಆಗ ವಿಷವಾಗಿರುತ್ತದೆ ಮೇವು ಎನ್ನುತ್ತಾರೆ ಅನುಭವಸ್ಥರು. ಆಗ ಹಾಲಿನ ಸಾರಾಂಶ ಕಡಿಮೆ. ಆಗ ಕುರಿ ಮರಿ ತೂಕ ಕಡಿಮೆ ಬರುತ್ತದೆ.

ಈ ಎಲ್ಲಾ ಸಮಸ್ಯೆಗಳನ್ನು ತನ್ನ ಅನುಭವದಿಂದ ಬಗೆಹರಿಸಿಕೊಂಡು, ತನ್ನದೇ ವಿಶಿಷ್ಟ ರೀತಿಯಲ್ಲಿ ತಗರನ್ನು ಹಿಂಡಿಗೆ ಬಿಡುತ್ತಿರುವವರು ದುಗ್ಗಾಣಿಹಟ್ಟಿ ದಾಸಪ್ಪ, ಅದಕ್ಕೆ ತನ್ನದೇ ವಿಶಿಷ್ಟ ಕ್ರಮಗಳನ್ನು ಅನುಸರಿಸಿ ಗಮನ ಸೆಳೆದಿದ್ದಾರೆ. ಮಳೆಗಾಲ ಅಲ್ಲದ ದಿನಗಳಲ್ಲಿ ಕುರಿ ಈಯಬೇಕಾದ್ರೆ ಜನವರಿ ನಂತರ ಈಯುವಂತೆ, ಅದಕ್ಕಿಂತ ೫ ತಿಂಗಳು ಮೊದಲು ತಗರನ್ನು ಹಿಂಡಿಗೆ ಕೂಡಬೇಕು. ಅಲ್ಲಿಯವರೆಗೆ ತಗರುಗಳನ್ನು ಬೇರೆ ಕಾಯೋದು ಒಳ್ಳೆಯದು. ಮಾರ್ನಾಮಿ ಹಿಂದೆ ಮುಂದೆ ಟಗರನ್ನು ಬಿಟ್ಟರೆ ಅವು ಕೂಳೆ ಟೈಮಿನಲ್ಲಿ ಈಯುತ್ತವೆ. ಎಂಟು ದಿನ ಹಿಂಡಿನಲ್ಲಿ ಟಗರುಗಳಿದ್ದರೆ ಸಾಕು. ಎಲ್ಲವೂ ಒಂದೇ ದಿನ ಬೆದೆಗೆ ಬರುವುದಿಲ್ಲ. ಮಲ್ಲಿಗೆ ಹೂವನ್ನು ಮೊಸರಲ್ಲಿ ಕಿವುಚಿ ರಾತ್ರಿ ಮತ್ತು ಬೆಳಗ್ಗೆ ಎರಡೂಹೊತ್ತು ಕುರಿಗಳ ಮೇಲೆ ಎರಚಿಸಿದರೆ ಸಾಕು, ಬೇಗ ಬೆದೆಗೆ ಬರುತ್ತವೆ. ಬೆದೆ ತಪ್ಪಿದವು ಕೂಡ ಬೆದೆಗೆ ಬರುತ್ತವೆ ಇದು ಅಪರೂಪದ ಟಗರು ಬಿಡುವ ವಿಧಾನ. ಇದರಿಂದ ದಾಸಪ್ಪ ಕುರಿಗಳನ್ನು ಚೆನ್ನಾಗಿ ಸಾಕಿದ್ದಾರೆ.

ಕುರಿ ಕಟ್ಟಿಸಿಕೊಂಡಿರುವುದನ್ನು ಖಚಿತ ಪಡಿಸಿಕೊಳ್ಳಬೇಕು. ಕಟ್ಟೆ ಸುತ್ತ ಓಟಾಡುತ್ತಿರುವ ಬೆದೆ ಕುರಿಗಳನ್ನು ಗುರುತಿಟ್ಟುಕೊಂಡು ಒಂದು ತಿಂಗಳಾದ ಮೇಲೆ ಕೆಚ್ಚಲನ್ನು ಮುಟ್ಟಿ ನೋಡಿದರೆ ನಿಂಬೆ ಗಾತ್ರದ ಹರಳು ಸಿಗುತ್ತದೆ. ಎರಡು ತಿಂಗಳು ಮುಗಿದ ಮೇಲೆ ಹಿಡಿದುಕೊಳ್ಳಲು ಸಾಧ್ಯವಾಗುವ ಹಿಡಿಕೆಚ್ಚಲು ಸಿಗುತ್ತದೆ. ಅಲ್ಲಿಗೆ ಕುರಿ ಕಟ್ಟಿಸಿಕೊಂಡಿರುವುದು ಖಚಿತವಾಗುತ್ತದೆ. ನಂತರದ ದಿನಗಳಲ್ಲಿ ಆ ಕಟ್ಟಿದ ಕುರಿ ಓಡಾಡುತ್ತಿದ್ದರೆ ಗರ್ಭ ಧರಿಸಿರುವುದು ಮೇಲ್ನೋಟಕ್ಕೆ ಎದ್ದು ಕಾಣುತ್ತಿರುತ್ತದೆ.

❑



## ಕುರಿಗಳ ನರ ಕೆಚ್ಚುವುದು

ಕುರಿಗಳ ಮುಂದಿನ ಕಾಲಗಳನ್ನು ಎತ್ತಿಕೊಂಡು ಮೇಲಕ್ಕೆ ಮುಂದಾಗಿ ತಲೆ ಮಾಡಿಕೊಂಡು ನಿಲ್ಲಿಸಿ ಕೊಳ್ಳುತ್ತಾರೆ. ಬೀಜಗಳನ್ನು ಮುಂದಕ್ಕೆ ತೋತುಕೊಂಡು ನರಗಳ (ರಕ್ತನಾಳ) ಅಡಿಯಲ್ಲಿ ಒನಕೆಯನ್ನು ಇಟ್ಟುಕೊಳ್ಳುತ್ತಾರೆ. ಮತ್ತೆ ನರಗಳ ಮೇಲೆ ಕಬ್ಬಿಣದ ಸಲಾಕೆ ಇಡುತ್ತಾರೆ. ಈಗ ಕಬ್ಬಿಣದ ಸಲಾಕೆಯ ಮೇಲೆ ಎರಡೇಟು ಹಾಕುತ್ತಾರೆ. ಆಗ ರಕ್ತನಾಳದ ಮೇಲೆ ಸಮವಾಗಿ ಏಟು ಬಿದ್ದು, ರಕ್ತ ಸಂಚಲನೆ ನಿಲ್ಲುತ್ತದೆ. ಇದನ್ನು ನರ ಕಟ್ ಆಯ್ತು ಎಂದು ತಮ್ಮ ಲೋಕಾರೂಢಿಯ ಮಾತಲ್ಲಿ ಹೇಳುತ್ತಾರೆ. ಇವತ್ತಿನವರೆಗೂ ಕುಗ್ರಾಮಗಳಲಿ, ಹೋರಿಗಳು, ಟಗರುಗಳನ್ನು ನಾಟಿ ಪದ್ಧತಿಯಲ್ಲಿಯೇ ಕಸಿ ಮಾಡುತ್ತಾರೆ. ಅಲ್ಲದೆ ಆಸ್ಪತ್ರೆಯಲ್ಲಿ ಮಾಡಿದ ಕಸಿಯಿಂದ ಟಗರುಗಳು ಚಪ್ಪಟೆಯಾಗುತ್ತದೆ ; ನಾಟಿ ಕಸಿಯಿಂದ ಟಗರಿನ ಅಂಡು ಅಗಲಾಗುತ್ತದೆ ಎಂದು ತಮ್ಮ ಅನುಭವವನ್ನು ಉಲ್ಲೇಖಿಸುತ್ತಾರೆ.

### ಬೀಜ ಕೀಳುವುದು

ಬೀಜ ಒಡೆಯುವುದಕ್ಕಿಂತ ಬೀಜ ಕಿತ್ತರೆ, ಚೆನ್ನಾಗಿರುತ್ತದೆ ಎನ್ನುವುದು ಅನುಭವದ ಮಾತು. ಕಟ್ಟುಮಸ್ತಾಗಿ, ಬಿರುಸಾಗಿರುವ ಹರೆಯದ ಹುಡುಗರನ್ನು "ಬೀಜ ಕಿತ್ತ ಟಗರು" ಎನ್ನುವದು

ಲೋಕಾರೂಢಿಯಲ್ಲಿದೆ. ಸಾಮಾನ್ಯವಾಗಿ ಗೌರಿ, ಮಾರ್ನಮಿ ಹಬ್ಬಗಳ ಹಿಂದೆ ಮುಂದೆ ಬೀಜ ಕೀಳುತ್ತಾರೆ. ಆಗ ಎಲ್ಲಿ ನೋಡಿದರೂ ಕಣ್ತುಂಬಿಸುವಷ್ಟು ಹಚ್ಚ ಹಸಿರು ಹರಿದಾಡುತ್ತಿರುತ್ತದೆ.

ಮೊದಲು ಬೀಜದ ಮುಂದಿನ ತುದಿಯ ಚರ್ಮವನ್ನು ಕುಡ್ಲುವಿನಲ್ಲಿ ಕುಯ್ದು ಬಿಡುತ್ತಾರೆ. ಬೀಜವನ್ನು ಈಚೆಗೆ ಎಳೆದು ಹೊರ ಹಾಕುತ್ತಾರೆ. ತೆಂಗಿನ ಗರಿಯ ಸುಳಿಯನ್ನು ಚರ್ಮಕ್ಕೆ ಸುತ್ತಿ ಬಿಡುತ್ತಾರೆ. ಮೊದಲೇ ಮಾಡಿಟ್ಟುಕೊಂಡಿದ್ದ ಕರಿಗಣಿಕೆ ಸೊಪ್ಪಿನ ರಸವನ್ನು ಆ ಗಾಯಕ್ಕೆ ಹಚ್ಚುತ್ತಾರೆ. ಮುಂದೆ ನಾಲ್ಕಾರು ದಿನ ಮಳೆಯಲ್ಲಿ, ನೀರಿನಲ್ಲಿ ನೆನೆಯದಂಗೆ ನೋಡಿಕೊಳ್ಳುತ್ತಾರೆ. ಅಲ್ಲಿಗೆ ಮುಗಿಯಿತು ಬೀಜ ಕೀಳುವ ಕ್ರಿಯೆ. ಈ ಆಧುನಿಕ ಕಾಲದಲ್ಲಿ, ಆಸ್ಪತ್ರೆಗಳ ವೈಜ್ಞಾನಿಕ ಕಸಿ ಮಾಡುವ ಯುಗದಲ್ಲಿ ಮಾಕಳ್ಳಿ ಪಾಳ್ಯದ ಕಟ್ಟೆ ರಂಗಪ್ಪನಿಗೆ, ಬೀಜ ಕೀಳುವುದಕ್ಕೆ ಈಗಲೂ ಬಹಳ ಬೇಡಿಕೆಯಿದೆ.

❑






## ಫಲ ಮಾರೋದು

ಎರಡು ಮೂರು ಬಾರಿ ಈದಾಗಲೂ ಅದರ ಮರಿಗಳು ಸಾಯುತ್ತಿರುತ್ತವೆ. ಅದನ್ನು ಮರಿಕಡ್ಡ ಎನ್ನುತ್ತಾರೆ. ಅಂಥ ಕುರಿಯನ್ನು ಮಾರುತ್ತಾರೆ. ನಾಲ್ಕು ಐದು ಸೂಲು ಮರಿಗಳನ್ನು ಹಾಕಿ, ಮುಂದಿನ ಸಲ ಕುರಿ ಈಯಲು ಶಕ್ತಿ ಸಾಲದು, ವಯಸ್ಸು ಮೀರಿದೆ ಎನ್ನಿಸಿದರೆ ಅದನ್ನು ಬಲ್ಕಿ ಕುರಿ ಎಂದು ಮಾರುತ್ತಾರೆ.

ಒಬ್ಬನ ಕುರಿಗಳು ಚೆಂದಾಗಿ ಬಂದಿರುತ್ತವೆ. ಅವನಿಗೆ ಕಾಯುವುದಕ್ಕೆ ಸಾಧ್ಯವಾಗದಷ್ಟು ಹೆಚ್ಚಾಗುತ್ತವೆ. ಖಾಯಸ್ಸುದಾರ ಬಂದು 'ಆಳೋ ಕುರಿ ಕೊಡ್ರಿ' ಅಂತಾನೆ. ಆವಾಗ ಪ್ರಾಯದ ಒಳ್ಳೆಯ ಕುರಿಗಳನ್ನು ಮಾರುತ್ತಾರೆ. ಆಗ ಮಾತ್ರ ನಿಖರವಾದ ಬೆಲೆಗೆ ವ್ಯಾಪಾರ ಮಾಡುತ್ತಾರೆ. ಆದರೆ ಬಲ್ಕೆ ಕುರಿ ಮರಿಕಡ್ಡ ಕುರಿ ಇವುಗಳನ್ನು ಮಾರ್ಕೆಟ್ ರೇಟಿಗೆ ಕೊಟ್ಟುಬಿಡುತ್ತಾರೆ ; ತೀರಾ ಕಂಡೀಷನ್ (ಚೌಕಾಶಿ) ಮಾಡುವುದಿಲ್ಲ.

ಮಾರ್ನಾಮಿ, ಗೌರಿಹಬ್ಬಗಳ ಹಿಂದೆ ಮುಂದೆ ಹುಟ್ಟಿದ ಮರಿಗಳನ್ನು ಜೂನ್-ಜುಲೈನಲ್ಲಿ ಮಾರ್ತಾರೆ. ಆದರಲ್ಲೂ ಪಟ್ಲಿಗಳನ್ನು ಮಾರುತ್ತಾರೆ. ಇದಕ್ಕೆ ಫಲ ಮಾರುವುದು ಎನ್ನುತ್ತಾರೆ. ಯಾಕೆಂದರೆ ಜೂನ್-ಜುಲೈ ನಂತರ ಸ್ನಾನೆ ಶುರುವಾಗುತ್ತದೆ. ಆಗ ಮರಿಗಳು

ಜಗ್ಗುತ್ತಾ ಬರುತ್ತವೆ. ಜೂನ್‌ನಲ್ಲಿದ್ದ ಪಶಿಮ ವಿಶಾತಿ ಮಳೆಯಲ್ಲಿ ಇರುವುದಿಲ್ಲ. ಅದಕ್ಕೆ ಜೂನ್-ಜುಲೈ ತಿಂಗಳಿನಲ್ಲಿ ಫಲ ಮಾರಿಬಿಡುತ್ತಾರೆ.

ಕುಲ್ಪು ಬಿದ್ದಿದ್ದು, ಮರಿ ಹೂಡದಿದ್ದು, ಬಲ್ಡ ಗುರಿ, ಮುದಿಗುರಿ, ಕಳ್ಳಗುರಿ, ಸಿಡುಗುಂಗಳನ್ನು ಕಳಪೆ ಕುರಿಗಳೆಂದು ಮಾರುತ್ತಾರೆ. ಬೀಜಕ್ಕೆ ಚೆನ್ನಾಗಿರುವುದನ್ನು ಇಟ್ಟುಕೊಂಡು, ಹುಟ್ಟಿದ ಪಟ್ಲಿಗಳನ್ನೆಲ್ಲಾ ಮಾರುತ್ತಾರೆ. ಎರಡು ಸಾವಿರ ಕುರಿ ಕಾದ್ರೆ, ೩೦೦ ಕುರಿಗಳನ್ನು ಮಾರ್‍ತಾರೆ, ಒಂದೂವರೆ ತಿಂಗಳಿನ ಮರಿ ೧೦೦೦-೧೨೦೦ ರೂ.ಗಳಿಗೆ ಮಾರಾಟವಾಗುತ್ತದೆ.

□



## ಕುರಿ ಕತ್ತರಿಸುವುದು

**ಕೆ**ರೆ ಕುರಿ ತುಪ್ಪಟ ಜಾಸ್ತಿ ವರ್ಷಕೆರಡು ಬಾರಿ ಕತ್ತರಿಸಲೇಬೇಕು. ಇಲ್ಲದಿದ್ರೆ ನೀರು ಹಿಡಿದು ಜಳ್ಳಾಗುತ್ತವೆ, ಖಂಡ ಕೂಡುವುದಿಲ್ಲ. ತುಪ್ಪಟವನ್ನು ವರ್ಷದಲ್ಲಿ ಎರಡು ಬಾರಿ ಕತ್ತರಿಸುತ್ತಾರೆ. ಒಂದು ಕಾರುಗುಯ್ಲು, ಇನ್ನೊಂದು ಮಾಗಿ ಕುಯ್ಲು. ಕಾರಹಬ್ಬದ ಮೂಲಾನಕ್ಷತ್ರದ ಮುಂದಿನ ದಿನಗಳಲ್ಲಿ ಕುರಿಗಳನ್ನು ನೀರಿಗೆ ಹಾಕಿ ಕಾರಗುಯ್ಲು ಮಾಡುತ್ತಾರೆ. ಸಂಕ್ರಾಂತಿ ಹಬ್ಬದ ನಂತರ ಸೂರ್ಯ ಸ್ವಾಮಿ ರಥ ಏರಿ ಹೊರಟಾಗ, ಹುತ್ತಕ್ಕೆ ಹಾಲು ಬಿಟ್ಟು ಕುರಿ ಕತ್ತರಿಸುತ್ತಾರೆ. ಇದನ್ನು ಕುರಿ ಕಣಕ್ಕೆ ಕೂಡುವುದು ಎನ್ನುತ್ತಾರೆ.

**ಕತ್ತರಿಸುವ ಶಾಸ್ತ್ರ :** ಜಾಡಿ ಹಾಸಿ ಉದಿ ಮಾಡಿ, ಕುರುಬಗೌಡ್ರ ಕೈಯಲ್ಲಿ ಜಾಡಿ ಮೇಲೆ ಎಲೆ, ಕತ್ತರಿ, ಕುರಿ ಕಾಯೋ ಕೋಲು, ಹಣ್ಣು-ಕಾಯಿ, ಇಟ್ಟು ಕಡ್ಡಿ-ಕರ್ಪೂರದಲ್ಲಿ ಪೂಜೆ ಮಾಡಿ, ಬಂದವರಿಗೆ ವೀಳ್ಯದೆಲೆ ತಿದ್ದಿ, ಕುರುಬನಿಗೆ ಒಂದೆಲೆ ಅಡಿಕೆ ಕೊಟ್ಟು, ಕತ್ತರಿ ಕೊಟ್ಟು, ಅದನ್ನು ಗೊಲ್ಲರೋನು ತೆಗೆದುಕೊಂಡು ಆಮೇಲ ಕಣ ಕೂಡಿಕೊಳ್ಳುತ್ತಾರೆ. ಕತ್ತರಿಸೋದು ಮುಗಿದ ಮೇಲೆ ಹಾಲು, ತುಪ್ಪ, ಬೇವಿನ ಪತ್ರೆ, ಬ್ಯಾಟೆ ಪತ್ರೆ ಹರಿವಾಣಕ್ಕೆ ಹಾಕಿ

ಒಲೀಗ ಸ್ವಾಮಿ ಒಲೀಗ
ಉಂಡಾಳು ಪದ್ದಣ್ಣ ಒಲೀಗ

ಜನ ಸಾವಿರ, ಜಾಲ ಸಾವಿರ
ಕರಿಕಲ್ಲ ದೇವರದು ಬಿಳಿ ಕುರಿ
ಬಾಲದೇವರದು ಕುಂಟು ಕುರಿ
ಕುಂಟು ಕುರಿ ಎಂಟು ಮರಿ ಈಯ್ಲೋsss

ಎಂದು ಮೂರು ಸೊಲ್ಲು ಹೇಳಿ ಎಲ್ಲಾ ಕುರಿಗಳ ಮೇಲೆ ಚಿಮುಕಿಸಿಕೊಂಡು ಬರುತ್ತಾನೆ. ಕುರುಬರು ಕುರಿ ಕೊಟ್ಟಿದ್ದು ಎಂಬ ನಂಬಿಕೆ ಗೊಲ್ಲರಿಗಿದೆ. ಹಾಗಾಗಿ ತುಪ್ಪಟ ಕತ್ತರಿಸಿದ ನಂತರ ಕುರುಬ ಕುರಿ ಎಣಿಸುತ್ತಾನೆ. ನಂತರ ಹಾಲು ತುಪ್ಪದಲ್ಲಿ ಕುರುಬನಿಗೆ ಉಣ್ಣುವುದಕ್ಕೆ ಇಡುತ್ತಾರೆ. ಸಾರು ಪಾರು ಇಡಲ್ಲ ಅವತ್ತು. ಇದನ್ನೇ ಕುರುಬರು ಮತ್ತು ಗೊಲ್ಲರ ನಡುವೆ ಹಾಲು ಭಾಷೆ–ನೀರು ಭಾಷೆ ಆಗಿದೆ ಎನ್ನುವುದು. ತಲೆಮುಂಡೆ ಸೋಮವಾರ ಮಾಡುವುದಿಲ್ಲ.

ಕುರಿ ಕತ್ತರಿಸುವುದಕ್ಕೆ ಬಲ ಮತ್ತು ಧೈರ್ಯ ಎರಡೂ ಬೇಕು. ಒಂದು ಕುರಿಯ ತುಪ್ಪಟವನ್ನು ಕತ್ತರಿಸುವಾಗ ಏಳು ಸಾರಿ ಎದ್ದು ಏಳು ಸಲ ಕೂರಬೇಕು. ಕುರಿಯನ್ನು ಏಳು ಮಗ್ಗಲುಗಳಲ್ಲಿ ಹಿಡಿದು ಕತ್ತರಿಸುತ್ತಿರಬೇಕು. ಕೈ ಕಾಲು ಹಿಡಿತದ ಜೊತೆಯಲ್ಲಿ ಕತ್ತರಿ ಆಡುತ್ತಿರಬೇಕು. ಇತ್ತೀಚೆಗೆ ಕುರುಬರು ಈ ಕಾರ್ಯಕ್ಕೆ ಆಸಕ್ತಿ ತೋರಿಸುತ್ತಿಲ್ಲದ ಕಾರಣಕ್ಕೆ ಯಂತ್ರದಿಂದ ಕತ್ತರಿಸುತ್ತಿದ್ದರೂ ಕುರಿಯವರಿಗೆ ಈ ವಿಧಾನದ ಬಗ್ಗೆ ಸಮಾಧಾನವಿಲ್ಲ.

❑



## ಕಾಯಿಲೆ ಅಡ್ಡಗಟ್ಟುವುದು

ಕುರಿಗಳಲ್ಲಿ ಕಾಯಿಲೆಯಾದರೆ ಈಗಲೂ ಕುರಿಗಾರರು ಎಲ್ಲಾ ಕುರಿಗಳಿಗೂ ಚಿಕಿತ್ಸೆ ನೀಡಲು ಕೇಳುತ್ತಾರೆ. ಅವರಿಗೆ ಕಾಯಿಲೆ ಬೇರೆ ಕುರಿಗಳಿಗೆ ಹರಡುವುದನ್ನು ತಡೆಗಟ್ಟುವುದರಲ್ಲಿ ಮಹತ್ವ ತಿಳಿದಿದೆ. ಹಾಗಾಗಿ ಹಲವಾರು ಪಾರಂಪರಿಕ ಕ್ರಮಗಳನ್ನು ಕಾಯಿಲೆ ಅಡ್ಡಗಟ್ಟುವುದಕ್ಕೆ ಬಳಸುತ್ತಾರೆ.

ಬಾಲದೇವರಹಟ್ಟಿ ಬಡಜ್ಜ ಹೇಳುವಂತೆ, ಕುರಿಗಳಿಗೆ ಯಾವುದೇ ಕಾಯಿಲೆ ಬರದಂತೆ ತಡೆಗಟ್ಟಲು ಕತ್ತಾಳೆ ಪಟ್ಟೆಯನ್ನು ಬೆಂಕಿಗೆ ಹಿಡಿದು ಹಿಂಡಿ, ಮೆಣಸು, ಬೆಳ್ಳುಳ್ಳಿ, ಯಾಲಕ್ಕಿ, ಲವಂಗ – ಇಂಥದ್ದೆಲ್ಲಾ ಹಾಕಿ ಬಿಟ್ಟು, ಅದರಲ್ಲಿ ಕಾಡು ಮೆಣಸಿನ ಸೊಪ್ಪನ್ನು ಹಾಕಿ ಕುರಿಗಳಿಗೆ ಕುಡಿಸುತ್ತಿದ್ದರು. ಇದು ಆರು ತಿಂಗಳು ಕುರಿಗಳ ತಲೆ ಕಾಯುವುದು. "ಇದು ನಿಮ್ಮ ಮಾತ್ರೆ–ಇಂಜೆಕ್ಷನ್‌ಗೆ ಸಮ" ಎನ್ನುತ್ತಾರೆ ಬಡಜ್ಜ.

ಈ.ಟಿ. ಕಾಯಿಲೆ : ಕುರಿಗಳಲ್ಲಿ ಬರುವ ಕರುಳು ಬೇನೆ ಕಾಯಿಲೆಗೆ ಎಂಟಿರೋಟಾಕ್ಸಾಮಿಯ ಎಂದು ಇಂಗ್ಲಿಷಿನಲ್ಲಿ ಕರೆಯುತ್ತಾರೆ. ಅದನ್ನು ಸಂಕ್ಷಿಪ್ತವಾಗಿ ಈ.ಟಿ. ಎನ್ನುವದು ರೂಢಿಯಲ್ಲಿದೆ. ಅದನ್ನೇ ನಮ್ಮ ಕುರಿಗಾರರು ಈಟಿ ಕಾಯಿಲೆ ಎಂದು ಇತ್ತೀಚೆಗೆ ಕರೆಯುತ್ತಿದ್ದಾರೆ. ಇದು ಮುಂಗಾರಿನ ಮಳೆಯಲ್ಲಿ ಕಾಣಿಸಿಕೊಳ್ಳುತ್ತದೆ. ಈ

ಕಾಯಿಲೆ ಬಂದಾಗ ಕಮರದ ಎಲೆ ತಿಂದರೆ ಕಂಟ್ರೋಲ್ ಆಗುತ್ತೆ ಎನ್ನುವುದು ಕುರಿಗಾರರ ನಂಬಿಕೆ. ಈ ಕಾಯಿಲೆ ತಡೆಗಟ್ಟಲು ಲಸಿಕೆ ಹಾಕಿಸುವ ಮುನ್ನ ಬೀಳು ಮೊಳಿಕೆ, ಹುರುಳಿ ಸೊಪ್ಪು ತಿಂದರೆ ದಡಬಡ ಸಾಯುತ್ತವೆ. ಲಸಿಕೆ ಮಾಡಿಸಿದ ೧೦-೧೨ ದಿನ ಕಳೆದು ಹುರುಳಿಸೊಪ್ಪಿಗೆ ಕುರಿಗಳನ್ನು ಕೂಡಿದರೆ ಸಾಯುವುದಿಲ್ಲ ಎನ್ನುವುದು ಅವರ ಅನುಭವ. ಹಾಗಾಗಿ ಲಸಿಕೆ ಮಾಡಿಸುವ ಮುನ್ನ ಹುರುಳಿ ಹೊಲಕ್ಕೆ ಬಿಡಬಾರದು. ಇದು ದುಗ್ಗಾಣಿಹಟ್ಟಿ ಕುಳ್ಳಪ್ಪನವರ ಅನುಭವ.

ಈಟಿ ಕಾಯಿಲ ತಡೆಗಟ್ಟುವುದಕ್ಕೆ ಚಳ್ಳಕೆರೆ ತಾಲೂಕಿನ ಒಬೇನಹಳ್ಳಿ ಹಟ್ಟಿ ಕೃಷ್ಣಮೂರ್ತಿ ಅನುಸರಿಸುವ ವಿಧಾನ ಬೇರೆಯದು. ಮೇಟುಳ್ಳಿ ಸೊಪ್ಪನ್ನು ಕುಟ್ಟಿ ತಂಗಡಿ ಕಟ್ಟಿಗೆಯಲ್ಲಿ ಹೊಗೆ ಹಾಕುತ್ತಾರೆ. ಸೊಪ್ಪು ಜಾಸ್ತಿ ಹಾಕಿದರೆ ಕಾಯಿಲೆ ಜಾಸ್ತಿಯಾಗುತ್ತದೆ.

ಈಟಿ ಕಾಯಿಲೆ ಬಂದಾಗ ಈಗಲೂ ಮಾಡುತ್ತಿರುವ ಸಾಂಸ್ಕೃತಿಕ ಆಚರಣೆ ಚಳ್ಳಕೆರೆ ತಾಲೂಕಿನಲ್ಲಿ ಹೀಗಿದೆ. ಕರಳು ಬೇನೆಯ ಕುರಿ ಸತ್ತಾಗ ಪೂಜೆ ಮಾಡಿ ಹೂಣುತ್ತಿದ್ದರು. ಇಲ್ಲದಿದ್ದರೆ ಹುತ್ತದ ಮೇಲೆ ತೆಗೆದುಕೊಂಡು ಹೋಗಿ ಪೂರ್ತಿ ಸುಡುತ್ತಿದ್ದರು. ಈಗಲೂ ಇದನ್ನು ಆಚರಿಸುತ್ತಾರೆ. ಸತ್ತ ಕುರಿಯ ತಲೆ ಕಾಲು ತೊಳೆದು, ಪೂಜೆ ಮಾಡಿ ಹುತ್ತದ ಸುತ್ತ ಮೂರು ಸುತ್ತು ತಿರುಗಿಸಿ ಹುತ್ತದ ಮೇಲೆ ಮೈಮೇಲಿನ ಚರ್ಮ ಎಲ್ಲಾ ಹೋಗುವಷ್ಟು ಪೂರ್ತಿ ಸುಟ್ಟು, ಅದನ್ನು ಮನೆಗೆ ತಂದು, ಅಡಿಗೆ ಮಾಡಿಕೊಂಡು ತಿಂದು, ಉಳಿದಿದ್ದದ್ದನ್ನು ಬೇರೆಲ್ಲಿಯೂ ಚೆಲ್ಲುವುದಿಲ್ಲ. ಗುಂಡಿ ತೆಗೆದು ನಾಯಿಗೆ ಸಿಗದಂತೆ ಹೂತುಬಿಡುತ್ತಾರೆ. ಒಂದೇ ಸಾರಿ ಊಟ ಮಾಡಿ ಮುಗಿಸಿ ಬಿಡುತ್ತಾರೆ.


ಜರಸಲು : ಕಾಲು ಬಾಯಿ ಜ್ವರಕ್ಕೆ ಜರಸಲು ಎನ್ನುತ್ತಾರೆ ಆಡುಭಾಷೆಯಲ್ಲಿ. ಜರಸ್ಲು ಬರುವುದಕ್ಕೆ ಮುಂಚೆ ಕುರಿಹಟ್ಟಿ ಉದಿಗೆ ಕಳ್ಳಿ ಸೊಪ್ಪು ಹಾಕುತ್ತಾರೆ. ಅದನ್ನು ತುಳಿದುಕೊಂಡು ತಿಂಗಳಗಟ್ಟಲೆ ಓಡಾಡುತ್ತವೆ ಕುರಿಗಳು. ಕುರಿಗಳಲ್ಲಿ ಜರಸ್ಲು ಕಾಣಿಸಿಕೊಂಡಾಗ ರಸಬಾಳೆ ಕರ್ಪೂರ, ಹಂದಿ ತುಪ್ಪವನ್ನು ಕಲೆಸಿ, ನಾಲಿಗೆಗೆ ನೊರೆಯುತ್ತಾರೆ ಒಂದು ದಿನ. ಆಗ ಅದಕ್ಕೆ ನೋವು ಕಡಿಮೆಯಾಗಿ ಮೇಯುತ್ತದೆ.

ಅಮ್ಮನ್ನ ಕಳಿಸಿಬರುವುದು :


ಅಮ್ಮ ಅಂದರೆ ಸಿಡುಬು ಕಾಣಿಸಿಕೊಂಡಾಗ ಒಂದು ಕುಡಿಕೆಯಲ್ಲಿ ಬೆಲ್ಲ, ಮೂರು ತರದ ಧಾನ್ಯ, ಬೇವಿನ ಸೊಪ್ಪು, ಅಂಗನೂಲು ದಾರ ಎಲ್ಲಾ ಹಾಕಿ ಕುರಿ ಹೊಡಕೊಂಡು ಹೋಗಿ ಬಾರೆ ಮೇಲೆ ದಾಟಿಸಿ, ಕುರಿ ಸುತ್ತಿಸಿ, ಬೇವಿನ ಗಿಡದ ಕೆಳಗೆ ಇಟ್ಟು ಬರುತ್ತಾರೆ. ಅಮ್ಮ ಕಾಣಿಸಿಕೊಂಡಾಗ ಮಂಗಳವಾರ, ಶುಕ್ರವಾರ ಮತ್ತೆ ಮಂಗಳವಾರ – ಹೀಗೆ ಮೂರು ದಿನ ಮಾಡುತ್ತಾರೆ. ಒಂದು ಬ್ಯಾಟೆ ಗಿಡಕ್ಕೆ ಮರಿ ಕಡಿದುಕೊಂಡು ಬರುತ್ತಾರೆ. ಅಲ್ಲಿಗೆ ಶಾಸ್ತ್ರ ಮುಗಿಯುತ್ತದೆ.

ಕಾಯಿಲೆ ಕಡಿಮೆಯಾದ ಮೇಲೆ ಒಂದು ಮರಿಯನ್ನು ಪೂಜೆ ಮಾಡಿ ಹೊರಗಡೆ









ಬಿಟ್ಟು ಬರುತ್ತಾರೆ. ಅದು ಎಲ್ಲಿಗೆ ಬೇಕಾದರೂ ಹೋಗಬಹುದು. ಅದನ್ನು ಯಾವಾದಾದರೂ ಕುರಿ ಹಿಂಡಿಗೆ ಸೇರಿಸಿಕೊಳ್ಳಬಹುದು.

**ಕೆಮ್ಮು-ದಮ್ಮು :**

ಮುಂಗರಬಳ್ಳಿ ಮತ್ತು ಎರಡು ಮೆಣಸು-ಇಷ್ಟನ್ನು ಹುಯ್ದರೆ ಕೆಮ್ಮು ಹೋಗ್ತಾ ಇತ್ತು ಎನ್ನುತಾರೆ ಈರಜ್ಜ.

ದಮ್ಮಿಗೆ ತಮ್ಮದೇ ಬೇರೆಯಾದ ಔಷಧಿ ಕ್ರಮ ರೂಢಿಸಿಕೊಂಡು ಬಂದಿದ್ದಾರೆ. ಪರಶುರಾಂಪುರದ ಕೃಷ್ಣಮೂರ್ತಿ. ಜಮ್ನನೇರಳೆ ಚಕ್ಕೆ, ಬಾರೆ ಚಕ್ಕೆ, ಮರಮೇಡಿ ಚಕ್ಕೆ, ರಕ್ತದ ಬೇಟೆ, ನೆಲ ತಂಟೆಗೆ, ಮೂರು ಕಾಯಿ, ಕೆಂಪು ಬೂತಾಳೆ, ಎದುರುಮುಳ್ಳು, ಬೆಟ್ಟದ ನಿಂಬೆ, ದೊಡ್ಡಕಾಯಿ ಇವೆಲ್ಲವನ್ನೂ, ಆಕಳ ತುಪ್ಪದಲ್ಲಿ ನೆನೆಹಾಕಿ, ತಂಗಟೆ ಕಟ್ಟಿಗೆಯಲ್ಲಿ ಹೊಗೆ ಹಾಕಿದರೆ ದೊಮ್ಮು ಕಡಿಮೆಯಾಗುತ್ತದೆ ಎನ್ನುತ್ತಾರೆ ಕೃಷ್ಣಮೂರ್ತಿ. ಕುರಿ ಚೆನ್ನಾಗಿ ಮೇಯ್ದು, ಮೈ ಕೈ ತುಂಬಿಕೊಳ್ಳುವುದಕ್ಕೆ ಎದುರು ಮುಳ್ಳು, ಬೆಟ್ಟದ ನಿಂಬೆ, ರಕ್ತದ ಬೇಟೆ, ಕರೆ ಬಳ್ಳಿ, ಬಿಳಿ ಹುಗುಣೆ – ಇವನ್ನು ಹೊಗೆ ಹಾಕಿದರೆ ಮೈಯಿ ಬರುತ್ತದೆ ಎನ್ನುತ್ತಾರೆ. ಕೃಷ್ಣಮೂರ್ತಿ ಬಳಸುವ ಎಲ್ಲಾ ಔಷಧಿಗಳನ್ನು ಕುಡಿಸುವುದಕ್ಕಿಂತ ಹೊಗೆ ಹಾಕುವುದೇ ಹೆಚ್ಚು. ಹೊಗೆ ಬಹಳ ಪರಿಣಾಮಕಾರಿ ಎನ್ನುತ್ತಾರೆ.

ಜಂತು ಬೀಳುವುದಕ್ಕೆ : ಮರಾಳೆ ಚಕ್ಕೆ, ಎರಡು ತೊಡೆ ಚಕ್ಕೆ, ಬೇವಿನ ಚಕ್ಕೆ, ಹುಣಿಸೆ ಚಕ್ಕೆ, ಹೊಂಗೆ ಚಕ್ಕೆ, ಬ್ಯಾಲದ ಚಕ್ಕೆ – ಇವುಗಳನ್ನೆಲ್ಲಾ ಕುಟ್ಟಿ ತೊಗರಿ ಕಾಳು

ಬೇಯಿಸಿ ಕಟ್ಟು ತೆಗೆದು, ಸಾಂಬಾರ ಪದಾರ್ಥಗಳು, ಸಮುದ್ರದ ನೊರೆ ಹಾಕಿ ರಾತ್ರಿಯೆಲ್ಲ ಕುದಿಸಿ, ಒಂದು ಗ್ಲಾಸ್ ಬೆಳಿಗ್ಗೆ ಕುರಿಗಳಿಗೆ ಹಾಕಿದಿರೆ ಜಂತು ಬೀಳುತ್ತದೆ. ಮತ್ತೆ ಕುರಿಗಳು ಚೆಂದವಾಗುತ್ತವೆ ಎನ್ನುವುದು ಕೃಷ್ಣಮೂರ್ತಿಯವರ ನಂಬಿಕೆ. ಅವರ ಕುರಿಗಳು ಹುಟ್ಟಿದ ಒಂದು ತಿಂಗಳಿಗೆ ಎಳು ಕೆ.ಜಿ ಬಂದಿರುವುದನ್ನು ಖಚಿತಪಡಿಸುತ್ತಾರೆ.


ಇನ್ನೊಂದು ಮುಖ್ಯ ಔಷಧಿ ಹೇಳುತ್ತಾರೆ ಕೃಷ್ಣಮೂರ್ತಿ. ತಪಸೆ ಸೊಪ್ಪು, ಜಾಲಿ ಸೊಪ್ಪು, ಬೂದಿ ಹಲಬು ತಿನ್ನಿಸಿದರೆ ಮರಿಗಳು ನೆಣಕಟ್ಟಿ ಸಾಯುತ್ತವೆ. ಅಂದರೆ ಅಷ್ಟು ಚೆನ್ನಾಗಿ ಬೆಳೆಯುತ್ತವೆ ಎಂದು ಅರ್ಥ. ಮೇಟುಳ್ಳಿ ಸೊಪ್ಪನ್ನು ಕುರಿ ಮೈಮೇಲೆ ಹಾಕುತ್ತಾರೆ. ಕುರಿ ಚೆನ್ನಾಗಿ ಮೇಯುತ್ತವೆ. ಕೊಕ್ಕರಿ ಬಳ್ಳಿಯನ್ನು ಹಾಲು ಉತ್ಪಾದನೆಗೆ, ಮುಂಗಾರಿನಲ್ಲಿ ಒಂದು ಸಾರಿ ತಿನ್ನಿಸುತ್ತಾರೆ.

ಮಳೆಗಾಲದಲ್ಲಿ ಶೀತ ಜಾಸ್ತಿಯಾದಾಗ ಕೆಳಕಂಡ ಕ್ರಮವನ್ನು ಅನುಸರಿಸುತ್ತಾರೆ. ಸಜ್ಜೆ, ಅರ್ಕ, ಬಿಳಿ ಜೋಳ – ಈ ಮೂರರಲ್ಲಿ ಯಾವುದಾದರೂ ಒಂದನ್ನು ಅನ್ನ ಮಾಡಿ ಬಿಳಿ ಜೋಳದ ಸೊಪ್ಪನ್ನು ಕಲಸಿ, ಮುಸುರೆ ಮಾಡಿಕೊಂಡು ಚೆಲ್ಲಿದರೆ ಶಾಖ ಬರುತ್ತದೆ. ಯಾವಾಗಲೂ ಪರಶುರಾಂಪುರದ ಕೃಷ್ಣಮೂರ್ತಿ ನಾಟಿ ಔಷಧಿಯನ್ನು ಕುಡಿಸುವುದಿಲ್ಲ. ರೊಪ್ಪದಲ್ಲಿ ಯಾವ ಕಡೆ ಗಾಳಿ ಬೀಸುತ್ತಿರುತ್ತದೋ ಅದರ ವಿರುದ್ಧ ದಿಕ್ಕಿನಲ್ಲಿ ಕೆಂಡಮಾಡಿ, ಆ ಗಾಳಿ ಇಡೀ ಕುರಿ ಹಿಂಡಿನ ಮೇಲೆ ಹಾದು ಹೋಗುವಂತೆ ವ್ಯವಸ್ಥೆ ಮಾಡುತ್ತಾರೆ.

ಹಿಂದೆಲ್ಲಾ ಡಾಕ್ಟರು ಎಲ್ಲಿದ್ದರು ? ಎನ್ನುವ ಅರ್ಥಪೂರ್ಣ ಪ್ರಶ್ನೆ ಹಾಕುತ್ತಾ ನಾಟಿ ಔಷಧಿಯ ತಮ್ಮ ಅನುಭವ ಹಲವರು ಹೇಳುತ್ತಾರೆ ಹಂದನಕೆರೆಯಲ್ಲಿ ಲಕ್ಷ ಶೆಟ್ಟಿ ನಿಂಗಣ್ಣ, ಬಂದಕ್ಕಜ್ಜಿ ಕೆಂಪಣ್ಣ ಅಂತ ಇದ್ದರು. ಅವರು 'ಗಿಡ' ಅಂತ ಸುಡೋರು. ಅರಸೀಕರೆ ಕಲ್ಲಿ ಗುಡ್ಡದಲ್ಲಿ ಗಿಡಮೂಲಿಕೆ ತರುತ್ತಿದ್ದರು. ಹದ್ದಿನ ಗೂಡು, ಹುಣಿಸೆ ಬಂದ್ರೆ, ಅರಳಿ ಬಂದ್ರೆ, ತಂಗಡೆ ಕಡ್ಡಿ – ಇವುಗಳನ್ನೆಲ್ಲಾ ತಂದು ಕುರಿಗಳಿಗೆ ಹೊಗೆ ಹಾಕುತಿದ್ದರು. ಈ ಹೊಗೆಯಿಂದ ಕುರಿಗೆ ರೋಗ ನಿವಾರಣೆ ಆಗುವುದು ಎನ್ನುವುದು ಹಲವರ ಅನುಭವ. ಈ ಕೆಲಸವನ್ನು ಮಳೆ ಬರುವುದಕ್ಕೆ ಮುನ್ನ ಎಪ್ರಿಲ್–ಮೇ ತಿಂಗಳುಗಳಲ್ಲಿ ಮಾಡುತ್ತಿದ್ದರು.

**ಬಂಡೆ ಮೇಲೆ ಉಪ್ಪು :** ದೇಶಕ್ಕೆ ಹೋದಾಗ ಅಲ್ಲಿನ ಹುಲ್ಲೆಲ್ಲಾ ಸಪ್ಪೆ. ನೀರಾವರಿ ಜಾಗ ಅದು. ಚೌಳು ನೀರು ಅಲ್ಲಿ ಸಿಕ್ಕುವುದಿಲ್ಲ. ನೂರು ಕುರಿಗೆ ನಾಲ್ಕು ಕೆಜಿ ಉಪ್ಪನ್ನು ಹಾಕುತ್ತೇವೆ. ಉಪ್ಪನ್ನು ನೀರಿನ ದಂಡೆಯಲ್ಲಿರುವ ಹಸಿರ ಹುಲ್ಲಿನ ಮೇಲೆ ಚಿಮುಕಿಸುತ್ತಾರೆ. ಆಗ ಕುರಿಗಳು ಚೆನ್ನಾಗಿ ನೆಕ್ಕಿಕೊಂಡು ತಿನ್ನುತ್ತವೆ. ಕೆಲವು ಗಂಟೆಗಳ ನಂತರ ಮತ್ತೊಮ್ಮೆ ನೀರಿಗೆ ಬಿಟ್ಟು ನೀರನ್ನು ಕುಡಿಸುತ್ತಾರೆ. ಗದ್ದೆ ಬಾರೆಯಲ್ಲಿ, ಹೊಳೆ ಸೀಮೆಯ ಹಸುರಲ್ಲಿ ಮೇಯಿಸುವಾಗ ತಿಂಗಳಿಗೊಂದಾವರ್ತಿ ಹೀಗೆ ಬಂಡೆ ಮೇಲೆ ಉಪ್ಪು ಹಾಕಿ ತಿನ್ನಿಸುತ್ತಾರೆ.

❑



## ಮರಿಯಾಪಾರ

ಆಡು-ಕುರಿ ಸಂತೆಯನ್ನು ಮರಿ ಸಂತೆ ಎನ್ನುತ್ತಾರೆ. ಸಾಮಾನ್ಯವಾಗಿ ವಾರಕ್ಕೊಂದು ಸರಿ ನಡೆಯಲಿರುವ ಈ ಸಂತೆಗೆ ಮರಿಯಾಪಾರ ಮಾಡಲೆಂದೇ ನೂರಾರು ಜನ ಸೇರುತ್ತಾರೆ. ಕುರಿಯ ಬೆಳವಣಿಗೆ, ತೂಕವನ್ನು ಕೇವಲ ಕುರಿಯ ನಡುವನ್ನು ಹಿಡಿದುಕೊಳ್ಳುವ ಮೂಲಕ ಅಂದಾಜು ಮಾಡುತ್ತಾರೆ. ಕುರಿ ನಡು ಕೈ ತುಂಬಾ ಸಿಕ್ಕಿದರೆ, ಅಂದರೆ ಹಣ್ಣಿನಂತೆ ಕೈಗೆ ಸಿಕ್ಕರೆ ಅದು ಕೊಬ್ಬಾಗಿದೆ ಅಂತ ಅರ್ಥ. ಮೂಳೆಮೂಳೆಯಂತೆ ಕೈಗೆ ಸಿಕ್ಕರೆ ಕುರಿ ಪ್ರಯೋಜನವಿಲ್ಲವೆಂದು ತಿಳಿದುಕೊಳ್ಳಬಹುದು. ಕುರಿ ಎತ್ತರವಾಗಿ ಬೆಳೆಯದಿದ್ದರೂ, ಚಿಕ್ಕ ಮರಿಗಳ ನಡು ಕೈ ತುಂಬಾ ಸಿಗಬೇಕು, "ಬೆನ್ನುರಿ ನರದ ಮೇಲಿನ ನಡು ಹಣ್ಣಿನ ಥರ ಸಿಕ್ಕಿದರೆ ಒಳ್ಳೆ ಚರ್ಬಿಯಾಗಿರುತ್ತೆ ಮೂಳೆಯಾಗಿದ್ರೆ, ಒಳಗೆ ಚರ್ಬಿ ಇರುವುದಿಲ್ಲ. ಕೈ ತುಂಬಾ ಸಿಕ್ಕಿ ಮೃದುವಾಗಿದ್ದರೆ, ಮರಿ ೨೦೦೦ ರೂಪಾಯಿ ಮೇಲೆ ಯಾಪಾರವಾಗುತ್ತದೆ" ಎನ್ನುತ್ತಾರೆ ಮರಿಯಾಪಾರದಲ್ಲಿ ಅನುಭವಸ್ಥರಾದ ಅರಳಘಟ್ಟದ ಶಿವಣ್ಣ.

ಹೀಗೆ ನಡು ಹಿಡಿಯೋದರಲ್ಲಿ ಹೆಚ್ಚು ಕಡಿಮೆ ತೂಕವನ್ನು ಅಂದಾಜು ಮಾಡುತ್ತಾರೆ. ಬೆನ್ನಿನ ಮೂಳೆಯ ಸುತ್ತ ಇರುವ ಮಾಂಸದ ಪ್ರಮಾಣವನ್ನು ಮುಖ್ಯವಾಗಿ ಪರಿಗಣಿಸಿ, ಅದರ ತೊಡೆ ಮುಂತಾದುವನ್ನು ನೋಡಿ ತೂಕದ ಅಂದಾಜು ಮಾಡುತ್ತಾರೆ.

ಮೂಳೆಯ ಮೇಲೆ ಮಾಂಸ ಇರದಿದ್ದರೆ ತೊಡೆಯಲ್ಲಿ ಮಾಂಸ ಬರುತ್ತದೆ ಎನ್ನುವುದು ಮರಿಯಾಪಾರದವರ ಅನುಭವ. ಕೆಲವು ಸಾರಿ ಕಣ್ಣ ದೃಷ್ಟಿಯಲ್ಲೂ ಅಂದಾಜು ಮಾಡುತ್ತಾರೆ. ಎದೆಗುಂಡಿಗೆ ಇಂಬಾಗಿರಬೇಕು. ತೊಡೆಯನ್ನು ಅದುಮಿ ಅಂದಾಜಿಸಬೇಕು. ಟಗರಿನ ಬೀಜದ ಹಿಂದೆ ಹಿಸುಕಿ ನೋಡುತ್ತಾರೆ. ಟಗರಿನ ಬೀಜ ಮತ್ತು ಕುರಿ ಪಿಚಿಕೆ ಹಾಕುತ್ತಲ್ಲ ಅದರ ನಡುವೆ ಹಿಚುಕಿ ನೋಡುತ್ತಾರೆ. ಅಲ್ಲಿ ಮೃದುವಾಗಿರಬೇಕು. ಆಗ ಒಳ್ಳೆ ದಳದಲ್ಲಿದೆ ಮರಿ ಎಂದು ನಿರ್ಧಾರ ಮಾಡುತ್ತಾರೆ. ಕತ್ತಿನ ಶಿರದಲ್ಲಿ ಚಪ್ಪೆಯ ಮುಂದೆ ಮಾಂಸವನ್ನು ಹಿಚುಕಿ ನೋಡುತ್ತಾರೆ. ನಡ, ತೊಡೆ, ಕತ್ತಿನ ಶಿರ–ಎಲ್ಲಾ ನೋಡುತ್ತಾರೆ. ಹುಲ್ಲು–ಗಿಲ್ಲು ಕೇಳಲ್ಲ. ಪಶಿಮ ಇಲ್ಲದೆ ಎತ್ತರ ಇದ್ದರೆ ಪ್ರಯೋಜನವಿಲ್ಲ. ಎತ್ತರ ಇದ್ದರೂ ಬರೀ ಮೂಳೆ ಇರುತ್ತದೆ. ಹಲ್ಲಾಗದಂಥ ಮರಿಗೆ ಇತ್ತೀಚೆಗೆ ಮಾರುಕಟ್ಟೆಯಲ್ಲಿ ಬೇಡಿಕೆ ಬರುತ್ತಿದೆ. ಆದರೆ ಗ್ರಾಮೀಣ ಭಾಗದಲ್ಲಿ ಹಲ್ಲಾಗಿರುವ, ಬಲಿತಿರುವ, ತೂಕವಿರುವ ಮರಿಗೆ ಅಪೇಕ್ಷೆ ಹೆಚ್ಚು ಕಂಡುಬರುತ್ತಿದೆ.

ಟಗರು ಮತ್ತು ಹೋತದ ಮಾಂಸಗಳಲ್ಲಿ ಅಪಾರ ವ್ಯತ್ಯಾಸವಿರುತ್ತದೆ. ಆಡಿನ ಮಾಂಸದಲ್ಲಿ ತಗರಿನ ಮಾಂಸದಲ್ಲಿರುಷ್ಟು ಜಿಡ್ಡಿನಾಂಶ ಇರುವುದಿಲ್ಲ. ರುಚಿಯಲ್ಲಿ ತಗರು ಮೇಲು, ಸಾಕುಮರಿಯಲ್ಲಿ ಎಳೆ ಚೆನ್ನಾಗಿರುತ್ತದೆ. ಆರು ತಿಂಗಳು ಸಾಕಿದರೆ ಒಟ್ಟು ಎರಡು ಸಾವಿರಕ್ಕೆ ಮಾರಬಹುದು. ಬಿಳಿಕುರಿ ಮಾಂಸ ರುಚಿ ಬರುತ್ತದೆ. ಕರೆ ಕುರಿ ಚಕ್ಕಳ ತೆಳಪು ಬರುತ್ತದೆ. ಬಿಳಿ ಕುರಿ ಚಕ್ಕಳ ಮಂದವಾಗಿರುತ್ತದೆ. ಕರೆ ಕುರಿ ಮಾಂಸ ಸಪ್ಪೆ ಬರುತ್ತದೆ. ಹೊಸದುರ್ಗದ ಕಡೆ ಕರೆ ಕುರಿ ಯಾಪಾರ ಜಾಸ್ತಿ. ಹೊಸದುರ್ಗ ಸಂತೆಯಲ್ಲಿ ಬಿಳಿ ಕುರಿ ಬಗ್ಗೆ ಖಾಯಸ್ಸು ಇಲ್ಲ. ಪಕ್ಕದಲ್ಲಿರುವ ಚಿಕ್ಕನಾಯಕನಹಳ್ಳಿ ಸಂತೆಯಲ್ಲಿ ಬಿಳಿ ಕುರಿ ಚೆನ್ನಾಗಿ ಮಾರಾಟವಾಗುತ್ತದೆ.

ಸಂತೆಗೆ ಬೆರಕೆ ಮೇಲ ಯಾಪಾರಕ್ಕೆ ಬರುತ್ತದೆ. ಬಲ್ಡು ಕುರಿ, ಕುಯ್ಯೋಕುರಿ, ಮರಿ ಕುರಿ ಎಲ್ಲಾ ಬರುತ್ತವೆ. ಸಾಕಾಣಿಕೆಗೆ ಮರಿ ಕುರಿಯನ್ನು ಕೊಳ್ಳುತ್ತಾರೆ. ೧೦ ಮರಿಯವರೆಗೂ ಕೊಂಡು ಸಾಕುತ್ತಾರೆ. ತಿಂಗಳಿನ ಮರಿ ನಾಲ್ಕೈದು ಕೆಜಿ ತೂಗುತ್ತದೆ. ೮೦೦–೯೦೦ ರೂಗೆ ಹೋಗುತ್ತದೆ. ಹಾಲು ಮನೆಯಲ್ಲಿ ಆಗುವಂತಿದ್ದರೆ, ಒಂದು ತಿಂಗಳಿನ ಮರಿಗಳನ್ನು ಕೊಳ್ಳುತ್ತಾರೆ. ಹಸುವಿನ ಹಾಲನ್ನು ಹಾಕಿ ಸಾಕುತ್ತಾರೆ. ಸಂತೆ ಯಾಪಾರದಲ್ಲಿ ರೈತರಿಗಿಂತ ಸಾಬರು ಮುಖ್ಯ.

❑



## ಕುರಿ ಕುಯ್ಯುವುದು

ಕುರಿ ಕುತ್ತಿಗೆಯನ್ನು ಮೊದಲು ಕುಯ್ಯುತ್ತಾರೆ. ಹಿಂದಿನ ಕಾಲನ್ನು ದಾರ ಹಾಕಿ ಮೇಲಕ್ಕೆ ನೇತಾಕಿ ಕೊಳ್ಳುತ್ತಾರೆ. ಬಾಲದ ಕುಚ್ಚು ಬಿಡಿಸಿಕೊಂಡು, ಹಿಂದಿನ ಕಾಲು, ಮುಂದಿನ ಕಾಲನ್ನು ಚಾಕುವಿನಲ್ಲಿ ಬಿಡಿಸಿಕೊಳ್ಳಬೇಕು. ನಂತರ ಕಾಲು ಅಥವಾ ಕೈಯಿನಿಂದ ಚರ್ಮವನ್ನು ಒತ್ತುತ್ತಾ ಹೋಗಿ, ಕೊನೆಗೆ ಚರ್ಮವನ್ನು ದೇಹದಿಂದ ಪ್ರತ್ಯೇಕಿಸುತ್ತಾರೆ. ಹೊಟ್ಟೆ ಬಗೆದು ಕಳ್ಳು, ಈರಿ ಎಲ್ಲಾ ಈಚೆಗೆ ಎಳೆದುಕೊಳ್ಳುತ್ತಾರೆ. ಕಳ್ಳಿನಲ್ಲಿ ಪಿಚಿಗೆ ಇರುತ್ತದೆ. ಗುದದ್ವಾರದಲ್ಲಿ ನೀರನ್ನು ಊಯ್ದರೆ ಕಲ್ಮಷವೆಲ್ಲಾ ನೀರಿನೊಂದಿಗೆ ಇಳಿಯುತ್ತದೆ.

ಬೆನ್ನಿನ ಮೇಲಿನ ಖಂಡಕ್ಕೆ ಬೀಮಿನ ಖಂಡ ಅನ್ನುತ್ತಾರೆ. ಅದು ರುಚಿ ಮತ್ತು ಮೃದು. ವಿಷದ ಚೀಲವಾಗಿರುವ ಉಚ್ಚೆ ಕಟುರು ಬಿಸಾಕುತ್ತಾರೆ. ಎಳೇ ಮಾಂಸಕ್ಕೆ ಬೇಡಿಕೆ ಹೆಚ್ಚು ಆದರೆ ಬಲ್ಕೀದು ಅಪಾರ ಜನರಿಗೆ ಒದಗುತ್ತದೆ. ಆದ್ದರಿಂದ ತಿಥಿ ಊಟಕ್ಕೆ ಬಲಿತ ಮರಿಗಳನ್ನು ಕುಯ್ಯುತ್ತಾರೆ. ಯಾಕೆಂದರೆ ಜನರಿಗೆ ಮಾಂಸದ ಪೀಸುಗಳನ್ನು ಯಥೇಚ್ಛವಾಗಿ ಬಡಿಸಬಹುದು. ಟಗರು ಮಾಂಸದಲ್ಲಿ ಜಿಡ್ಡಿನಾಂಶ ಹೆಚ್ಚಾಗಿರುತ್ತದೆ. ಆದರೆ ಮೇಕೆ ಬಾಡು ಸಪ್ಪೆಯಾಗಿರುತ್ತದೆ.

ತೊಡೆ ಬಾಡು ಚಪ್ಪರಿಸುವಂತಿರುತ್ತದೆ. ಬರೀ ಖಂಡ ಇದ್ದರೆ ಮಾಂಸ ಚೆನ್ನಾಗಿರುವುದಿಲ್ಲ. ಮಾಂಸ. ಮೂಳೆ ಎರಡೂ ಇದ್ದರೆ ಇನ್ನಷ್ಟು ರುಚಿ.

ಇನ್ನು ಚಕ್ಕಳದ ವಿಷಯಕ್ಕೆ ಬಂದರೆ, ಬಿಳಿ ಟಗರಿನ ಚರ್ಮಕ್ಕೆ ಬೇಡಿಕೆ ಇದೆ. ಮೇಕೆ ಚಕ್ಕಳ ಕಲ್ದೇವು, ಚಮ್ಮಾಳಕ್ಕೆ ಬರುತ್ತದೆ. ಅರೆ ಮಾಡಿದರ ಖಣಿಗುಟ್ಟುತ್ತದೆ. ಮೇಕೆ ಚರ್ಮ ಸಿಗಿದು ಗೂಟ ಹೊಡೆದು ಒಣಗಿಸುತ್ತಾರೆ. ರೋಮ ಎರೆದು ಹಾಕಿ ಕಾಗದದಂತೆ ಮಾಡುತ್ತಾರೆ.

❑



# ಬೇವಿನಹಳ್ಳಿ ಹಟ್ಟಿ ಕರಿದೊಡ್ಡಜ್ಜಿ : ಕುರಿ ಬದುಕಿನ ದಕ್ಕಡಗಿತ್ತಿ

ಒಮ್ಮೆ ಮೈಸೂರಿನ ಟಾರ್ ರೋಡುಗಳಲ್ಲಿ ಸಾವಿರಾರು ಕುರಿ–ಮೇಕೆಗಳು ಜಮಕಾಯಿಸಿ ನಿಂತವು. ಇಡೀ ಮೈಸೂರೇ ಕುರಿಹಟ್ಟಿಯಾಗಿ ಮಾರ್ಪಟ್ಟಿತ್ತು. ಟಾರ್ ರೋಡಿರುವುದು ಕಾರು, ಬಸ್, ಬೈಕುಗಳಿಗೆ ಮಾತ್ರ, ಆಡು ಕುರಿಗಳಲ್ಲ ಎನ್ನುವ ಪೋಲೀಸರ ನಿಲುವಿಗೆ ಕ್ಯಾರೇ ಮಾಡದೆ ಮೈಸೂರಿಗೆ ನಾವೇ ಒಡೆಯರು ಎನ್ನುವಂತೆ ನಿಂತಿದ್ದವು. ಇನ್ನೊಮ್ಮೆ ಶಿವಮೊಗ್ಗದಲ್ಲಿ ಅಡ್ಡಾದಿಡ್ಡಿ ಹರಿದು ಬಂದ ಲಾರಿಗಳ ಗಾಲಿಗಳಡಿಗಳಲ್ಲಿ ಸಿಕ್ಕಿಬಿದ್ದ ಕುರಿಗಳು, ರಕ್ತ ಹರಿಸಿ ಪ್ರಾಣತೆತ್ತವು. ಆಗಲೂ ತಮ್ಮ ಸಂಗಾತಿಗಳ ದುರ್ಮರಣಕ್ಕೆ ಸಿಟ್ಟಿಗೆದ್ದ ಕರಿಕುರಿಗಳು ಶಿವಮೊಗ್ಗವನ್ನೇ ಒಂದೆರಡು ಗಂಟೆ ಉಸಿರುಗಟ್ಟಿಸಿ, ತಮ್ಮ ಬಲಪ್ರದರ್ಶನ ಮಾಡಿ, ಲಾರಿಯವನಿಗೆ ಚುರುಕು ಮಟ್ಟಿಸಿ, ಮುನ್ನಡೆದಿದ್ದವು.

ಈ ಸಂದರ್ಭಗಲಲ್ಲಿ ದಡಕ್ಕನೆ ಒಡಮೂಡಿದ ಆತ್ಮಗೌರವಕ್ಕೆ

ಪ್ರತೀಕವಾದ ಸಾತ್ವಿಕ ಸಿಟ್ಟಿನ ಹಿನ್ನಲೆ–ಬೇವಿನಹಳ್ಳಿ ಹಟ್ಟಿ ಕರಿದೊಡ್ಡಜ್ಜಿ. ಈ ಅಜ್ಜಿ ಗೊಲ್ಲಾಳಿಕೆಯಲ್ಲಿ ದಕ್ಕಡಗಿತ್ತಿ. ಶಿರಾ ಹಿರಿಯೂರು, ಚಳ್ಳಕೆರೆ ಸೀಮೆಗಳಿಂದ ಪ್ರತಿವರ್ಷ ಕರೇಕುರಿಯವರು ತೆಂಕ ಸೀಮೆ (ಮೈಸೂರು, ಹುಣಸೂರು, ಪಿರಿಯಾಪಟ್ಟಣ)ಗೆ ಮೇವು ನೀರಿಗೆ ದೇಶಕ್ಕೆ ಹೋಗುತ್ತಾರೆ. ದೀವಣಿಗೆಯಿಂದ ಮೊದಲ್ಗೊಂಡು ಸಂಕ್ರಾತಿಯವರೆಗೂ ಪರಸ್ಥಳಕ್ಕೆ ಹೋಗಿ ಕುರಿ ಕಾಪಾಡಿಕೊಂಡು ಕಾರಹಬ್ಬಕ್ಕೆ ತಳಮನೆಗೆ ಹಿಂತಿರುಗುತ್ತಾರೆ. ಹೀಗೆ ಕರಿಕುರಿಗಳು ರೋಡ್‌ಗಳಲ್ಲಿ ಸಾಲುಗಟ್ಟಿ ಹೋಗ್ತಾ ಇರುವಾಗಲೆಲ್ಲಾ ಜನರ ನೆನಪಿಗೆ ಧುತ್ತೆಂದು ಬರುವುದು ಶಿರಾ ತಾಲೂಕಿನ ಕರಿ ದೊಡ್ಡಜ್ಜಿ. ಯಾಕೆಂದರೆ ಇಡೀ ಕರ್ನಾಟಕದಲ್ಲಿ ಈ ಅಜ್ಜಿ ಆಳಿದಷ್ಟು ಕುರಿಗಳನ್ನು ಮತ್ಯಾರೂ ಆಳಿಲ್ಲ. ಈ ಅಜ್ಜಿಯ ಯಜಮಾನನ ಭಾಗಕ್ಕೆ ಬಂದಿದ್ದು ಹದಿಮೂರು ಕುರಿಗಳು, ತನ್ನ ಮೂರನೆಯ ಮಗ ಎದೆಹಾಲು ಕುಡಿಯುತ್ತಿದ್ದಾಗಲೇ ತನ್ನ ಯಜಮಾನನನ್ನು ಕಳೆದು ಕೊಂಡಿತು ಈ ದೊಡ್ಡಕ್ಕ. ಆ ಹದಿಮೂರು ಕುರಿಗಳ ಮರಿಗಳಿಂದ ಮರಿಮಾಡಿ ಏಳೆಂಟು ಸಾವಿರ ಕುರಿಗಳಿಗೆ ಹೆಚ್ಚಿಸಿತ್ತು.

ನಮಗೆಲ್ಲಾ ಬಣ್ಣಗಳೆಂದರೆ ನಾಲ್ಕು ಮಾತ್ರ. ಈ ಅಜ್ಜಿಗೆ ಬಣ್ಣಗಳು ಸಾವಿರಾರು. ಮಂದೆಯಲ್ಲಿ, ಕುರಿಗಳು ಮಲಗಿದ್ದಾಗ ಯಾವುದೇ ಕುರಿ ಮರಿ ಕೆಮ್ಮಲಿ, "ಲೇ ಬಡಣ್ಣ, ಸುಕಜನ್ನಾಳ ಪರಮ ಯಾಕೋ ಕೆಮ್ಮುತ್ತಲೋ, ಬೆಳಿಗ್ಗೆ ನೋಡಬೇಕು ಕಣ್ಲಾ" ಎನ್ನುತ್ತಿತ್ತು.

ಜನ್ನ, ಸೊಳಕ, ನಾಮದಲೆ ಮಸಗಂಡು ಸೊಳಕ, ಬೂತ ಜನ್ನಾಳ, ಕೊಳ್ಳಾಳಗ, ಬಿಳಿ ಜನ್ನಾಳ ಪರಮ, ಉಂಡಾಳ, ಕಾಲಕಣ್ಣ, ಬಾರಸೊಳಕ, ಚುಂಚ, ಪಾಲಿವಾಣ..... ಹೀಗೆ ಹೇಳುತ್ತಾ ಹೋದರೆ ಸಾವಿರಾರು ಬಣ್ಣಗಳಲ್ಲಿ ಕುರಿ–ಮೇಕೆಗಳನ್ನು ಗುರುತಿಸುತ್ತಾ, ಅವು ಬಂದ್ವೆ, ಬರಲಿಲ್ವೆ, ಮೇಯ್ತೆ, ಮೇಯಲಿಲ್ವೆ ಅಂತ ನಿಗಾ ವಹಿಸುತ್ತಿತ್ತು.

ಇನ್ನು ಕುರಿ ಕೆದರಿ ಮೇಯುತ್ತಾ ಇದ್ದಾಗ ಒಂದು ಕೂಗು ಹಾಕಿದರೆ ಜಲ್ಲೆನ್ನುವಂತೆ ಬಂದು ಒಂದು ಕಡೆ ನಿಂತು ಬಿಡುತ್ತಿದ್ದವು. "ಚೌಳು ನೀರು ಕುಡ್ದು, ಮಸಿಕಡ್ಡಿ ಹುಲ್ಲು ತಿಂದರೆ ಬೆನ್ನಕಟ್ಟಂಗೆ ಬೆಳಿತಾವೆ ; ಒರ್ ಮುಟ್ಟಿನ ಹಲುಬು ತಿಂದರೆ ಹಾಲ್‌ಬೋರು ಚೆನ್ನಾಗುತ್ತೆ" ಎನ್ನುವುದು ಆ ದೊಡ್ಡಕ್ಕನಿಗಿದ್ದ ಜ್ಞಾನ. ಸೇವಂತಿ ಹೂ ಹಲುಬು, ಕರಿ ಹಲುಬು, ಕಡೆಗಾಲಿನ ಗುತ್ತಿ, ಬಿಳಿ ಹೂ ಹಲುಬು, ಹೆಣ್ಣ ಹಲುಬು, ನೆಗ್ಗಿ ಹಲುಬು, ಸಿಲ್ ಕಲ್ಲ, ಗಂಡಕಲ್ಲ, ತಪ್ರೆ ಹುಲ್ಲು..... ನಾಲ್ಕು ಮಾರು ಜಾಗದಲ್ಲಿ ಈ ಅಜ್ಜಿ ಓಡಾಡಿದರೆ ಇಷ್ಟೆಲ್ಲಾ ಹುಲ್ಲುಗಳನ್ನು ಹೇಳುತ್ತಾ ಹೋಗುತ್ತದೆ. ದೊಡ್ಡಕ್ಕನಿಗೆ ಇದು ವಿಶೇಷ ಜ್ಞಾನವಲ್ಲ. ಬೇಸಿಗೆಯಲ್ಲಿ ದೇಶಕ್ಕೆ ಪರಸ್ಥಳಕ್ಕೆ ಹೋದಾಗ ಗದ್ದೆ ಸೀಮೇಲಿ ಸುಂಟಿ ಮೊಳಕೆ, ಸಾಲೆ ಬೋಟು, ಮಲ ತಪ್ಪರೆ ಹುಲ್ಲು, ಪುಟ್ಟುಂಪುರ್ಲೆ ಯಥೇಚ್ಚವಾಗಿ ಮೇಯ್ದು ಒಂದು ಕುರಿ ದೇಶದಿಂದ ಊರಿಗೆ ಬರುವಾಗ ಎರಡು ಮರಿಗಳ ಜೊತೆಯಲ್ಲಿ ಬರುತ್ತದೆ ಎಂದು ಹೇಳುತ್ತಿತ್ತು ಅಜ್ಜಿ.

ದೇಶಕ್ಕೆ ಹೋದಾಗ ಕುರಿ ರೊಪ್ಪದಲ್ಲಿ ನಾಲ್ಕು ನಿಟ್ಟಿನಲ್ಲಿ ನಾಲ್ಕು ಗೂಡುಗಳಿರುತ್ತವೆ. ಅದರಲ್ಲಿ ನಾಲ್ಕು ಪಾಲುಗಳಿರುತ್ತವೆ. ಆ ಪಾಲುಗಳಲ್ಲಿ ಹಲವಾರು ತಾಟುಗಳಿರುತ್ತವೆ. ಬೆಳಿಗ್ಗೆ

ಎದ್ದು ಕುರಿ ಎಬ್ಬಿಸಿದರೆ, ಆಯಾಯ ತಾಟಿನ ಕುರಿಗಳು ಅಲ್ಲಿಗೆ ಹೋಗಿ ನಿಲ್ಲುತ್ತವೆ. ರಾತ್ರಿ ಕಳ್ಳಕಾಕರ, ಕಾಡುಮೃಗಗಳ ಹಾವಳಿ ಎದುರಿಸಲು ಜಾವಾ ಕಾಯಬೇಕು.

ಈ ಅಜ್ಜಿ ಅವತ್ತಿನ ದಿನಮಾನಗಳಲ್ಲಿ ಜಾವಾ ಬದಲಾಯಿಸುವುದು ಆಕಾಶದಲ್ಲಿನ ಕುರಿದಳ ಎಂಬ ಚುಕ್ಕಿಗಳ ನಡೆಯ ಮೇಲೆ. ಕುರಿ ದಳ, ದನ ಕಾಯುವ ಹುಡುಗರು, ಕೋಳಿ ಪಿಳ್ಳೆ, ಎತ್ತು ಕಾಯೋ ಚುಕ್ಕಿ – ಈ ಆಕಾಶದ ಕಾಯಗಳೆಲ್ಲಾ ಈ ಅಜ್ಜಿಯ ಅಂದಿನ ಅಲಾರಾಂ ಗಡಿಯಾರಗಳು, ಕುರಿದಳವೇ ಹಿಂದಿನ ಪೂರ್ವಿಕರಿಗೆ ಲೆಕ್ಕ. ಆದರೆ ಆಧುನಿಕದಲ್ಲಿ ಕರಿದೊಡ್ಡಕ್ಕ ಕುರಿ ಕಾಯುವ ಎಲ್ಲಾ ಹುಡುಗರಿಗೆ ಒಂದೊಂದು ಬ್ಯಾಟರಿ ಕೊಡಿಸಿತ್ತು. ಪ್ರತಿದಿನ ಅವರಿಗೆ ಎರಡೆರಡು ಶೆಲ್ಲುಗಳು ಬಳಸುವಂತ ವ್ಯವಸ್ಥೆ ಜಾರಿಯಲ್ಲಿತ್ತು.

ಇಂಥಾ ಕಟ್ಟೆಚ್ಚರದ ಕಾವಲಿನಲ್ಲಿಯೂ ಒಮ್ಮೆ ಹೀಗಾಯ್ತು ; ಕಲ್ಲು ಕರಗುವ ಹೊತ್ತಿನಲ್ಲಿ ಅಜ್ಜಿಗೆ ಎಚ್ಚರವಾಯಿತು. ನೋಡಿದರೆ ಯಾರೋ ಕತ್ತಲಿನಲ್ಲಿ ಕುರಿಗಳ ಬಾಯಿಯನ್ನು ಅದುಮಿಕೊಂಡು ಒಂದೊಂದನ್ನೆ ಲಾರಿಗೆ ತುಂಬುತ್ತಾ ಇದ್ದಾರೆ. ಅವರಿಗೆ ಈ ಕುರಿ ಹುಡುಗರು ಸಂಖ್ಯೆಯಲ್ಲಿ ಲೆಕ್ಕಕ್ಕಿಲ್ಲ. ಬಂದಿರುವುದು ಪರದೇಶಕ್ಕೆ. ಪರಿಸ್ಥಿತಿ ಕೈಮೀರಿದೆ ಎನ್ನುವದು ಅಜ್ಜಿಯ ಕ್ಷಣಾರ್ಧದ ಲೆಕ್ಕಾಚಾರ. ಅಜ್ಜಿಯೇ ಕುರಿಗಳೊಳಗೆ ತೆವಳುತ್ತಾ ಲಾರಿ ಬಡ್ಡಿಗೆ ಹೋಗಿ ಮೆತ್ತಗೆ ಲಾರಿಯಲ್ಲಿದ್ದ ಕುರಿಗಳ ಮಧ್ಯೆ ಮಲಗಿಬಿಟ್ಟಿತು. ಲಾರಿ ಅಲ್ಲಿಂದ ಹೊರಟು ಮುಂದೆ ಸಿಗುವ ಪಟ್ಟಣದ ನಡುವೆ ಇರುವ ಪೊಲೀಸ್ ಸ್ಟೇಷನ್ ಹತ್ತಿರ ಬರುತ್ತಾ ಇತ್ತು. ಅಜ್ಜಿ ಒಂದೇ ಬಾರಿಗೆ ಜೋರಾಗಿ ಕೂಗಲು ಶುರುಮಾಡಿತು. ಆಗ ಅಲ್ಲಿದ್ದ ಜನ, ಪೊಲೀಸ್ ಸುತ್ತುವರಿದು ಈ ಕಳ್ಳರನ್ನು ಹಿಡಿದರು. ಇದು ದೊಡ್ಡಜ್ಜಿಯ ಜಾಣ್ಮೆಗೆ, ದಿಟ್ಟತನಕ್ಕೆ, ಸಮಯಪ್ರಜ್ಞೆಗೆ ಪ್ರತೀಕವಾಗಿ ಎರೆಗಡ್ಡೆ ಸೀಮೇಲಿ ದಂತಕಥೆಯಂತೆ ಹಬ್ಬಿದೆ. ಕರಿ ದೊಡ್ಡಕ್ಕ "ಇಂದಿರಾ ಗಾಂಧಿಯಂತೆ ದಕ್ಕಡಗಿತ್ತಿ" ಎಂದು ಈಗಲೂ ಹೇಳುತ್ತಿರುತ್ತಾರೆ.

ಪೋಲಿಸರಿಗಂತೂ ಕರಿದೊಡ್ಡಜ್ಜಿ ಸೊಪ್ಪು ಹಾಕುತ್ತಿರಲಿಲ್ಲ. ಒಂದು ಸಾರಿ ಯಾರೋ ಅಮಾಯಕ ಹೆಂಗಸಳೊಬ್ಬಳನ್ನು ಸ್ಟೇಷನ್‌ನಲ್ಲಿ ಅಕ್ರಮವಾಗಿ ಕೂಡಿಹಾಕಿ ಕೊಂಡಾಗ, ಈ ಅಜ್ಜಿ ಸ್ಟೇಷನ್‌ಗೆ ನುಗ್ಗಿ ಒಂದು ಕೈಯಲ್ಲಿ ದುಡ್ಡಿನ ಚೀಲವನ್ನು ಇನ್‌ಸ್ಪೆಕ್ಟರ್ ಮುಖಕ್ಕೆ ಒಗೆದು, ಇನ್ನೊಂದು ಕೈಯಲ್ಲಿ ಆ ಹೆಂಗಸನ್ನು ಹಿಡಿದುಕೊಂಡೇ ಈಚೆಗೆ ಬಂದಿತ್ತು. ಹಾಗಾಗಿ ಮೈಸೂರು, ಶಿವಮೊಗ್ಗದಂಥ ದೊಡ್ಡ ಪಟ್ಟಣಗಳಲ್ಲಿ ಈ ಅಜ್ಜಿಯ ಕುರಿಗಳು ಹೋಗುತ್ತಿದ್ದರೆ, ಪೊಲೀಸರು ಊರಿನಿಂದ ಹೊರಗೆ ಸುರಕ್ಷಿತವಾಗಿ ದಾಟಿಸಿ ಬರುತ್ತಿದ್ದರು.

ಕಾಡು ಮೇಡು ಕಮ್ಮಿಯಾಗುತ್ತಿರುವ ಕಾಲದಲ್ಲಿ ಕುರಿ ಬದುಕು ಸಂಕಷ್ಟಕ್ಕೆ ಈಡಾಗುತ್ತಿದೆ. ಕುರಿ ಕಾಯುವ ಕೆಳ ಸಮುದಾಯಗಳು ದಿಬ್ಬಗಳಲ್ಲಿ, ಬಾರೆಗಳಲ್ಲಿ ಹಟ್ಟಿ ಕಟ್ಟಿದ್ದಾರೆ. ಮೇಲ್ಜಾತಿಯ ಭೂ ಮಾಲೀಕರು ಹಳ್ಳ, ಕೊಳ್ಳ, ಕೆರೆ, ಕುಂಟೆಗಳನ್ನು ಗೇಯ್ಮು, ಆಕ್ರಮಿಸಿ ಕುಳಿತಿದ್ದಾರೆ. ಕಟ್ಟೆಗೆ ಹೋಗುವ ದಾರಿಗೆ ತೆಂಗನ್ನು ಇಟ್ಟು ಕಟ್ಟೆಯ ನೀರನ್ನು ಕಣ್ಣಲ್ಲೇ ಕುಡಿಸಿ ಎನ್ನುವ ವ್ಯೆಕ್ತಿಯೊಬ್ಬನು ದಸೂಡಿ ಹತ್ತಿರ, ತನ್ನ ತೋಟಕ್ಕೆ ನುಗ್ಗಿದ ಎರಡು ಪಟ್ಟಿ ಮರಿಗಳನ್ನು ಹಿಡಿದು ಕೊಂಡು ಹೋದ. ಕುರಿ ಕಾಯುವವರೆಲ್ಲಾ ಹೇಳಿದರೂ ಕೇಳಲಿಲ್ಲ. ಅಜ್ಜಿಗೆ ವರ್ತಮಾನ


ಹೋಯಿತು. ಅಲ್ಲಿಗೆ ಬಂದ ಅಜ್ಜಿಯ ಮೇಲೆಯೇ ಎಗರಿಕೊಂಡ ಹೋದ. ಅಜ್ಜಿ ತಾಳ್ಮೆ ಕಳೆದುಕೊಳ್ಳದೆ ಅವನನ್ನು ಸಮರ್ಥವಾಗಿ ಎದುರಿಸಿತು. ಕುರಿ ಪಯಣದಲ್ಲಿ ಇಂಥ ನೂರಾರು ಪ್ರಸಂಗಗಳು ಎದುರಾಗುತ್ತಿರುತ್ತವೆ. ಆವಾಗ ಕರೇಕುರಿಯವರು ಅಜ್ಜಿ ಆ ಸಂದರ್ಭಗಳಲ್ಲಿ ನಡೆದು ಕೊಳ್ಳುತ್ತಿದ್ದ ಬಗೆಯನ್ನು ನೆನಪಿಸಿಕೊಂಡು ಅಜ್ಜಿಯ ನಡವಳಿಕೆಯನ್ನು ರೂಢಿಸಿಕೊಳ್ಳಲು ಪ್ರಯತ್ನಿಸುತ್ತಿರುತ್ತಾರೆ.

"ಹಕ್ಕಿ ತ್ರಾಣವೊ, ರೆಕ್ಕೆ ತ್ರಾಣವೊ" ಎನ್ನುವಂತೆ ಕುರಿಗಳು ಒಂದೊಂದು ಊರಿನಲ್ಲಿ ಒಂದೊಂದು ದಿನದಂತೆ ಹಕ್ಕೆ ಬದಲಾಯಿಸುತ್ತಾ ದೇಶ ತಿರುಗುತ್ತವೆ. ಬೆಳಿಗ್ಗೆ ಎದ್ದರೆ, ಕುರಿಮರಿಗೆ ಹಾಲು ಊಡಿಸೋದು, ಹಾಲಿಲ್ಲದ ಕುರಿಮರಿಯನ್ನು ನೊಸೆ ಕಟ್ಟಿದ ಆಡಿಗೆ ತೋರು ಹಾಕುವುದು, ಕಾಯಿಲೆ-ಕಸಾಲೆಯಾದ ಕುರಿಗೆ ಆರೈಕೆ – ಇವು ದಿನ ಬೆಳಗ್ಗಿನ ಅಜ್ಜಿಯ ಆಸ್ಥೆಯ ಕೆಲಸಗಳು. ನಂತರ ಮುಂದಿನ ಊರಿಗೆ ಹೋಗಿ ಮಂದೆ ನಿಗದಿ ಮಾಡೋ ಊರಾಡುವ ಕೆಲಸ ಅಜ್ಜಿಯದೇ. ಆ ಊರಲ್ಲಿ ಕುಳಿತು, ಪ್ರಮುಖರನ್ನೆಲ್ಲಾ ಮಾತಾಡಿಸಿ, ಆ ಊರಿಗೆ ಅಗತ್ಯವಾದ ಕಾರ್ಯಗಳಿಗೆ ಸಹಾಯ ಮಾಡಿ ಆ ಊರಿನ ಬಾರೆಗಳಲ್ಲಿ ಕುರಿ ಮೇಯಿಸುವುದಕ್ಕೆ ಅನುಮತಿ ಪಡೆಯುತ್ತಿತ್ತು. ಈಗಲೂ ಶಿವಮೊಗ್ಗದ ಸುತ್ತೆಲ್ಲಾ ಈ ಅಜ್ಜಿಯ ಹೆಸರಿನ ಬೋರ್ಡ್‌ಗಳು ತೂಗಾಡುತ್ತಾ ನಿಂತಿವೆ. ದೊಡ್ಡಕ್ಕನ ಧಾರಾಳತನಕ್ಕೆ ಲೆಕ್ಕವೇ ಇಲ್ಲ. ಒಮ್ಮೆ ಶಿವಮೊಗ್ಗದ ಮಾಂಸದಂಗಡಿ ಸಾಬಿಯ ಮಗನ ಮದುವೆ ತಗಾದೆಗೆ ಬಿತ್ತು. ಈ ಅಜ್ಜಿ ಹೋಗಿ ಕುಂತು, ಅದನ್ನು ಬಗೆಹರಿಸಿ ತನ್ನ ದುಡ್ಡಲ್ಲೇ ಆ ಮದುವೆ ಮಾಡಿಸಿತ್ತು.

ಮತ್ತೊಂದು ಪ್ರಸಂಗ ಇತ್ತೀಚಿನದು. ಮಾಜಿ ಪೋಲಿಸ್ ಅಧಿಕಾರಿ ಕೋದಂಡರಾಮಯ್ಯ ನವರು ತಮ್ಮ ಮೊದಲ ಎಲೆಕ್ಷನ್‌ನಲ್ಲಿ ಬೇವಿನಹಳ್ಳಿ ಹಟ್ಟಿಗೆ ಹೋಗಿ, ದೊಡ್ಡಜ್ಜಿಯ ಮನೆಗೆ ಹೋಗಿದ್ದಾರೆ. ಆಗ ಅಜ್ಜಿ ದುಡ್ಡಿನ ಗಂಟನ್ನು ನೀಡಲು ಹೋಗಿದೆ. ಅದನ್ನು ಸ್ಪಷ್ಟವಾಗಿ ಕೋದಂಡರಾಮಯ್ಯ ತಿರಸ್ಕರಿಸಿದ್ದಾರೆ. ಆಗ ಅಜ್ಜಿ " ನೋಡಿ ಸ್ವಾಮಿ ಈ ದುಡ್ಡು ನಿಮಗೆ ಬೇಡ ಅಂದರೆ, ಕಾರಲ್ಲಿ ಹೋಗುತ್ತಾ ಒಂದೊಂದೇ ನೋಟನ್ನು ಗಾಳಿಗೆ ತೂರಿಕೊಂಡು ಹೋಗಿ ; ಇದು ನನ್ನ ಪ್ರೀತಿ, ಅಭಿಮಾನ" ಎಂದಿದೆ. ಇದು ಅಜ್ಜಿಯ ಕಕ್ಕುಲತೆ.

ಇಂಥ ಹಲವಾರು ಕತೆಗಳಲ್ಲಿ ಬೆಳೆಯುವ ಕರಿದೊಡ್ಡಕ್ಕ ಆತ್ಮವಿಶ್ವಾಸ, ದಿಟ್ಟತನಗಳನ್ನು ತಳಸಮುದಾಯಗಳಲ್ಲಿ ಮೂಡಿಸಿ, ಅವರೆಲ್ಲಾ ಬೀಗುವಂತೆ ಮಾಡಿದ್ದಾರೆ. ಒಂದು ಕಡೆಯಲ್ಲಿ ನಾಡೋಜ ಪ್ರಶಸ್ತಿ ವಿಜೇತ ಸಿರಿಯಜ್ಜಿ ಕುರಿ ಬದುಕನ್ನು ಹಲವಾರು ಸಾವಿರ ಪದಗಳಲ್ಲಿ ಕಟ್ಟಿಕೊಟ್ಟಿದ್ದಾರೆ. ತನ್ನ ಎಳೆಂಟು ಸಾವಿರ ಕುರಿ ಕಾದ ವಿಶಿಷ್ಟ, ಅನನ್ಯ ಜ್ಞಾನದ ಮೂಲಕ ಆ ಪದಗಳಲ್ಲಿನ ಬದುಕನ್ನು ಬದುಕಿ ದೊಡ್ಡದೊಂದು ಎತ್ತರಕ್ಕೆ ಏರಿ ನಿಂತಿದ್ದಾರೆ ಕರಿದೊಡ್ಡಕ್ಕ.

❑



## ಅರ್ಧ ದಿನ ಯಾಚಕ :
## ಇನ್ನರ್ಧ ದಿನ ಕಂಬಳಿ ಧ್ಯಾನ

**ಸೊ**ಲ್ಲಾಪುರದ ಸಿದ್ದರಾಮಣ್ಣನಲ್ಲಿ ಒಬ್ಬರು ಹರಕೆ ಹೊತ್ತಿದ್ದರು. ಅದು ನೆರವೇರಿದರೆ ಸಿದ್ದರಾಮಣ್ಣನ ಕೆಳಗೆ ಹಾಸಲು ವಿಶೇಷ ಗದ್ದಿಗೆ ಕಂಬಳಿಯ ಕಾಣಿಕೆ ನೀಡಲು ನಿರ್ಧರಿಸಿದ್ದರು. ನಾಲ್ಕು ಮೂಲೆಗಳಲ್ಲಿಯೂ ಹೂವು ; ಹೂವುಗಳ ನಡುವೆ ಬಸವಣ್ಣ ವಿರಾಜಮಾನವಾಗಿರುವ ಗದ್ದಿಗೆ ಕಂಬಳಿ ಆಗ ಅವರ ಚಿತ್ತದಲ್ಲಿತ್ತು. ಅವರೇ ಚಕಿತಗೊಳ್ಳುವಂತೆ ಹರಕೆ ಈಡೇರಿತು. ಈಡೇರುವ ಮೂಲಕ ಅವರ ಬದುಕನ್ನೆ ಬದಲಾಯಿಸಿತು.

ಗದ್ದಿಗೆ ಕಂಬಳಿ ಮಾಡಿಸಲು ಮುಂದಾದಾಗ, ಅವರ ಚಿತ್ತದಲ್ಲಿದ್ದ ಚಿತ್ರ ನೇಯ್ಗೆಯಲ್ಲಿ ಮೂಡಿಸುವುದರ ಕಷ್ಟ ಅರಿವಾಗತೊಡಗಿತು. ಎಲ್ಲಾ ಕಡೆಯೂ ವಿಚಾರಿಸಿ ತಮಿಳುನಾಡಿನ ಬಹು ಪ್ರಸಿದ್ಧ ಕಂಬಳಿ ಕೇಂದ್ರ ವಾನಂಬಾಡಿಗೂ ಈ ಆರ್ಡರ ಹೋಗಿಬಂತು. ಈ ಗದ್ದಿಗೆ ಕಂಬಳಿಯ ಚಿತ್ರ ಎಲ್ಲರನ್ನು ಧೈರ್ಯಗೆಡಿಸಿತ್ತು. ಕೊನೆಗೆ

ಚಿಕ್ಕನಾಯಕನಹಳ್ಳಿಯ ಬಸವರಾಜು ಈ ಸವಾಲನ್ನು ಎತ್ತಿಕೊಂಡರು. ಬಸವರಾಜು ಮತ್ತು ಅವರ ಮಗ ಇಬ್ಬರೂ ಸೇರಿ ಹಲವು ದಿನಗಳ ನಿರಂತರ ಶ್ರಮದ ಮೂಲಕ ಈ ಚಿತ್ರವನ್ನು ಕಂಬಳಿಯಲ್ಲಿ ಮೂಡಿಸಿದರು.

ಇಂದಿನವರೆಗೂ ಕಂಬಳಿ ಕುಲ ಕಸುಬು ಬಸವರಾಜು ಅವರನ್ನು ಪೊರೆದಿದೆ. ಐದನೇ ಕ್ಲಾಸ್ ವಿದ್ಯಾರ್ಥಿ ವಯಸ್ಸಿನಿಂದ ಸತವಾಗಿ ಇಪ್ಪತ್ತೆಂಟು ವರ್ಷ ಹುರಿಗಂಬಳಿಯನ್ನು ತಮ್ಮ ಪಾರಂಪರಿಕ ಜ್ಞಾನದಿಂದ ಗುಳಿಮಗ್ಗದಲ್ಲಿ ಮಾಡುತ್ತಿದ್ದರು. ಕಾಲೇಜು ವಿದ್ಯಾಭ್ಯಾಸದ ನಂತರ ತನ್ನ ಕಡುಕಷ್ಟದಲ್ಲಿಯೂ ಯಾವುದೇ ಸರ್ಕಾರಿ ನೌಕರರಿಗೆ ಮನಸೋತವರಲ್ಲ. ತಮ್ಮ ವ್ಯಕ್ತಿತ್ವವನ್ನು ಇಡಿಯಾಗಿ ಕಂಬಳಿಯಲ್ಲಿ ತೊಡಗಿಸಿಕೊಂಡವರು. ಅವರದು ಅರ್ಧದಿನದ ಯಾಚಕ ; ಇನ್ನರ್ಧ ದಿನದ ಸೃಜನಾತ್ಮಕ ಕಂಬಳಿ ಧ್ಯಾನ.

ರಗ್, ಬೆಡ್ ಷೀಟ್‌ಗಳ ಹಾವಳಿಯಲ್ಲಿ ಕಂಬಳಿ ನಿಲ್ಲುವುದು ಕಷ್ಟವಾಗುತ್ತಿದ್ದ ಕಾಲ ಅದು. ಕುರಿ ಕಾಯುವವರು ಮಾತ್ರ ಗಂಜಿ ಕಂಬಳಿ ಕೊಳ್ಳುತ್ತಿದ್ದರು. ಇತ್ತೀಚಿನ ತಲೆಮಾರಿಗೆ ಕುರಿ-ಗಂಬಳಿ ಒಗ್ಗುತ್ತಿರಲಿಲ್ಲ. ಕಂಬಳಿ ಎಂದರೆ ಕಂಬಳಿ ಹುಳ, ಒರಟುತನ, ಉದುರುವ ಕೂದಲು ನೆನಪಾಗುತ್ತಿತ್ತು. ಕಂಬಳಿ ನೇಯುವವರು ತಮ್ಮ ವೃತ್ತಿ ಬಿಟ್ಟುಕೊಡ ತೊಡಗಿದರು. ಆಗ ಬಸವರಾಜು ಕಂಬಳಿಯ ಮಗ್ಗದಲ್ಲಿ, ನೇಯ್ಗೆಯಲ್ಲಿ ಪ್ರಯೋಗಗಳನ್ನು ಮಾಡಲು ಆರಂಭಿಸಿದರು. ಕಂಬಳಿ ಮೃದುವಾಗಿರಲು, ಬಿಕ್ಕಟ್ಟಾಗಿರಲು ಹಾಸಿಗೆ ಕಾಟನ್ ಬಳಸುವ ಬೀಸಿಗೆ ಉಣ್ಣೆ ಬಳಸುವ ಪ್ರಯತ್ನ ಮಾಡಿದರು. ೪ ಅಡಿ, ೭ ಅಡಿ ಕಾರ್ಪೆಟ್ ಕಂಬಳಿಗೆ ೨೦೦ ಗ್ರಾಂ ಕಾಟನ್ ೨ ಕೆಜಿ ಉಣ್ಣೆ ಸಾಕಾಗುತ್ತಿತ್ತು. ಕಾಟನ್‌ಗೆ ೨೦ ರುಪಾಯಿ, ಉಣ್ಣೆಗೆ ೪೦ ರೂಪಾಯಿ ಬೆಲೆಯಾಗುತ್ತಿತ್ತು. ಕಾರ್ಪೆಟ್ ಕಂಬಳಿ ಎನ್ನುವ ವಿಶಿಷ್ಟ ಪ್ರಕಾರ ಇದರೊಂದಿಗೆ ಬೆಳೆಯಿತು. ಒಂದು ಕಾರ್ಪೆಟ್ ಕಂಬಳಿ ನೂರು ರೂಪಾಯಿಗೆ ಸಿಗಲು ಸಾಧ್ಯವಾಯಿತು. ಪಾರಂಪರಿಕ ಗುಳಿ ಮಗ್ಗದ ಬದಲಾಗಿ ಪೆಟ್ಲು ಮಗ್ಗ ಬಳಸಿ ಕಂಬಳಿ ಉದ್ಯೋಗಕ್ಕೆ ವೇಗ ತಂದರು. ಇದರಿಂದಾಗಿ ಒಬ್ಬ ಮನುಷ್ಯ ದಿನಕ್ಕೆ ಹತ್ತು ಪೀಸ್ ನೇಯ್ಯಲು ಸಾಧ್ಯವಾಯಿತು. ಇದಲ್ಲದೆ ಬಣ್ಣ ಬಣ್ಣದ ಹಲವು ಚಿತ್ತಾರಗಳು ಕಂಬಳಿಯಲ್ಲಿ ಒಡಮೂಡಿ ಆಧುನಿಕರಿಗೆ ಚಿತ್ತಾಕರ್ಷಕವಾಯಿತು.

ಕಂಬಳಿಯ ಉದ್ಯೋಗವನ್ನು ಆಧುನಿಕ ಅಗತ್ಯಗಳಿಗೆ ಒದಗಿಸಲು ಬಸವರಾಜು ಜರ್ಕಿನ್, ಟೋಪಿ, ಊಟದ ಚಾಪೆ, ಗದ್ದಿಗೆ ಕಂಬಳಿ, ದಿವಾನ ಕಾಟ್ ಕಂಬಳಿಗಳನ್ನು ನೇಯ್ದರು. ಜನರು ಕೇಳಿದ ಚಿತ್ರಗಳನ್ನು ಹೊಂದಿದ ಕ್ಯಾಲೆಂಡರ ಕಂಬಳಿ ಹೊರಬಂತು. ರೇಷನ್ ಹಂಚುವ ತನ್ನದಲ್ಲದ ಕೆಲಸಕ್ಕೆ ಸೀಮಿತಗೊಂಡಿದ್ದ ಕಂಬಳಿ ಸೊಸೈಟಿ ಇದರಿಂದ ಆರ್ಥಿಕ ಚೈತನ್ಯ ಪಡೆಯಿತು. ಆದರೆ ಬಸವರಾಜಪ್ಪನಂಥ ಹಲವು ಪ್ರಯೋಗಶೀಲರಿಗೆ ಮಾರುಕಟ್ಟೆ ಒದಗಿಸಲು ಕಂಬಳಿ ಸೊಸೈಟಿ ಇನ್ನೂ ಪೂರ್ಣ ಮನಸ್ಸಿನಿಂದ ಕೆಲಸ ಮಾಡುತ್ತಿಲ್ಲ.

ಇದೆಲ್ಲದರ ನಡುವೆ ಕಂಬಳಿ ನೇಯ್ಗೆಯಲ್ಲಿ ೨೦೦೪ರ ರಾಜ್ಯಮಟ್ಟದ ಪ್ರಥಮ ಪ್ರಶಸ್ತಿ ಇವರಿಗೆ ಸಂದಿತು. ಆ ಸ್ಪರ್ಧೆಯಲ್ಲಿ ನೇಯ್ದ ರತ್ನಗಂಬಳಿ ೨೫೦ ವರ್ಷ ಬಾಳುತ್ತದೆ ಎಂದು




ಅಂದಾಜು ಮಾಡಲಾಗಿದೆ. ಕಂಬಳಿ ನೇಯ್ಗೆಯಲ್ಲಿ ಆಧುನಿಕ ಸ್ಪರ್ಶ ಬೇಕಿರುವ ಕಡೆಗಳಲ್ಲಿ ಇವರನ್ನು ಕಳುಹಿಸಿ ಕೈಮಗ್ಗ ಇಲಾಖೆ ತರಬೇತಿ ನೀಡುತ್ತಿದೆ. ಲಿಂಗಸ್ವಾಮಿ ಮತ್ತು ರೇಣುಕಮ್ಮ ಎಂಬ ಇವರ ಶಿಷ್ಯರು ಈಗಾಗಲೇ ಇವರ ಹೆಜ್ಜೆಗಳಲ್ಲಿ ಹೆಜ್ಜೆ ಹಾಕುತ್ತಿದ್ದಾರೆ. ಹೆಣ್ಣು ಮಗಳೊಬ್ಬಳು ಕಂಬಳಿ ನೇಯ್ಗೆಯಲ್ಲಿ ಪರಿಣತಿ ಸಾಧಿಸುತ್ತಿರುವುದು ಅಪರೂಪ.

ಬಸವರಾಜು ಇವುಗಳನ್ನೆಲ್ಲಾ ತನ್ನದೇ ದಾಟಿಯಲ್ಲಿ ಧ್ಯಾನಿಸುತ್ತಾ ಮಾಡುತ್ತಿರುವ ಮನುಷ್ಯ. ಆದರೆ ಇವರ ಗುರು ಹಜಾಮರ ನರಸಿಂಹಣ್ಣ, ವೃತ್ತಿಯಲ್ಲಿ ಕ್ಷೌರಿಕರಾದರೂ ಕಂಬಳಿ ನೇಯ್ಗೆಯಲ್ಲಿ ಪರಿಣತಿ ಸಾದಿಸಿದವರು. ನರಸಿಂಹಣ್ಣನವರು ವಿಶಿಷ್ಟ ಬಗೆಯ ಕಂಬಳಿಗಳಿಗೆ ಆರ್ಡರ್ ಬಂದರೆ ಬಸವರಾಜಪ್ಪನವರ ಕೈಲಿ ಕೆಲಸ ಮಾಡಿಸುತ್ತಿದ್ದರು. ಶಿಷ್ಯ ಬಸವರಾಜು ತನಗಿಂತಲೂ ಜಾಣ ಎನ್ನುವುದು ಅವರ ನಂಬಿಕೆಯಾಗಿತ್ತು.

ಆದರೆ ಗುರುವಿನ ಶ್ರೇಷ್ಠತೆ ಶಿಷ್ಯನಿಗೆ ಗೊತ್ತಿತ್ತು. ಒಮ್ಮೆ ವೃತ್ತಾಕಾರದ ನೇಯ್ಗೆಯ ಆರ್ಡರ್ ಬಂತು. ನರಸಿಂಹಣ್ಣ ಕೋನಾಕಾರದ ಆಕೃತಿಯಲ್ಲಿ ಅನುಭವವಿದ್ದವರು. ಹಾಗಾಗಿ ಬಸವರಾಜುವಿಗೆ ಇದನ್ನು ಒಪ್ಪಿಸಿದರು. ಕೊನೆಗೆ ಬಸವರಾಜು ಅದನ್ನೆಲ್ಲಾ ನೇಯ್ದು, ಮುಗಿಸುವ ಹಂತದಲ್ಲಿದ್ದಾಗ ನರಸಿಂಹಣ್ಣ ಬಂದರು. ಅದರಲ್ಲಿ ಒಂದು ಎಳೆ ಎಲ್ಲಿಯೋ ಹದ ತಪ್ಪಿದೆ ಎನ್ನಿಸಿ, ಬ್ಲೇಡನಲ್ಲಿ ಇಡೀ ಕಂಬಳಿಯನ್ನೇ ಬಗಾಲ್ ಮಾಡಿದರು. ಬಸವರಾಜುವಿಗೆ ಆಘಾತ ವಾಯಿತು. ಇನ್ನರ್ಧ ಗಂಟೆಯಲ್ಲಿ ಆ ಕಂಬಳಿಯನ್ನೇ ಹೊಲಿದು ಆ ದೋಷವನ್ನು ನಿವಾರಿಸಿದ್ದರು. ಎರಡು ಕಂಬಳಿ ತುಂಡುಗಳನ್ನು ಒಗ್ಗೂಡಿಸಿದ ಹೊಲಿಗೆ ಸಹ ಅಲ್ಲಿ ಕಾಣುತ್ತಿರಲಿಲ್ಲ.

ಇಂಥ ಕ್ರಮದ ಹಿನ್ನೆಲೆಯುಳ್ಳ ಬಸವರಾಜಪ್ಪ ಅಂಗವಿಕಲರು ಕಂಬಳಿಯನ್ನು ನೇಯ್ಯುವಂತೆ ಮಗ್ಗಗಳ ಮಾಡೆಲ್ ಬದಲಾಯಿಸುವ ಚಿಂತನೆಯಲ್ಲಿದ್ದಾರೆ. ಇದಕ್ಕಿಂತಲೂ ಮುಖ್ಯವಾಗಿ ಜೀವಮಾನದ ದೊಡ್ಡ ಕನಸಿದೆ. ಇತ್ತೀಚಿನ ತಲೆಮಾರಿನ ಹುಡುಗರಿಗೆ ಆಧುನಿಕ ಕಂಬಳಿ ನೇಯ್ಗೆ ಹೇಳಿಕೊಡುವ ಗುರುಕುಲದಂಥ ಶಾಲೆ ಆರಂಭಿಸಬೇಕು. ಆಧುನಿಕ ಅಗತ್ಯಗಳಿಗೆ ಕಂಬಳಿ ನಿರಂತರವಾಗಿ ಮೈಯೊಡ್ಡುವ ಸಂಶೋಧನೆ ನಡೆಯುತ್ತಿರಬೇಕು ಎನ್ನುವ ಅವರ ಕನಸನ್ನು ಅಲ್ಲಿ ನೇಯಬೇಕೆಂದಿದ್ದಾರೆ. ಈ ಆಧುನಿಕ ಕಂಬಳಿ ಹಲವು ಕುಲಮೂಲ ಕಸಬುಗಳಿಗೆ ಪ್ರೇರಣೆಯಾಗಬಾರದೇಕೆ ? ❑



## ಕುರಿ ಕರೆಯೋದು

**ಕಾ**ರಹಬ್ಬ, ಗೌರಿ ಅಮಾವಾಸ್ಯೆ ಉಗಾದಿ ಅಮಾವಾಸ್ಯೆ, ದೀವಣಿಗೆ ಅಮಾವಾಸ್ಯೆಗಳಲ್ಲಿ ಕುರಿ ಕರೆಯುತ್ತಾರೆ. ಇದೊಂದು ರೋಗ ನಿವಾರಣೆಗೆ ಮತ್ತು ರೋಗ ನಿಯಂತ್ರಿಸಲು ಕುರಿಗಾರರು ನಡಸಿ ಕೊಂಡು ಬಂದ ಆಚರಣೆ. ಮೂಗುತ್ತ, ಒಡಮಿನ ಗಿಡ, ದೊಡ್ಡ ಕಾಯಿನ ಗಿಡ, ಜೋಡಿ ಈಚಲು ಗಿಡ, ಗಂಟು ಕಾರೆ ಗಿಡ, ತೂತು ಹುಣಸೇ ಮರ, ಒಡಗಟ್ಟೆ ಇವುಗಳಿಗೆ ಕುರಿ ಕರೆಯುತ್ತಾರೆ. ಮರಿ ಕಡಿದು ಆಚರಣೆ ಮಾಡುವುದಾದರೆ ಒಡಗಟ್ಟೆಗೆ ಕುರಿ ಕರೆಯುತ್ತಾರೆ. ಮೂಡು ಮುಂದಾಗಿ ಕುರಿ ಕರೆಯುತ್ತಾರೆ.

ಗದ್ದಿಗೆ ಹಾಕಿ ಐದು ಕಲ್ಲುಳು (ಐದು ದೇವಗನ್ನಿಕೆಯರು), ಗಂಗಮ್ಮನ ಬಳೆ, ಗಂಮ್ಮನ ಹಚ್ಚೆ, ಎಲೆ, ಅಡಿಕೆ, ಮೂರು ತರದ ನೂಲು, ಪಂಚಲೋಹದ ಮೊಳೆ, ಮೂರು ಚಂದದ ಬೂದಿ (ಮಸಣದ ಬೂದಿ, ಅಕ್ಕಸಾಲಿ ಬೂದಿ, ಒಲೆಬೂದಿ) ಮುಂತಾದವು ಗಳನ್ನು ತರಬೇಕು. ಬೂದಿಯಲ್ಲಿ ರಂಗೋಲೆ ಬಿಟ್ಟ ಹಾಗೆ ಮೂರುಗೆರೆ ಹಾಕಬೇಕು. ಎರಡು ಬಳೆಯ ಒನಕೆ, ಪಂಚಲೋಹದ ಬಳೆ ತೊಡಿಸಿರುವ ಬೇಟೆ ಮರದ ಕುರಿಕೋಲು, ತುಂಬಿದ ಕೊಡದಲ್ಲಿ ನೀರು, ಇವಿಷ್ಟನ್ನೂ ಇಟ್ಟು ಪೂಜೆ ಮಾಡುತ್ತಾರೆ, ಇದೆಲ್ಲಾ ಆದ ಮೇಲೆ ಮೇಲ್ಕಂಡ ಗಿಡಗಳ ಹೊಳೆಯಲ್ಲಿ ಕುರಿಗಳನ್ನು

ಹೊಡೆಯುತ್ತಾರೆ. ಅಷ್ಟು ಕುರಿಗಳನ್ನೂ ಹೊಳೆಯಲ್ಲಿ ಕರಕೊಂಡು ಬಂದು ತೀರ್ಥವನ್ನು ಪ್ರೋಕ್ಷಣೆ ಮಾಡುತ್ತಾರೆ.

ಕಾರಹಬ್ಬದ ಮೂಲಾನಕ್ಷತ್ರದ ದಿನ ಒಡಕಟ್ಟೆಗೆ ಕುರಿಕರೆದು ಮರಿ ಕಡಿಯುತ್ತಾರೆ. ಗದ್ದಿಗೆ ಪೂಜೆಯ ನಂತರ ಕಡಿದ ಮರಿಯ ಕರ್ಚ ತೆಗೆದುಕೊಂಡು ಚರಗ ಹಾಕುತ್ತಾರೆ. ಕುರಿ ಜರ್ಸಿದರೆ, ಗೋಗಲ್ಲಿಗೆ, ತೂತು ಹುಣಸೇಮರಕ್ಕೆ ಕುರಿ ಕರೆಯುತ್ತಾರೆ. ಬೇರೆ ಕಾಯಿಲೆ ಬಂದರೆ ಜಾಡು ತಗುಲಿದೆ ಅಂತ ಮೂರು ಹಾದಿ ಕೂಡಿರುವ ಕಡೆ ಕುರಿ ಕರೆಯುತ್ತಾರೆ. ಕಾರಹಬ್ಬ, ಉಗಾದಿ, ದೀವಣಿಗೆಯಲ್ಲಿ ಕಾಯಿಲೆ ಬರದಿದ್ದರೂ ಮಾಮೂಲಿನಂತೆ ಕರೆಯುತ್ತಾರೆ.

ದೇವರಿಗೆ, ತೇರಿಗೆ ಕುರಿ ಕರೆಯುತ್ತಾರೆ. ಶ್ರಾವಣ ಮಾಸದಲ್ಲಿ ದೇವರನ್ನು ಹೊರಡಿಸಿದ್ದಾಗ ಬಸವಣ್ಣನ ಗುತ್ತಿ, ಸ್ವಾಮಿಗಳ ಗದ್ದಿಗೆ ಕಡೆಗಳಲ್ಲಿ ಮೆರವಣಿಗೆ ದೇವರನ್ನು ನಿಲ್ಲಿಸಿ ಕುರಿ ಕರೆಯುತ್ತಾರೆ. ದೇವರ ಸುತ್ತ ಮೂರು ಸುತ್ತು ಕರೆಯುತ್ತಾರೆ. ಊರಿನ ಪರಿಶೆಗಳಲ್ಲಿ ಗ್ರಾಮದೇವತೆಗಳ ಸಿಡಿಯಲ್ಲಿ, ಸಿಡಿಮರದ ಸುತ್ತಲೂ ಕುರಿ ಕರೆಯುತ್ತಾರೆ.

ಕುರಿ ಕರೆಯುವುದರಲ್ಲಿ ಅಪಾರ ಅನುಭವ ಹೊಂದಿರುವ ಹೊರಕೇರಿ ಸಿದ್ಧಣ್ಣ "ಈ ಆಚರಣೆ ಕುರಿ ಕಾಯುವವರಿಗೆ ನೆಮ್ಮದಿ, ಆತ್ಮವಿಶ್ವಾಸ ಮೂಡಿಸುತ್ತದೆ" ಎಂದು ಹೇಳುತ್ತಾರೆ. ಆದರೆ ಹಿರಿಯೂರು ಮತ್ತು ಚಳ್ಳಕೆರೆ ಸೀಮೆಗಳಲ್ಲಿ ಕರೆ ಕುರಿಯವರು ಈ ಆಚರಣೆಯನ್ನು ವಿಭಿನ್ನವಾಗಿ ಆಚರಿಸುತ್ತಾರೆ. ದುಗ್ಗಾಣಿಹಟ್ಟಿ ಕುಳ್ಳಪ್ಪ ಹೀಗೆ ಹೇಳುತ್ತಾರೆ. "ದೇವರು ಮಾಡೋದು ಬ್ಯಾರೆ, ಕುರಿ ಕರೆಯೋದು ಬ್ಯಾರೆ ದೇವರಿಗೆ ಕುರಿ ಕರೆಯೋದು ನಮ್ಮ ಖುಷಿಗೆ. ದೇವಸ್ಥಾನದ ಸುತ್ತ ಕರಿತೀವಿ. ಒಬ್ಬೊಬ್ಬರ ಕುರಿ ಹರಿಯೋದೆ ಇಲ್ಲ. ಒಬ್ಬರು ಹೊಮಾಲೆ ಹಾಕಿಸಿಕೊಳ್ಳುತ್ತಾರೆ. ಕೆಲವರು ಕುರಿ ಕರೆಯೋವಾಗ ಕೆಟ್ಬೋಗಿ ಎರಡು ಭಾಗ ಆಗಿ ದಿಕ್ಕುಪಾಲಾಗ್ತವೆ. ಇಪ್ಪತ್ತೆಂಟು ತಾಟು ಕುರಿ ಕರೆದ್ರೆ, ಒಬ್ಬ ಚೆನ್ನಾಗಿ ಕರೆದು ಸೈ ಎನ್ನಿಸಿಕೊಳ್ಳುತ್ತಾನೆ." ಹೀಗೆ ದೇವರ ಸುತ್ತ ಕುರಿ ಕರೆಯೋದಿಕ್ಕೆ ಒಂದು ಕುರಿಯನ್ನು ಕೈಪಾತ ಮಾಡಿಕೊಂಡು ಚೆನ್ನಾಗಿ ಸಾಕಿರುತ್ತಾರೆ. ಅದನ್ನು ಮುಂದು ಬರೋ ಕುರಿ ಅಥವಾ ಸೌಳ ಎನ್ನುತ್ತಾರೆ. ಅದು ಅವನ ಹತ್ತಿರವೆ ಮಲಗಬೇಕು. ಅದಕ್ಕೆ ವಿಶೇಷ ಆರೈಕೆ ಸದಾ ಸಿದ್ಧವಾಗಿರುತ್ತದೆ. ಅದು ಟಗರು ಆದ್ರೂ ಆಯ್ತು, ಇಲ್ಲ ಹೆಣ್ಣು ಕುರಿ ಆದ್ರೂ ನೆಡಯುತ್ತದೆ. ಹೆಣ್ಣು ಕುರಿ ಆದ್ರೆ ಅದನ್ನು ಕಟ್ಟಿಸುವುದಿಲ್ಲ.

ಕುರಿ ಕರೆಯುವುದನ್ನು ದಾಟು ಎನ್ನುತ್ತಾರೆ–ಚಳ್ಳಕೆರ, ಹಿರಿಯೂರು ಸುತ್ತಮುತ್ತಲಿನ ಕುರಿಗಾರರು. ಆ ಸೀಮೆಯಲ್ಲಿ ಕಿರು ದೀವಣಿಗೆ ಅಮಾವಾಸೇಲಿ ದಾಟು ಮಾಡಿ ಕರಿಯ ಮ್ಯಾಕೆಯನ್ನು ಕುಯ್ಯುತ್ತಾರೆ. ಪ್ರತಿ ಅಮಾವಾಸೆ, ಹುಣ್ಣಿಮೇಲಿ ಕುರಿಗೆ ಒಳ್ಳೆಯದಾಗಲಿ ಅಂತ ದಾಟು ದಾಟಿಸುತ್ತಾರೆ. ಪ್ರತಿ ಅಮಾವಾಸೆ, ಹುಣ್ಣಿಮೇಲಿ ಒಡೇದ ಗಿಡಕ್ಕೆ ಹೋಗಿ ರಂಗೋಲಿ ಬರೆದು, ಅಂಕೋಲೆ ಕಡ್ಡಿ ದಾಟಿಗೆ ಕಾಯ್ ಒಡೆದು ಕರಿಯ ಕುರಿ ಕುಯ್ದು ದಾಟಿಸುತ್ತಾರೆ. ಕುರಿಗಳು ಕರ್‍ರಾಗಾದಾಗ (ಮಂಕಾದಾಗ) ದಾಟಿಸುತ್ತಾರೆ. ಹೀಗೆ ದಾಟು ಕಳೆದಾಗ ಹೊಟ್ಟೆ ಮುಳ್ಳಿನ ಗಿಡ ಹಾಕಿ ದಾಟು ತೆಗೆಯುತ್ತಾರೆ. ಕೆಲವು ಸಾರಿ ಮೂರು ಕಟ್ಟೆ ಮಣ್ಣು ತಂದು ಬೊಂಬೆ ಮಾಡಿ ಅದಕ್ಕೂ ದಾಟಿಸುತ್ತಾರೆ.

❑



## ಒಂದೆಕರೆಯ ಪುಟ್ಟಕಾಡಿನಲ್ಲಿ ಆಡು-ಕುರಿ

ನಿರಂತರ ಆದಾಯ ತರಬಲ್ಲ ಡ್ಯೆರಿ ಉದ್ಯಮ ಮಾರುಕಟ್ಟೆಯ ಮಿತಿಗೆ ಒಳಪಡುತ್ತಿದೆ. ಹಳ್ಳಿಗಾಡಿನಲ್ಲಿ ಯಾವುದೇ ಕೃಷಿ ಉತ್ಪನ್ನಗಳಿಗೆ ಮನೆಯ ಬಾಗಿಲಿನಲ್ಲಿಯೇ ಮಾರುಕಟ್ಟೆ ವ್ಯವಸ್ಥೆ ಇರದ ಕಾರಣ, ಹಳ್ಳಿಯ ಏಕೈಕ ನಿರಂತರ ಆದಾಯ ಮೂಲವಾಗಿ ಮಿಶ್ರ ತಳಿ ಹಸು ಸಾಕಾಣಿಕೆ ಉಳಿದಿದೆ. ಅಲ್ಲಿಯೂ ದಿನದಿಂದ ದಿನಕ್ಕೆ ಲಾಭಾಂಶ ಕಡಿಮೆಯಾಗುತ್ತಿದೆ. ಅಲ್ಲದೆ ಹಾಲಿನ ಬಳಕೆ ಒಂದು ಹಂತಕ್ಕೆ ಏರಿ ಅಲ್ಲಿಯೇ ನಿಂತಿದೆ. ಒಂದುಕಡೆ ಹಾಲಿನ ಉತ್ಪಾದನೆ ಜಾಸ್ತಿಯಾಗುತ್ತಿದ್ದರೆ, ಇನ್ನೊಂದು ಕಡೆ ಹಾಲಿನ ಬಳಕೆ ಪ್ರಮಾಣ ಏರುತ್ತಿಲ್ಲ. ವಿದೇಶಗಳು ವಿಧಿಸಿರುವ ಕ್ವಾಲಿಟಿ ಮಾನದಂಡಗಳನ್ನು ಪೂರೈಸಲಾಗದೆ, ನಮ್ಮ ದೇಶದ ಹಾಲಿಗೆ ಜಾಗತಿಕ ಮಾರುಕಟ್ಟೆ ಲಭ್ಯವಾಗಿಲ್ಲ.

ಮೂರ್ನಾಲ್ಕು ದಶಕಗಳು ನಂತರವೂ ಮಿಶ್ರತಳಿ ಹಸುಸಾಕಾಣಿಕೆ ಕೆಳವರ್ಗದವರಿಗೆ ಕೈಗೆಟುಕಿಲ್ಲ. ಅಪೂರ್ವ ಕೃಷಿ ಕ್ರಾಂತಿ ಮಾಡುತ್ತಿರುವ ಮಹಾರಾಷ್ಟ್ರದ ಸುಭಾಷ್ ಪಾಳೇಕಾರ್‌ರವರ ಶೂನ್ಯ ಬಂಡವಾಳದ ನೈಸರ್ಗಿಕ ಕೃಷಿಯುಗದಲ್ಲಿ ಮಿಶ್ರತಳಿ ಹಸುವಿಗೆ ಯಾವುದೇ ಜೈವಿಕ ಮೌಲ್ಯವಿಲ್ಲ. ನಮ್ಮ ಅದೃಷ್ಟಕ್ಕೆ ಆಡು, ಕುರಿ ಸಾಕಾಣಿಕೆ, ನಮ್ಮ ಯೋಜನಾ ಬುದ್ಧಿವಂತರ ಕೈಗೆ ಸಿಗದೆ ನಮ್ಮ ನಾಟಿತಳಿಗಳನ್ನು

ಕಾಪಾಡಿಕೊಳ್ಳಲಾಗಿದೆ. ಹಲವಾರು ಕಾರಣಗಳಿಂದ ಮಾರುಕಟ್ಟೆ ಕುಸಿಯುತ್ತಿದೆ. ಜನರಿಗೆ ಇವತ್ತೂ ಕುರಿ ಆಡಿನ ಮಾಂಸ ಚಿಕನ್‌ಗಿಂತ ಹೆಚ್ಚು ಪ್ರಿಯವಾದ ವಸ್ತು.

ರೈತನ ಉಪಕಸುಬಾದ ಪಶುಸಂಗೋಪನಾ ಚಟುವಟಿಕೆಗಳಲ್ಲಿ ಈಗಲೂ ಅತ್ಯಂತ ಲಾಭದಾಯಕವಾಗಿರುವುದು – ಆಡು–ಕುರಿ ಸಾಕಾಣಿಕೆ. ನಿವೃತ್ತ ಪರಿಸರ ಇಲಾಖೆಯ ಕಾರ್ಯದರ್ಶಿ ಮತ್ತು ಪರಿಸರವಾದಿ ಹೋರಾಟಗಾರ ಯಲ್ಲಪ್ಪರೆಡ್ಡಿಯವರು ನೀಡಿದ ಅಂಕಿ–ಅಂಶಗಳ ಪ್ರಕಾರ ಕುರಿ ಉತ್ಪನ್ನಗಳ ಉದ್ಯಮ ನೀಡುವ ತೆರಿಗೆ ಎಲ್ಲಾ ಸೇರಿ ಒಂದು ಅಥವಾ ಒಂದು ಆಡು ಇಂಡಿಯಾ ದೇಶದ ಆರ್ಥಿಕ ವ್ಯವಸ್ಥೆಗೆ ಹದಿನಾರು ಸಾವಿರ ರೂಪಾಯಿಗಳ ಕೊಡುಗೆ ನೀಡುತ್ತಿದೆ. ಆದರೆ ಆಡು–ಕುರಿ ಸಾಕಾಣಿಕೆ ಕೆಲವೊಂದು ಮೂಲಭೂತ ಸೌಕರ್ಯಗಳ ಕೊರತೆಯಿಂದ ಬಳಲುತ್ತಿದೆ. ಆಡು–ಕುರಿಗಳು ಮೇಯುತ್ತಿದ್ದ ಕಾಡು–ಮೇಡು ಹೊಲ–ತೋಟಗಳಾಗಿವೆ. ಕುರಿಗಳು ಬಾಯಾರಿಕೆ ಹಿಂಗಿಸುತ್ತಿದ್ದ ಕೆರೆ–ಕಟ್ಟೆಗಳು ಮಾನವರ ದುರಾಸೆಗೆ ಬಲಿಯಾಗಿವೆ. ಟಾರ್ ರೋಡಿನ ಎರಡೂ ಕಡೆಯಲ್ಲೂ ಮೇಯಿಸಲು ಮಾತ್ರ ಜಾಗ ಉಳಿದಿದೆ. ಬೋರ್‌ವೆಲ್ ಹ್ಯಾಂಡ್ ಪಂಪಿನಲ್ಲಿ ನೀರನ್ನು ಜಗ್ಗಿ ಬೇಸಿನ್‌ನಲ್ಲಿ ಕುರಿಗಳಿಗೆ ನೀರು ಕುಡಿಸುವುದು ಇತ್ತೀಚೆಗೆ ಸರ್ವೇ ಸಾಮಾನ್ಯ ದೃಶ್ಯವಾಗಿದೆ. ಈ ಕಾರಣಗಳಿಂದ ಸಾವಿರಾರು ಕುರಿಗಳಿದ್ದ ಹಟ್ಟಿ, ಪಾಳ್ಯ, ತಾಂಡ್ಯಗಳು, ನೂರಾರು ಕುರಿಗಳ ಪೋಷಣೆಗೆ ಸೀಮಿತಗೊಳ್ಳುತ್ತಿವೆ. ನೂರಾರು ಕುರಿಗಳನ್ನು ಸಾಕುತ್ತಿದ್ದವನು, ಹತ್ತಾರು ಕುರಿಗಳೇ ಸಾಕೆನ್ನುತ್ತಿದ್ದಾನೆ.

ಈ ಹತ್ತಾರು ಆಡು–ಕುರಿಗಳನ್ನು ಆಧುನಿಕ ರೀತಿಯಲ್ಲಿ ಸಾಕಾಣಿಕೆ ಮಾಡಬೇಕಾದ ತುರ್ತು ಇಂದಿನ ಕುರಿಗಾರನಿಗೆ ಅನಿವಾರ್ಯವಾಗಿದೆ.

ಸರ್ಕಾರದ ಪಾಲಿಸಿ ಆಡಿಕೆ ವಿರುದ್ಧವಾಗಿದೆ. ಯಾವುದೇ ಬ್ಯಾಂಕ್ ಆಡಿನ ಸಾಕಾಣಿಕೆಗೆ ಸಾಲ ನೀಡುವುದಿಲ್ಲ. ಆಡು ಕಾಡಿನ ಮೊದಲ ಶತ್ರು ಎನ್ನುತ್ತಿದೆ ಫಾರೆಸ್ಟ್ ಇಲಾಖೆ. ಆದರೆ ಆಡಿನ ಗರ್ಭಧಾರಣಾ ಶಕ್ತಿ ಅಸಾಧಾರಣ. ಒಂದು ವರ್ಷಕ್ಕೆ ಎರಡು ಸೂಲಿನಂತೆ, ನಾಲ್ಕು ಮರಿಗಳನ್ನು ನೀಡುತ್ತದೆ. ಹಂದನಕೆರೆಯ ಗವಿರಂಗಯ್ಯ ಕೇವಲ ಮೂರು ಆಡುಗಳನ್ನು ಸಾಕಿ ಒಂದು ಕುಟುಂಬವನ್ನು ನಿರ್ವಹಣೆ ಮಾಡುತ್ತಿದ್ದಾನೆ. ಅವನ ಒಂದು ಆಡು ಪ್ರತಿ ಸೂಲಿನಲ್ಲಿಯೂ ನಾಲ್ಕು ಮರಿಗಳನ್ನು ಈಯುತ್ತದೆ. ಹಾಗಾಗಿ ವರ್ಷಕ್ಕೆ ಎಂಟು ಮರಿಗಳನ್ನು ಆ ಆಡಿನಿಂದಲ್ಲೇ ಪಡೆಯುತ್ತಿದ್ದಾನೆ. ಆಡಿನಲ್ಲಿರುವ ಈ ಸಕಾರಾತ್ಮಕ ಅಂಶವನ್ನು ನಾವು ದುಡಿಸಿಕೊಳ್ಳಬೇಕಾಗಿದೆ. ಹಾಗೆಯೇ ಆಡು ಕಾಡಿನ ಕಡುವೈರಿಯಾಗದಂತೆ ಸಾಕಾಣಿಕೆ ಮಾಡಲೇಬೇಕು. ಈ ಎಲ್ಲಾ ಅಂಶಗಳನ್ನು ಗಮನದಲ್ಲಿ ಇಟ್ಟುಕೊಂಡು ನಾವೀಗ ಒಂದು ವಿನೂತನವಾದ, ವಿಶಿಷ್ಟವಾದ ಆಡು ಕುರಿ ಸಾಕಾಣಿಕೆ ಕ್ರಮದ ಬಗ್ಗೆ ಇನ್ನಾದರೂ ಚರ್ಚೆ ಆರಂಭ ಮಾಡೋಣ.

ನಮ್ಮಲ್ಲಿ ತೀರಾ ಸಣ್ಣ ರೈತನ ಜಮೀನಿನಲ್ಲಿಯೂ ಮೂಲೆಮುಡುಕುಗಳನ್ನು ಸೇರಿಸಿ ಒಂದರ್ಧ ಎಕರೆ ಬೀಳು ನೆಲವಿರುತ್ತದೆ. ಇದು ತಗ್ಗುದಿಣ್ಣೆಯ ಜಾಗ ಇರಬಹುದು. ಚೌಳಿನ

ಹಳ್ಳಕೊಳ್ಳ, ಕಡಗಿನ ದಂಡೆಯಾಗಿರಬಹುದು. ಆ ನೆಲದಿಂದ ಮೂರ್ನಾಲ್ಕು ಚೀಲ ರಾಗಿ ಸಿಗಬಹುದು. ಅಂಥ ಬೀಳು ನೆಲದಲ್ಲಿ ಅಗಸೆ, ಚೊಗಚೆ, ಗ್ಲಿರಿಸಿಡಿಯಾ(ಗೊಬ್ಬರದ ಗಿಡ) ಹಾಲುವಾಣ ಸುಬಾಬುಲ್, ಬಾಗೆ, ಕೊಂಡಮಾವು, ಬಸವನಪಾದ, ನುಗ್ಗೆ, ಕ್ಯಾಲಿಯಾಂಡ್ರಾ ಮುಂತಾದ ಮೇವಿನ ಮರಗಳನ್ನು ನಾಲ್ಕು ಅಡಿಗಳ ಅಂತರದಲ್ಲಿ ಹಾಕಬೇಕು. ಹಾಲುವಾಣ ಕೊಂಡಮಾವು, ಬಾಗೆ, ನುಗ್ಗೆ, ಸುಬಾಬುಲ್ ಮುಂತಾದವನ್ನು ಬದಿಗೆ, ಬೇಲಿಗೆ ಹಾಕಿ ಜೀವಂತ ಬೇಲಿ ನಿರ್ಮಾಣ ಮಾಡಬಹುದು. ಮುಖ್ಯವಾಗಿ ಅಗಸೆ ಬೀಜಗಳನ್ನು ಸಾಲಿನಿಂದ ಸಾಲಿಗೆ ನಾಲ್ಕು ಅಡಿ ಅಂತರದಲ್ಲಿ ಗಿಡದಿಂದ ಗಿಡಕ್ಕೆ ಒಂದೆರಡು ಅಡಿಗಳ ಅಂತರದಲ್ಲಿ ಬಿತ್ತಬೇಕು. ಎರಡುಸಾಲು ಗೆಯ್ದು, ಭರಣಿ ಮಳೆಯಲ್ಲಿ ನೇಗಿಲ ಗೆರೆಗೆ ಬೀಜಗಳನ್ನು ಉದುರಿಸಿಕೊಂಡು ಹೋದರೆ ಸಾಕು. ಅವು ಮುಂದಿನ ಬೇಸಿಗೆಗೆ ಬಲವಾಗಿ ಬಂದು ಯಾವುದೇ ನೀರನ್ನು ಬೇಡುವುದಿಲ್ಲ.

ಬೀಜ ಬಿತ್ತುವ ಮುನ್ನ ನೇಗಿಲ ಗೆರೆಗೆ ಒಂದೆರಡು ತಟ್ಟಿ ದನಗಳ ಗೊಬ್ಬರ ಕೊಟ್ಟರೆ ಸಾಕು. ಇನ್ಯಾವುದೇ ವಿಶೇಷ ಆರೈಕೆ ಬೇಡ. ಆರು ತಿಂಗಳಿನ ಅಗಸೆ ಮತ್ತು ಇತರೆ ಗಿಡಗಳಲ್ಲಿ ಮೇವು ಮುರಿಯಬಹುದು. ಅವುಗಳನ್ನು ಒಂದಾಳುದ್ದ (ಆರು ಅಡಿ) ಬಿಟ್ಟುಕೊಂಡರೆ ಸಾಕು. ಪ್ರತಿ ೪೫ ದಿನಗಳಿಗೊಮ್ಮೆ ಆಡು ಕುರಿಗಳಿಗೆ ಸೊಪ್ಪನ್ನು ಮುರಿಯುತ್ತಾ ಹೋಗಬಹುದು.

ಅಗಸೆ ಪೌಷ್ಟಿಕವಾದ ಆಹಾರ, ಇದರಲ್ಲಿ ಜಂತುನಾಶಕ ಶಕ್ತಿಯೂ ಇರುವುದರಿಂದ ಆಡು-ಕುರಿಗಳನ್ನು ಬೇಗ ಬೆಳವಣಿಗೆ ಹೊಂದುತ್ತವೆ. ಒಟ್ಟು ಗಿಡಗಳಲ್ಲಿ ಅರ್ಧದಷ್ಟನ್ನು ಅಗಸೆಗೆ ಮೀಸಲಿಡಬೇಕು. ಇನ್ನುಳಿದ ಅರ್ಧ ಪ್ರದೇಶದಲ್ಲಿ ಉಳಿದೆಲ್ಲಾ ಮೇವಿನ ಗಿಡಗಳನ್ನು ಹಾಕಬಹುದು. ಆದರೆ ಮೇವನ್ನು ಮುರಿಯುವಾಗ ಎಲ್ಲಾ ತರದ ಜೊತೆಯಲ್ಲಿ ಅಗಸೆಯನ್ನು ಹೆಚ್ಚು ಪ್ರಮಾಣದಲ್ಲಿ ಮುರಿಯಬೇಕು. ಹೀಗೆ ಸಮತೋಲನ ಕಾಪಾಡಿಕೊಳ್ಳಬೇಕು.

ಅರ್ಧ ಎಕರೆಯಲ್ಲಿ ಮೇವಿನ ಗಿಡಗಳನ್ನು ಬೆಳೆದು ರೈತ ಹತ್ತು ಆಡು, ಒಂದು ಹೋತ ಅಥವಾ ಹತ್ತು ಕುರಿ ಒಂದು ಟಗರುಗಳನ್ನು ಕಟ್ಟಿ ವರ್ಷವೆಲ್ಲಾ ಮೇಯಿಸಬಹುದು. ಇದರ ನಡುವಿನ ನೆಲದಲ್ಲಿ ಹುರುಳಿ, ಓಟ್ಸ್, ಕುದುರೆ ಮಸಾಲೆ ಮುಂತಾದ ಬೀಜಗಳನ್ನು ಬಿತ್ತಿ ಬೆಳೆಸಿ ಮೇಯಿಸಬಹುದು. ಒಂದೆರೆಡು ಕೆ.ಜಿ. ಮೇವನ್ನು ತಿನ್ನಲು ಮೈಲು ತಿರುಗಬೇಕಾದ ಆಡು-ಕುರಿಗಳು ಈ ಕಟ್ಟಿ ಸಾಕುವ ವ್ಯವಸ್ಥೆಯಲ್ಲಿ ಮೂರ್ನಾಲ್ಕು ಕೆ,ಜಿ, ಪೌಷ್ಟಿಕವಾದ ಹಸಿರುಮೇವು ಪಡೆಯುತ್ತವೆ. ಆದ್ದರಿಂದ ಆರು ತಿಂಗಳ ಆಡಿನ ಮರಿಗಳು ೨೦ ಕೆ.ಜಿ. ಗಿಂತಲೂ ಹೆಚ್ಚು ತೂಗುತ್ತವೆ. ಸರಾಸರಿ ಎರಡು ಸಾವಿರ ರೂಪಾಯಿಗಳಿಗೆ ಅವುಗಳನ್ನು ಮಾರಬಹುದು. ಹತ್ತು ಆಡುಗಳಿಂದ ೩೫ರಿಂದ ೪೦ ಮರಿಗಳು ಬಂದರೆ ಅವುಗಳು ನಿಮಗೆ ಐವತ್ತರಿಂದ ಅರುವತ್ತು ಸಾವಿರ ರೂಪಾಯಿ ಆದಾಯ ತರಬಲ್ಲವು. ಕುರಿಗಳು ಎರಡು ವರ್ಷಕ್ಕೆ ಮೂರು ಮರಿಗಳನ್ನು ನೀಡುವುದರಿಂದ ವಿಶೇಷ ಬಂಡವಾಳ ಖರ್ಚು ಇರದ ಕಾರಣ, ಇದೆಲ್ಲಾ ನಿಮಗೆ ಲಾಭದಾಯಕವಾಗಿ ಕಂಡುಬರುತ್ತದೆ.

ಇದೆಲ್ಲಕಿಂತ ಮುಖ್ಯವಾಗಿ ಬರಡು ಭೂಮಿಯ ಫಲವತ್ತತೆಗೆ ರಾಮಬಾಣ ಅಗಸೆ ಗಿಡಗಳು ಮಲ್ಲಿಗೆರೆಯಲ್ಲಿ ಹನ್ನೊಂದು ತಿಂಗಳು ಹಿಂದೆ ಅಗಸೆ ಹಾಕಿದಾಗ ಅದು ಕೇವಲ ಚೌಳು ಭೂಮಿಯಾಗಿತ್ತು. ಇಂದು ಅಲ್ಲಿ ಎಲ್ಲಾ ಹುಲ್ಲು ಬೆಳೆದು ಹಸಿರೇ ಉಕ್ಕುತ್ತಿದೆ. ಆ ತುಂಡು  ಭೂಮಿಯಲ್ಲಿ ಇದರ ಬಗ್ಗೆ ಹೆಮ್ಮೆಯಿಂದ ಹೇಳಿಕೊಳ್ಳುವ ಹೊಯ್ಸಳಕಟ್ಟೆಯ ಶಿವಣ್ಣ ಇವುಗಳನ್ನು ತೆಂಗಿನಮರಗಳ ನಡುವೆ ಮೂರು ಸಾಲಿನಲ್ಲಿ ಹಾಕಿದರೆ, ತೆಂಗಿನ ಗಿಡಗಳೂ ಸಹ ಚೆಂದಾಗಿರುತ್ತವೆ ಎಂದು ಸ್ಪಷ್ಟತೆಯಿಂದ ಆತ್ಮವಿಶ್ವಾಸದಿಂದ ಮಾತನ್ನು ಮುಂದುವರೆಸುತ್ತಾರೆ.

ಅದಿರಲಿ, ಕೆಂಪು ಮೂತಿ ಹುಳ, ಕಪ್ಪೆ ತಲೆಹುಳ, ನುಸಿ, ಹಣಬೆ ರೋಗ ಮುಂತಾದ ಮೂಲವ್ಯಾಧಿಗಳ ಜೊತೆ ಆಧುನಿಕ ವ್ಯಾದಿಗಳೂ ಕಾಡುತ್ತಿರುವ ತೆಂಗಿಗೆ ನಮ್ಮ ರೈತ ಅತಿಯಾದ ಪ್ರಾಮುಖ್ಯತೆ ಕೊಡುತ್ತಿದ್ದಾನೆ. ತೆಂಗಿನ ಗಿಡಗಳ ಒಂದೆಕರೆಯಲ್ಲಿ  ಅವನು ಪಡೆಯುತ್ತಿರುವ ಆದಾಯ ಎಲ್ಲರಿಗೂ ಗೊತ್ತಿದೆ. ಆದರೆ ರೈತ ಇಂದು ಉಪಕಸುಬುಗಳನ್ನು  ಮರೆಯುತ್ತಿದ್ದಾನೆ. ಅವನಿಗೆ ಎದ್ದು ನಿಲ್ಲುವ ಶಕ್ತಿ ಕೊಡುವುದು ನಮ್ಮ ಪರಂಪರೆಯ ಕಸುಬುಗಳು ಮಾತ್ರ ಹಿಂದೆ ಚೀಲದಲ್ಲಿ ಒಣಗಿಸಿದ ಜಾಲಿಕಾಯಿಗಳನ್ನು ಸಂಗ್ರಹಿಸಿಟ್ಟು, ಇಡೀ ವರ್ಷ ಜಾಲಿಕಾಯಿಗಳನ್ನು ತಿನ್ನಿಸಿ, ಆಡು-ಕುರಿಗಳು ನೆಗೆದಾಡುವಂತೆ ಸಾಕುತ್ತಿದ್ದರು. ಈಗ ಕುಲಮೂಲದ ಕಸುಬುಗಳನ್ನು ತೊರೆದು ತುಂಡುಭೂಮಿಯ ಒಡೆಯ ಬೆಂಗಳೂರು ಸಿಟಿಗೆ ಗುಳೆ ಹೊರಟಿದ್ದಾನೆ. ಅವನಿಗೆ ಇದು ಹೇಳಿ ಮಾಡಿಸಿದ ವೃತ್ತಿ. ಇಡೀ ದಿನ ಆಡು-ಕುರಿ ಕಾಯುತ್ತಲೇ ಇರಬೇಕಾದ ಪ್ರಮೇಯ ಇಲ್ಲ. ತನ್ನ ಇತರ ಕೆಲಸಗಳನ್ನು ಮಾಡಿಕೊಂಡೇ ಮನೆಯಲ್ಲಿರುವ ಹೆಂಗಸರು ಈ ಕಾಯಕವನ್ನು ಮಾಡುತ್ತಾ ಹೋಗಬಹುದು. ಕುರಿ ಕುಂದಣವು ಮರಿ ಮಾಣಿಕ್ಯವು ಕುರಿ ಸಾಕಿ ಕುಬೇರರಾಗಿ ಎಂಬ ಪರಂಪರೆಯ ಮಾತಿನ ಮುತ್ತನ್ನು ಆಧುನಿಕತೆಯ ಕುಲುಮೆಯಲ್ಲಿ ಕಾಯಿಸಿ, ಇಂದಿನ ಫ್ಯಾಷನ್ನಿಗೆ ಹೊಂದುವ ಒಡವೆ ಮಾಡಿಕೊಳ್ಳಬೇಕಲ್ಲವೇ ?

❑



## ಗವಿರಂಗಯ್ಯನ ಆಡು-ಪಾಡು

**ಮೊ**ನ್ನೆ ಆಸ್ಪತ್ರೆಯಲ್ಲಿ ಕುರಿ, ಮೇಕೆಗಳಿಗೆ ಎರಗಿದ ಮಹಾಮಾರಿ ಪಿ.ಪಿ.ಆರ್ ಎಂಬ ಹೊಸರೋಗದ ಬಗ್ಗೆ ಮಾತಾಡುತ್ತಿದ್ದೆ. ಅದರಲ್ಲೂ ಸಬ್ಬೇನಹಳ್ಳಿಯ ಜನ ಮುಂಜಾಗ್ರತೆ ವಹಿಸದೆ ಬಹಳ ಆಡುಗಳನ್ನು ಕಳಕೊಂಡಿದ್ದ ಕತೆ ಬಿಚ್ಚಿಕೊಳ್ಳತೊಡಗಿತು. ಆಗ ಅಲ್ಲಿಗೆ ಬಂದ ರೈತ ನನಗೆ ಪರಿಚಯವಿಲ್ಲದಿದ್ದರೂ ನೋಡೇ ಇರದ ವ್ಯಕ್ತಿಯಲ್ಲ. ನಾನು ಸಿದ್ಧಪ್ಪನ ಬೆಟ್ಟದ ಬಾರೆ ಮೇಲೆ ಹೋಗೋವಾಗಲೆಲ್ಲಾ ಆತ ಮೂರು ಆಡುಗಳಿಗೆ ರೋಟಿ ಕಡ್ಡಿಯಲ್ಲಿ ಸೊಪ್ಪು ಎಳೆಯುವುದನ್ನು ಕಂಡಿದ್ದೆ. ಆಸ್ಪತ್ರೆಗೆ ಯಾವತ್ತೂ ಬರದ ಮನುಷ್ಯ ಇಂದು ಬಂದು ಆಡುಗಳು ಕೆಮ್ಮುತ್ತಿರುವುದನ್ನು ವಿವರಿಸಿದ. ಇಡೀ ಹಂದನಕೆರೆಯಲ್ಲಿ ಎಲ್ಲಾ ಕುರಿ-ಮೇಕೆಗಳಿಗೆ ಪಿ.ಪಿ.ಆರ್ ವ್ಯಾಕ್ಸಿನೇಷನ್ ಮಾಡಿದರೂ ಈ ಗವಿರಂಗಯ್ಯ ಮಾಡಿಸಿಕೊಂಡಿರಲಿಲ್ಲ. ಅದರ ಬಗ್ಗೆ ಬೇಸರ ವ್ಯಕ್ತಪಡಿಸಿ ಅವನ ಮನೆಯತ್ತ ಹೊರಟೆ.

ಸುಬಾಬುಲ್, ಗೊಬ್ಬರದ ಗಿಡ, ಹಾಲುವಾಣ, ಟೊಗಟೆ, ನುಗ್ಗೆ ಮುಂತಾದ ಮರಗಳಿದ್ದ ಹಿತ್ತಲಿನಲಿ ಮೂರು ಆಡುಗಳು ಇದ್ದವು. ಅವುಗಳಿಗೆ ಸೂಕ್ತ ಚಿಕಿತ್ಸೆ ನೀಡದೆ ಕೇವಲ ಮೂರು ಆಡುಗಳನ್ನು ಮಾತ್ರ ಇಟ್ಟುಕೊಂಡಿದ್ದರ ಬಗ್ಗೆ ವಿಚಾರಿಸಿ, ಜಾಸ್ತಿ ಆಡುಗಳನ್ನು ಸಾಕಲು ಹೇಳಿದೆ. ಆಗ ಗವಿರಂಗಯ್ಯ ತನ್ನ ವಿಶಿಷ್ಟ

ರೀತಿಯ ಸಾಕಾಣಿಕೆಯನ್ನು, ಅದರಲ್ಲೂ ಮನೆಯಲ್ಲಿ ಸಾಕಿದ ಒಂದು ಆಡಿನ ಕತೆಯನ್ನು ಹೇಳಿದ.

ಗವಿರಂಗಯ್ಯ ಐದಾರು ವರ್ಷದ ಹಿಂದೆ ಒಂದು ಆಡನ್ನು ಕೊಂಡ. ಅದು ಒಂದು ಸೂಲಿಗೆ ನಾಲ್ಕು ಮರಿಗಳಂತೆ ಒಂದು ವರ್ಷಕ್ಕೆ ಎರಡು ಸೂಲಿನಂತೆ ಹದಿನೇಳು ಸೂಲು ಹಾಕುತ್ತಾ ಬಂತು. ಐದಾರು ತಿಂಗಳಿನವರೆಗೆ ಮಾತ್ರ ಮರಿಗಳನ್ನು ಸಾಕಿ ಒಂದು ಸಾವಿರ ರೂಪಾಯಿಗೆ ಮೇಲ್ಪಟ್ಟು ಮಾರುತ್ತಾನೆ. ಆಡುಗಳನ್ನು ಹೆಚ್ಚಿಗೆ ಮಾಡಿಕೊಳ್ಳುವುದಿಲ್ಲ. ಕೇಳಿದರೆ ಹಾರೈಕೆ ಕಡಿಮೆಯಾಗುತ್ತದೆ ಎನ್ನುತ್ತಾನೆ.

ಒಂದು ದಿನಕ್ಕೆ ಒಂದು ಕೆ.ಜಿ.ಹಿಂಡಿಯನ್ನು ನೆನೆಹಾಕಿ, ಹಿಂಡಿ ನೀರನ್ನು ಕೊಡುತ್ತಾನೆ. ಹಾಗಾಗಿ ಅವು ಹೊರಗಡೆ ನೀರನ್ನೇ ಕುಡಿಯುವುದಿಲ್ಲ. ಒಂದು ಆಡು ವಯಸ್ಸಾಗಿ ಸತ್ತ ನಂತರ ಮಣ್ಣು ಮಾಡಿದ. ನಂತರ ಈಗ ಆ ಆಡಿನ ಮೂರು ಮರಿಗಳನ್ನು ಸಾಕಿದ್ದಾನೆ. ಅವು ಸೂಲಿಗೆ ಮೂರು ಮರಿಗಳನ್ನು ಕೊಡುತ್ತವೆ.ಒಂದು ದಿನಕ್ಕೆ ಒಂದು ಕೆ.ಜಿ.ಹಿಂಡಿಯನ್ನು ನೆನೆಹಾಕಿ, ಹಿಂಡಿ ನೀರನ್ನು ಕೊಡುತ್ತಾನೆ. ಹಾಗಾಗಿ ಅವು ಹೊರಗಡೆ ನೀರನ್ನೇ ಕುಡಿಯುವುದಿಲ್ಲ.

ಹೀಗೆ ಅವನು ಆ ಆಡಿನ ಆದಾಯದಲ್ಲಿ ಕಟ್ಟಿಸಿದ ಮನೆಯನ್ನು ತೋರಿಸಿದ. ತನ್ನ ಭಾಗಕ್ಕೆ ಬಂದ ಹದಿನೆಂಟು ತೆಂಗಿನ ಗಿಡಗಳ ಜೊತೆಗೆ, ಇನ್ನೂ ಹದಿನೆಂಟು ತೆಂಗಿನ ಗಿಡಗಳನ್ನು ಕೊಂಡು ಈಗ ಟೌನ್‌ನಲ್ಲಿ ಕೋಳಿ ಕತ್ತರಿಸಿರುವ ಅಂಗಡಿಯ ಪಾಲುದಾರನಾಗಿದ್ದಾನೆ. ತನ್ನ ತೋಟದ ತುಂಬೆಲ್ಲಾ ತರಾವರಿ ಮರಗಳನ್ನು ಹಾಕಿ, ಸೊಪ್ಪನ್ನು ಯಥೇಚ್ಛವಾಗಿ ಆಡುಗಳಿಗೆ ತಿನ್ನಲು ಹಾಕುತ್ತಾನೆ.

ನೂರು ಗಿಡಗಳನ್ನು ನೆಡಿಸಿ, ಹತ್ತು ಗಿಡಗಳನ್ನು ತನ್ನ ಮರಮುಟ್ಟು, ಸೌದೆ–ಸೊಪ್ಪುಗಳಿಗೆ ಉಪಯೋಗಿಸಿಕೊಳ್ಳಲು ಪ್ರೋತ್ಸಾಹ ಕೊಡಬೇಕಾದ ಅರಣ್ಯ ನೀತಿ ಇಲ್ಲದ ಕಾರಣ ಆಡು ಅರಣ್ಯ ಇಲಾಖೆಗೆ ನಿಷಿದ್ಧ ಪ್ರಾಣಿ. ಮಾಡಲೂ ಆರ ತಿನ್ನಲೂ ಆರ ಎನ್ನುವ ಪರಿಸರ ಪ್ರೇಮಿಗಳಿಗೆ ಆಡು ಅಸ್ಪೃಶ್ಯ ಪ್ರಾಣಿ. ಕುರಿಗಳು ಗೊಲ್ಲರ, ಕುರುಬರ ಒಡನಾಡಿಗಳು. ಈ ಆಡುಗಳು ಅಸ್ಪೃಶ್ಯರ, ದಲಿತರ ಬದುಕು. ಈ ಆಡುಗಳನ್ನು ನೂರಾರು ಸಂಖ್ಯೆಗಳಲ್ಲಿ ಸಾಕುವುದು ಕಷ್ಟಸಾಧ್ಯವಾದ ಕೆಲಸ.

ಹೀಗೆಲ್ಲಾ ಧೇನಿಸುತ್ತಾ, ಗವಿರಂಗಸ್ವಾಮಿ ಒಕ್ಕಲಾದ ಗವಿರಂಗಯ್ಯನ ಕೃಷಿ ಕಾಡಿನಲ್ಲಿ ತೊನೆಯುತ್ತಿರುವ ಮರಗಳ ನೆರಳಿನಲ್ಲಿ ಕುಳಿತುಬಿಟ್ಟೆ.

❑